# ರಾಜಕೀಯ ವಿಜ್ಞಾನದ ಅಧ್ಯಯನ ಮತ್ತು ಅಧ್ಯಾಪನ

Stephen L. Schechter with Jonathan S. Weil

**ಚಟುವಟಿಕೆಗಳ ಪಟ್ಟಿ**

ನಿಯತಕಾಲಿಕ ಪತ್ರಿಕೆಯ ಬರವಣಿಗೆ
ಉದಾಹರಣೆ ಮತ್ತು ಉದಾಹರಣೆರಹಿತ ವ್ಯಾಖ್ಯಾನಗಳನ್ನು ರೂಪಿಸುವುದು
ವೈಯಕ್ತಿಕ ಅನುಭವಗಳ ಆಧಾರದ ವ್ಯಾಖ್ಯಾನವೊಂದರ ವಿಕಸನ
ಮೂಲ ಆಧಾರದ ವಿಶ್ಲೇಷಣೆ
ಸಂಶೋಧನಾ ಯೋಜನೆಯೊಂದನ್ನು ರೂಪಿಸುವುದು
ಶಾಸಕಾಂಗದ ವಿಚಾರಣೆಯ ಅನುಕರಣೆ
ಸುದ್ದಿಪ್ರಕಟಣೆಯ ಹಲಗೆ(bulletin board)ಯ ವಿನ್ಯಾಸ
ಚರ್ಚೆ
ನಿರ್ಧಾರ ಕೈಗೊಳ್ಳುವಿಕೆಯ ಪ್ರಯೋಗ
ರಾಜಕೀಯ ವಿಜ್ಞಾನದ ಪಠ್ಯವೊಂದನ್ನು ವಿನ್ಯಾಸಗೊಳಿಸುವುದು

ಚಟುವಟಿಕೆ

ರಾಜಕೀಯ ವಿಜ್ಞಾನ ಮತ್ತು ಸಾಮಾಜಿಕ ಅಧ್ಯಯನಗಳ ಅಧ್ಯಾಪನ

ಅಧ್ಯಾಯ 2ರಲ್ಲಿ, ಡಾನ್ ಬ್ರಾಗಾ, ಶಿಕ್ಷಣ ಪದದ ವಿಶಾಲವಾದ ಅರ್ಥದಲ್ಲಿ, ಪ್ರಜೆಗಳನ್ನು ಶಿಕ್ಷಿತರನ್ನಾಗಿ ಮಾಡುವುದು ಸಾಮಾಜಿಕ ಅಧ್ಯಯನಗಳ ಗುರಿಯಾಗಿರಬೇಕೆಂದು ಭಾವಪೂರ್ಣವಾಗಿ ನಿವೇದಿಸಿದ್ದಾನೆ. ರಾಜಕೀಯದ ವೈಜ್ಞಾನಿಕ ಅಧ್ಯಯನವಾಗಿ ರಾಜಕೀಯ ವಿಜ್ಞಾನವು ಪ್ರಜೆಗಳು ಕಾರ್ಯಶೀಲವಾಗಿರತಕ್ಕ ಪ್ರಾಥಮಿಕ ವಲಯಗಳಲ್ಲಿನ ಒಂದು ವಲಯವನ್ನು ಕುರಿತು ವ್ಯವಹರಿಸುತ್ತದೆ. ರಾಜಕೀಯ ವಿಜ್ಞಾನದ ಬಗ್ಗೆ ನಿಮಗೆ ಗೊತ್ತಿರುವುದರ ಹಿನ್ನೆಲೆಯಲ್ಲಿ ಪ್ರಜೆಗಳ ಶಿಕ್ಷಣ ಮತ್ತು ರಾಜಕೀಯ ವಿಜ್ಞಾನದ ನಡುವಿನ ಸಂಬಂಧವನ್ನು ಕುರಿತು ಪರ್ಯಾಲೋಚಿಸಿ. ನಂತರ ನಿಮ್ಮ ನಿಯತಕಾಲಿಕೆಯಲ್ಲಿ ಒಂದು ಕಂಡಿಕೆಯನ್ನು ಹೀಗೆ ಪ್ರಾಂಭಿಸಿ: ಸಾಮಾಜಿಕ ಅಧ್ಯಯನಗಳಿಗೆ ರಾಜಕೀಯ ವಿಜ್ಞಾನವು ನೀಡುವ ಕೊಡುಗೆ ಎಂದರೆ. . .

ಪ್ರವೇಶಿಕೆ

ರಾಜಕೀಯ ವಿಜ್ಞಾನವನ್ನು ಸರಳವಾಗಿ ರಾಜಕೀಯದ ವೈಜ್ಞಾನಿಕ ಅಧ್ಯಯನ ಎಂದು ವ್ಯಾಖ್ಯಾನಿಸಲಾಗಿದೆ. ಆದರೆ ರಾಜಕೀಯ ಎಂದರೇನು ಅದನ್ನು ಹೇಗೆ ಅಧ್ಯಯನ ಮಾಡಬೇಕು? ಆಧುನಿಕ ಬದುಕಿನ ಪ್ರತಿಯೊಂದು ಶತಮಾನವೂ ಕೂಡ ಈ ಪ್ರಶ್ನೆಗಳಿಗೆ ತನ್ನದೇ ಆದ ಉತ್ತರವನ್ನು ನೀಡಿದೆ.

ಹದಿನೇಳನೆ ಶತಮಾನದಲ್ಲಿ, ರಾಜಕೀಯವು ಆಧುನಿಕ ಪ್ರಭುತ್ವವನ್ನು ಸೃಷ್ಟಿಸುವುದರ ಕಡೆಗೆ ತನ್ನ ಗಮನವನ್ನು ಕೇಂದ್ರೀಕರಿಸಿತ್ತು. ಥಾಮಸ್ ಹಾಬ್ಸ್ ಮತ್ತು ಜಾನ್ ಲಾಕ್‌ನ ಪ್ರಭಾವದಿಂದ ಆಧುನಿಕ ಕಾಲದಲ್ಲಿ ಪ್ರಭುತ್ವದ ಸ್ವರೂಪ, ವ್ಯಕ್ತಿ ಮತ್ತು ಪ್ರಭುತ್ವದ ನಡುವಿನ ಸಂಬಂಧ, ಮತ್ತು ಪ್ರಭುತ್ವದೊಳಗಿನ ಪರಮಾಧಿಕಾರದ ಸ್ವರೂಪವನ್ನು ಕುರಿತ ತಾತ್ವಿಕ ಶೋಧನೆಯು ರಾಜಕೀಯ ವಿಜ್ಞಾನದ ಕೇಂದ್ರ ವಿಷಯವಾಗಿತ್ತು. ಹದಿನೆಂಟನೆ ಶತಮಾನದಲ್ಲಿ ಗಣರಾಜ್ಯ ಸರ್ಕಾರದ ಸ್ಥಾಪನೆಯು ರಾಜಕೀಯದ ಕೇಂದ್ರಸ್ಥ ವಿಷಯವಾಗಿತ್ತು. ಜೇಮ್ಸ್ ಮ್ಯಾಡಿಸನ್ ಮತ್ತು ಅಲೆಕ್ಸಾಂಡರ್ ಹ್ಯಾಮಿಲ್ಟನ್ ಸ್ವತಂತ್ರ ಜನರು ಹೇಗೆ ಜನಾನುರಾಗಿ ಪರಮಾಧಿಕಾರವನ್ನು ಆಧರಿಸಿದ ಒಂದು ಸಾಂವಿಧಾನಿಕ ಸರಕಾರಿ ವ್ಯವಸ್ಥೆಯನ್ನು ಸೃಷ್ಟಿಸುತ್ತಾರೆ ಎಂಬುದರ ಅಧ್ಯಯನಕ್ಕೆ ಸಂಬಂಧಿಸಿದ "ನವ ರಾಜಕೀಯ ವಿಜ್ಞಾನ" ವನ್ನು ಕುರಿತು ಮಾತನಾಡಿದ್ದರು. ಹತ್ತೊಂಬತ್ತನೆ ಶತಮಾನದಲ್ಲಿ ರಾಜಕೀಯ ಮತ್ತು ಅದರ ಅಧ್ಯಯನವು ರಾಜಕೀಯ ವ್ಯವಸ್ಥೆಗಳ ಸೃಜನೆಯ ಸ್ಥಿತಿಯಿಂದ ಅವುಗಳ ಮುಂದುವರಿಯುವಿಕೆ ಮತ್ತು ಆಂತರಿಕ ಕಾರ್ಯನಿರ್ವಹಣೆಯ ಕಡೆಗೆ ಸ್ಥಿತ್ಯಂತರವಾಯಿತು. ಶತಮಾನದ ಉತ್ತರಾರ್ಧದಲ್ಲಿ ಬದಲಾಗುತ್ತಿರುವ ರಾಜಕೀಯ ಆದ್ಯತೆಗಳು ಮತ್ತೊಮ್ಮೆ ರಾಜಕೀಯ ಮತ್ತು ರಾಜಕೀಯ ವಿಜ್ಞಾನವನ್ನು ಪುನರ್ನಿರ್ದೇಶಿಸಿದವು - ಈ ಬಾರಿ ಅದು ಹೊಸ ನಗರ-ಕೈಗಾರಿಕಾ ಸಾಮಾಜಿಕ ವ್ಯವಸ್ಥೆಯ ಸವಾಲುಗಳಿಗೆ ಪ್ರತಿಸ್ಪಂದಿಸಲು ಸರಕಾರಗಳ ಸುಧಾರಣೆ ಮತ್ತು ಸಬಲೀಕರಣದ ಅವಶ್ಯಕತೆಗೆ ಸಂಬಂಧಿಸಿದುದಾಗಿತ್ತು.

ಇಪ್ಪತ್ತನೆ ಶತಮಾನದಲ್ಲಿ, ರಾಜಕೀಯ ಮತ್ತು ರಾಜಕೀಯ ವಿಜ್ಞಾನವು ಸರಕಾರಕ್ಕೆ ಮಹತ್ವವನ್ನು ಕೊಡುವುದರ ಬದಲಿಗೆ ವ್ಯಕ್ತಿಗೆ ಮಹತ್ವವನ್ನು ನೀಡುವ ಕಡೆಗೆ ಸ್ಥಿತ್ಯಂತರಗೊಂಡಿತು. ರಾಜಕೀಯ ಮತ್ತು ರಾಜಕೀಯ ವಿಜ್ಞಾನ ಇವೆರಡನ್ನೂ ಪ್ರತ್ಯೇಕ ಮತ್ತು ವಿಶಿಷ್ಟ ಅನ್ವೇಷಣೆಗಳಾಗಿ ನೋಡಲಾಯಿತು. ರಾಜಕೀಯ ನಾಯಕರುಗಳು ತಮ್ಮನ್ನು ರಾಜಕೀಯದ ಹೊಸ ವಿಜ್ಞಾನವನ್ನು ಆಚರಣೆಗೆ ತರುವ ರಾಜಕೀಯ ವಿಜ್ಞಾನಿಗಳು ಎಂದು ಗುರುತಿಸಿಕೊಳ್ಳುವುದನ್ನು ನಿಲ್ಲಿಸಿದರು. ಹೆರಾಲ್ಡ್ ಲಾಸ್‌ವೆಲ್‌ನ ಪುಸ್ತಕದ ಉಪಶೀರ್ಷಿಕೆಯಾದ ಪೊಲಿಟಿಕ್ಸ್: ಹೂ ಗೆಟ್ಸ್ ವಾಟ್, ವೆನ್, ಹೌ? ಎನ್ನುವ ವರ್ತನೆಗೆ ಸಂಬಂಧಿಸಿದ ಪ್ರಶ್ನೆಯಿಂದ ಮಾರ್ಗದರ್ಶನ ಪಡೆದ ರಾರಾಜಕೀಯ ವಿಜ್ಞಾನವು ಒಂದು ಸಾಮಾಜಿಕ ವಿಜ್ಞಾನದ ರೂಪ ತಳೆಯಿತು. ಸರಕಾರದ ಅಧ್ಯಯನದಿಂದ ವ್ಯಕ್ತಿಯ ಅಧ್ಯಯನಕ್ಕೆ ಒಂದು ದೊಡ್ಡ ಮಟ್ಟದ ಸ್ಥಿತ್ಯಂತರಗೊಂಡ ನಂತರ ರಾಜಕೀಯ ವಿಜ್ಞಾನವು ರಾಜಕೀಯ ಸಂಸ್ಥೆಗಳ ಅಧ್ಯಯನಕ್ಕೆ ನೀಡುತ್ತಿದ್ದ ಮಹತ್ವವನ್ನು ರಾಜಕೀಯ ವರ್ತನೆಯ ಅಧ್ಯಯನಕ್ಕೆ ನೀಡತೊಡಗಿತು.

ಇಪ್ಪತ್ತೊಂದನೆ ಶತಮಾನದ ಹೊಸ್ತಿಲಲ್ಲಿ ರಾಜಕೀಯ ವಿಜ್ಞಾನವು ನೀಡುತ್ತಿದ್ದ ಮಹತ್ವದ ವಿಷಯದಲ್ಲಿ ಮತ್ತೊಂದು ಸ್ಥಿತ್ಯಂತರವಾಗಿದೆ - ಈ ಬಾರಿ ಅದು ರಾಜಕೀಯ ವರ್ತನೆಯ ಅಧ್ಯಯನದಿಂದ ರಾಜಕೀಯ ನಿರ್ಧಾರ ಕೈಗೊಳ್ಳುವಿಕೆಯತ್ತ ಬದಲಾಗಿದೆ. ಲಾಸ್‌ವೆಲ್‌ನ ಪರಿಭಾಷೆಯಲ್ಲಿ ಹೇಳುವುದಾದರೆ ಈ ಸ್ಥಿತ್ಯಂತರವು "ಯಾರು, ಏನು,ಯಾವಾಗ, ಹೇಗೆ ಪಡೆಯುತ್ತಾರೆ" ಎನ್ನುವುದಕ್ಕಿಂತ "ಏಕೆ ಮತ್ತು ಎಂತಹ ಪರಿಣಾಮಕ್ಕಾಗಿ" ಎನ್ನುವುದಕ್ಕೆ ಒತ್ತು ನೀಡುವುದಾಗಿದೆ. ವರ್ತನೋತ್ತರ ಯುಗವೆಂದು ಕರೆಯಲಾಗುವ ಕಾಲದಲ್ಲಿ ರಾಜಕೀಯ ವಿಜ್ಞಾನಿಗಳು ಮೌಲ್ಯಗಳ, ಗುಣಾತ್ಮಕ ನಿರ್ಣಯಗಳ, ಮತ್ತು ರಾಜಕೀಯದ ಗುರಿಗಳನ್ನು ಕುರಿತ ಕಾಳಜಿಗಳು ರಾಜಕೀಯ ವಿಜ್ಞಾನದ ನ್ಯಾಯಸಮ್ಮತವಾದ ಪರಿಗಣನೆಗಳು ಎಂದು ಒಪ್ಪಿಕೊಳ್ಳತೊಡಗಿದ್ದಾರೆ.

ಆಧುನಿಕ ರಾಜಕೀಯ ಮತ್ತು ರಾಜಕೀಯ ವಿಜ್ಞಾನದ ಈ ಎಲ್ಲ ಬದಲಾವಣೆಯ ಅಲೆಗಳು ಆಧುನಿಕ ಪಾಶ್ಚಾತ್ಯ ಚಿಂತನೆ ಮತ್ತು ಮಾನವ ಸ್ವಾತಂತ್ರ್ಯ ಮತ್ತು ಸಮಾಜದ ಒಳಿತಿನ ನಡುವೆ ಸಮತೋಲನ ಕಂಡುಕೊಳ್ಳುವ ಅಗತ್ಯದ

ಬಗ್ಗೆ ಅದರ ತನ್ಮಯತೆಯ ಮಹಾ ಸಾಗರದ ಒಂದು ಭಾಗವೇ ಆಗಿವೆ. ಮಹತ್ವವನ್ನು ನೀಡುವಲ್ಲಿನ ಪ್ರತ್ಯೇಕ ಕ್ರಮಿಕ ಪರಿವರ್ತನೆಯು ತನ್ನ ಪೂರ್ವವರ್ತಿಗಳ ನಿಟ್ಟಿನಲ್ಲಿ ನಿರ್ಮಿತಗೊಂಡಿದೆಯೇ ಹೊರತು ಪ್ರತಿಸ್ಥಾಪಿತ(replace)ವಲ್ಲ. ಪರಿಣಾಮವಾಗಿ, ರಾಜಕೀಯ ವಿಜ್ಞಾನವು ರಾಜಕೀಯ ತತ್ವಶಾಸ್ತ್ರ, ಸಾಂವಿಧಾನಿಕ ಕಾನೂನು, ಅಮೇರಿಕಾದ ಸರಕಾರ, ಸಾರ್ವಜನಿಕ ಆಡಳಿತ, ರಾಜಕೀಯ ವರ್ತನೆ, ಮತ್ತು ಸಾರ್ವಜನಿಕ ನೀತಿ ಇವೆಲ್ಲವನ್ನೂ ಒಳಗೊಂಡ ಕ್ಷೇತ್ರ ಮತ್ತು ದೃಷ್ಟಿಕೋನಗಳ ವೈವಿಧ್ಯಮಯ ವಿಷಯವೆನಿಸಿದೆ. ಎಲ್ಲವೂ ತಮ್ಮ ತಮ್ಮ ಕ್ಷೇತ್ರದಲ್ಲಿ ಸಮಾನ ದೃಷ್ಟಿಕೋನಗಳು ಮತ್ತು ಅನ್ವೇಷಣೆಯ ಕ್ಷೇತ್ರಗಳಾಗಿ ವ್ಯವಸ್ಥಿತಗೊಂಡಿವೆ.

ರಾಜಕೀಯ ಅಧ್ಯಯನಕ್ಕೆ ನಿಷ್ಠವಾಗಿರುವ ಮತ್ತು ಅದೇ ಸಮಯದಲ್ಲಿ ಸಾಮಾಜಿಕ ಅಧ್ಯಯನಗಳ ಶಿಕ್ಷಣಕ್ಕೆ ಸಂಗತವಾಗಿರುವ ರೀತಿಯಲ್ಲಿ ಸಾಮಾಜಿಕ ಅಧ್ಯಯನಗಳ ಶಿಕ್ಷಕರಿಗೆ ರಾಜಕೀಯ ಅಧ್ಯಯನಕ್ಕೆ ಒಂದು ಪ್ರವೇಶಿಕೆಯನ್ನು ಒದಗಿಸಿಕೊಡುವುದು ಈ ಅಧ್ಯಾಯದ ಉದ್ದೇಶವಾಗಿದೆ. ಈ ದಿಕ್ಕಿನಲ್ಲಿ ಸಾಗುವ ಉದ್ದೇಶದಿಂದ ರಾಜಕೀಯವನ್ನು ಸಾರ್ವಜನಿಕ ಆಯ್ಕೆಗಳನ್ನು ಮಾಡುವ ವಿಧಾನವೆಂದೂ ಮತ್ತು ಸಾರ್ವಜನಿಕ ಆಯ್ಕೆಗಳನ್ನು ಹೇಗೆ ಮಾಡಲಾಗುತ್ತದೆ, ಯಾರಿಂದ ಮತ್ತು ಯಾವ ಪರಿಣಾಮಗಳೊಂದಿಗೆ ಎನ್ನುವ ಅಧ್ಯಯನವನ್ನು ರಾಜಕೀಯ ವಿಜ್ಞಾನವೆಂದು ವ್ಯಾಖ್ಯಾನಿಸಲಾಗಿದೆ.

ನಮ್ಮ ದೃಷ್ಟಿಕೋನವು ಪರಿಕಲ್ಪನಾತ್ಮಕ ಸ್ವರೂಪದ್ದಾಗಿದೆ. ಇದು ರಾಜಕೀಯ ಅಧ್ಯಯನದಲ್ಲಿರುವ ಸಾರ್ವಜನಿಕ ಆಯ್ಕೆ, ಅಧಿಕಾರ, ಮತ್ತು ನ್ಯಾಯವೆಂಬ ಮೂರು ಪ್ರಮುಖ ಪರಿಕಲ್ಪನೆಗಳನ್ನು ಕೇಂದ್ರವಾಗಿಟ್ಟುಕೊಂಡಿದೆ. ನಂತರ ನಾವು ಸಾಂವಿಧಾನಿಕ ಸರಕಾರ ಮತ್ತು ಅದರ ಸಂಸ್ಥೆಗಳೊಂದಿಗೆ ಈ ಪರಿಕಲ್ಪನೆಗಳ ಸಂಬಂಧವನ್ನು ಪರಿಶೀಲಿಸುತ್ತೇವೆ. ಅಂತಿಮವಾಗಿ, ರಾಜಕೀಯ ಮತ್ತು ಅದರೊಟ್ಟಿಗಿನ ಸಾರ್ವಜನಿಕ ನೀತಿಯ ಆಯ್ಕೆಯಂತಹ ರಾಜಕೀಯದೊಂದಿಗೆ ಅನೂಚಾನವಾಗಿ ಬಂದಿರುವ ಮೂರು ಚರ್ಚಾಂಶಗಳಲ್ಲಿ - ದುರ್ಲಭ ಸಂಪನ್ಮೂಲಗಳ ಹಂಚುವಿಕೆ (ವಿತರಣಾ ನೀತಿ ಆಯ್ಕೆಗಳು), ಮಾನವ ವರ್ತನೆಯ ನಿಯಂತ್ರಣ (ನಿಯಂತ್ರಣಾ ನೀತಿ ಆಯ್ಕೆಗಳು), ಮತ್ತು ರಾಷ್ಟ್ರೀಯ ಹಿತಾಸಕ್ತಿಯ ರಕ್ಷಣೆ (ವಿದೇಶಾಂಗ ನೀತಿ ಆಯ್ಕೆಗಳು), - ಈ ಪರಿಕಲ್ಪನೆಗಳ ಅನ್ವಯಿಸುವಿಕೆಯನ್ನು ಚರ್ಚಿಸುತ್ತೇವೆ.

ಸಾಮಾಜಿಕ ಅಧ್ಯಯನಗಳನ್ನು ಕಲಿಸುವ ಬಹಳಷ್ಟು ಜನರು ವಸ್ತುತಃ ರಾಜಕೀಯ ವಿಜ್ಞಾನವನ್ನು ಭೋಧಿಸುವುದಿಲ್ಲ. ಬದಲಿಗೆ, ಇತಿಹಾಸ, ಸರಕಾರ, ಅಥವಾ ಪೌರನೀತಿಯನ್ನು ಕಲಿಸುತ್ತಾರೆ. ಈ ಅಧ್ಯಾಯದಲ್ಲಿ ನಾವು ಮಂಡಿಸುವ ಪರಿಕಲ್ಪನೆಗಳು ರಾಜಕೀಯ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಕಲಿಸಲು ಒಂದು ಸಾಧನವಾಗುತ್ತದೆ ಎಂದು ನಾವು ನಂಬುತ್ತೇವೆ.

ಪರಿಕಲ್ಪನೆಗಳು ಮನಸ್ಸಿನ ಮಹಾನ್ ಸಂಯೋಜಕಗಳಲ್ಲಿ ಒಂದೆನಿಸಿವೆ. ಸಾಮಾಜಿಕ ಅಧ್ಯಯನಗಳಿಗೆ ಪರಿಕಲ್ಪನೆಗಳು, ಅವುಗಳ ಅಂತರ್ಗತವಾದ ಅಮೂರ್ತ ಮತ್ತು ತುಲನಾತ್ಮಕ ಸ್ವರೂಪಗಳಿಂದಾಗಿ, ವಿಶೇಷವಾಗಿ ಸಂಗತವಾಗಿವೆ. ವಿಭಿನ್ನ ಕಾಲ ಮತ್ತು ಜನರ ಕುರಿತು ವಿದ್ಯಾರ್ಥಿಗಳಿಗೆ ನಿರಂತರವಾಗಿ ಮಾಹಿತಿಯನ್ನು ನೀಡುತ್ತಾ ಅವನ್ನು ಅವರದೇ ಆದ ಬದುಕಿಗೆ ಸಂಪರ್ಕಿಸುವಂತೆ ಹೇಳಲಾಗುತ್ತದೆ. ಅಧಿಕಾರ ಮತ್ತು ನ್ಯಾಯದಂತಹ ಪರಿಕಲ್ಪನೆಗಳು ವಿದ್ಯಾರ್ಥಿಗಳಿಗೆ ವಿಭಿನ್ನ ಐತಿಹಾಸಿಕ ಅವಧಿಗಳ ಸಂಸ್ಕೃತಿಗಳ ನಡುವೆ ತುಲನೆ ಮಾಡುವ ಸಾಮರ್ಥ್ಯವನ್ನು ನೀಡುತ್ತವೆ.

ಇತಿಹಾಸ ಮತ್ತು ಪೌರನೀತಿಯ ಕಲಿಕೆಯಲ್ಲಿ ಸಾರ್ವಜನಿಕ ಆಯ್ಕೆಯ ಪರಿಕಲ್ಪನೆಯು ಎರಡು ವಿಧದಲ್ಲಿ ಸಂಗತವಾಗಿದೆ. ಇದು ವಿವಿಧ ಕಾಲ ಮತ್ತು ಸಂಸ್ಕೃತಿಗಳಾದ್ಯಂತ ಕಂಡುಬಂದ ರಾಜಕೀಯ ವರ್ತನೆಗಳನ್ನು ಮತ್ತು ರಾಜಕೀಯ ಸಂಸ್ಥೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಹೋಲಿಕೆ ಮಾಡಲು ಒಂದು ಸಮರ್ಥ ಸಂಘಟನ ಸಾಧನವಾಗುತ್ತದೆ ಮಾತ್ರವಲ್ಲ ಇದು ವಿದ್ಯಾರ್ಥಿಗಳು ಶಾಲೆಯಲ್ಲಿ ಗಳಿಸಿಕೊಳ್ಳಬೇಕು ಎಂದು ನಿರೀಕ್ಷಿಸಲಾಗುವ "ಜೀವನ ಕೌಶಲ್ಯ"ವೂ ಹೌದು. ಇತರರು ಮಾಡುವ ನಿರ್ಣಯಗಳ ಮೌಲ್ಯಮಾಪನಕ್ಕೆ ಬಳಸಬಹುದಾದ ಮಾನದಂಡಗಳಿಗೆ ಮತ್ತು ವಿದ್ಯಾರ್ಥಿಗಳ ನಿರ್ಣಯ-ಕೈಗೊಳ್ಳುವಿಕೆಯ ಕೌಶಲ್ಯದ ಉತ್ತಮಪಡಿಸುವಿಕೆಗೆ ಈ ಅಧ್ಯಾಯವು ಒತ್ತು ನೀಡುತ್ತದೆ.

ಚಟುವಟಿಕೆ

ಸಾರ್ವಜನಿಕ ಆಯ್ಕೆಗಳನ್ನು ಗುರುತಿಸುವುದು

ಈ ಕೆಳಗೆ ವಿವರಿಸಲಾಗಿರುವ ಆಯ್ಕೆಗಳಲ್ಲಿ ಪ್ರತಿಯೊಂದೂ ಸಹ ಸಾರ್ವಜನಿಕ ಆಯ್ಕೆಯಾಗಿದೆಯೆ ಎನ್ನುವುದನ್ನು ಸೂಚಿಸಿ. ನಿಮ್ಮ ಪ್ರತಿಕ್ರಿಯೆಯನ್ನು ವಿಶ್ಲೇಷಿಸಿ ಮತ್ತು ಪ್ರತಿಕ್ರಿಯೆಗೆ ನೀವು ಉಪಯೋಗಿಸಿರುವ ಮಾನದಂಡವನ್ನು ಒಳಗೊಂಡಿರುವಂತೆ ಸಾರ್ವಜನಿಕ ಆಯ್ಕೆಯ ಒಂದು ವ್ಯಾಖ್ಯಾನವನ್ನು ರೂಪಿಸಿ.

--- ಗವರ್ನರ್ ಸ್ಮಿತ್ ರಾಷ್ಟ್ರೀಯ ರಕ್ಷಣಾಪಡೆಗೆ ಮುಷ್ಕರವನ್ನು ಅಡಗಿಸುವಂತೆ ಕರೆ ನೀಡಿದನು.
--- ಜಾನ್ ವಾಷಿಂಗ್‌ಟನ್ ಕ್ರಿಪ್ಸ್ ಅನ್ನು ಸೇರಲು ನಿರ್ಧರಿಸುತ್ತಾನೆ.
--- ಯುನೈಟೆಡ್ ಏರ್‌ಲೈನ್ಸ್ ವಿಮಾನಯಾನ ದರವನ್ನು ಶೇಕಡ 30ರಷ್ಟು ಇಳಿಸಲು ನಿರ್ಧರಿಸಿತು.
---ರೊಕ್ಸೆನ್ ಕೋಲ್ ತನ್ನ ಮತವನ್ನು ಬಿಲ್ ಕ್ಲಿಂಟನ್‌ಗೆ ಹಾಕಲು ತೀರ್ಮಾನಿಸುತ್ತಾಳೆ
---ಎನ್.ಆರ್.ಎ., ರಾಜ್ಯದ ರಾಜಧಾನಿಯ ಮೆಟ್ಟಿಲಿನಲ್ಲಿ ಸಮಾನ ಮನಸ್ಕರ ಗುಂಪನ್ನು ಆಯೋಜಿಸಲು ನಿರ್ಧರಿಸಿದೆ.
---ಮ್ಯಾಕ್‌ಡೊನಲ್ಡ್ ಹೆಚ್ಚು ಮರುಬಳಕೆ ಮಾಡಬಲ್ಲ ವಸ್ತುಗಳನ್ನು ಉಪಯೋಗಿಸಲು ನಿರ್ಧರಿಸಿದೆ.
---ಕೌಟುಂಬಿಕ ರಜೆ ಮಸೂದೆಯನ್ನು ಕಾಂಗ್ರೆಸ್ ಅಂಗೀಕರಿಸುತ್ತದೆ.
---ಒಂದು ವರ್ಷ ದೂರದರ್ಶನವನ್ನು ನೋಡುವುದಿಲ್ಲವೆಂದು ಸ್ಮಿತ್ ಕುಟುಂಬವು ನಿರ್ಧರಿಸಿದೆ.

ಸಾರ್ವಜನಿಕ ಆಯ್ಕೆ

ಸಾರ್ವಜನಿಕ ಆಯ್ಕೆಯನ್ನು ವ್ಯಾಖ್ಯಾನಿಸುವುದು.

ರಾಜಕೀಯವನ್ನು ಅರ್ಥಮಾಡಿಕೊಳ್ಳುವಲ್ಲಿ ಸಾರ್ವಜನಿಕ ಆಯ್ಕೆಯನ್ನು ಯಾರು ಮಾಡುತ್ತಾರೆ ಎನ್ನುವುದು ಒಂದು ಅಂಶವಾಗಿದೆ. ಖಂಡಿತವಾಗಿ, ಸಾರ್ವಜನಿಕ ಅಧಿಕಾರಿಗಳು ತಮಗೆ ದತ್ತವಾಗಿರುವ ಅಧಿಕಾರದಿಂದ ತೆಗೆದುಕೊಳ್ಳುವ ಸಾರ್ವಜನಿಕ ನೀತಿಯ ನಿರ್ಧಾರಗಳು ಸಾರ್ವಜನಿಕ ಆಯ್ಕೆಗಳು ಎನಿಸಿಕೊಳ್ಳುತ್ತವೆ, ಆದರೆ ಅದಕ್ಕಿಂತಲೂ ವಿಶಾಲ

ವ್ಯಾಪ್ತಿಯ ಪಾತ್ರದಾರಿಗಳು ಸಾರ್ವಜನಿಕ ಆಯ್ಕೆಯನ್ನು ಮಾಡುವ ಕಾರ್ಯದಲ್ಲಿ ತೊಡಗಿರುತ್ತಾರೆ. ಪ್ರಜೆಗಳು ಚುನಾವಣೆಯಲ್ಲಿ ತಮಗೆ ಬೇಕಾದ ಅಭ್ಯರ್ಥಿಗೆ ಮತ ನೀಡುವಾಗ ಸಾರ್ವಜನಿಕ ಆಯ್ಕೆಗಳನ್ನು ಮಾಡುತ್ತಿರುತ್ತಾರೆ. ಪ್ರಜೆಗಳಾಗಿ, ಅಥವಾ ಇತರ ಸಾರ್ವಜನಿಕ ಅಧಿಕಾರಿಗಳಾಗಿ ತಮ್ಮ ಅಧಿಕಾರಿಕ ಕ್ಷಮತೆಯಲ್ಲಿ ಕಾರ್ಯನಿರ್ವಹಿಸದಿರುವಾಗಲೂ ಸಹ ವ್ಯಕ್ತಿಗಳು ಸಾರ್ವಜನಿಕ ಆಯ್ಕೆಗಳನ್ನು ಮಾಡುತ್ತಿರುತ್ತಾರೆ. ಕಾರ್ಪೋರೇಟ್ ಘಟಕಗಳೂ ಕೂಡ ಸಾರ್ವಜನಿಕ ಆಯ್ಕೆಯನ್ನು ಮಾಡುತ್ತವೆ. ಸಾರ್ವಜನಿಕ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ನಾಮನಿರ್ದೇಶನ ಮಾಡುವಾಗ ರಾಜಕೀಯ ಪಕ್ಷಗಳು ಸಾರ್ವಜನಿಕ ಆಯ್ಕೆಯನ್ನು ಮಾಡುತ್ತಿರುತ್ತವೆ. ಸಾರ್ವಜನಿಕ ಅಧಿಕಾರಿಗಳ ಮೇಲೆ ಅಥವಾ ಸಾರ್ವಜನಿಕ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರಲು ಯತ್ನಿಸಿದಾಗ ಒತ್ತಡ ಗುಂಪುಗಳು ಸಾರ್ವಜನಿಕ ಆಯ್ಕೆಗಳಲ್ಲಿ ತೊಡಗಿರುತ್ತವೆ. ಖಾಸಗಿ ಸಂಸ್ಥೆಗಳು ಸಾರ್ವಜನಿಕ ಹಣಕಾಸಿನ ಮೇಲೆ ಮಹತ್ವಪೂರ್ಣ ಪ್ರಭಾವವನ್ನು ಬೀರಿದಾಗ ಸಂಸ್ಥೆಗಳು ಸಾರ್ವಜನಿಕ ಆಯ್ಕೆಯನ್ನು ಮಾಡಬಹುದಾಗಿದೆ.. 1990ರಲ್ಲಿ ಇರಾಕ್ ಕುವೈತ್‌ನ್ನು ಆಕ್ರಮಿಸಿಕೊಂಡಾಗ ತೈಲ ಕಂಪನಿಗಳು ತಕ್ಷಣವೇ ಪೆಟ್ರೋಲ್ ಬೆಲೆಯನ್ನು ಏರಿಸಿದ್ದು ಇದಕ್ಕೊಂದು ಉದಾಹರಣೆಯಾಗಿದೆ.



ಕುಟುಂಬದ ಖರೀದಿ ನಿರ್ಧಾರಗಳು ಸಾರ್ವಜನಿಕ ಆಯ್ಕೆಯಾಗಿರುತ್ತವೆಯೆ? ಹೌದಾದರೆ, ಯಾವಾಗ?

ಸಾರ್ವಜನಿಕ ಆಯ್ಕೆಗಳನ್ನು ಹೇಗೆ ಮಾಡಲಾಗುತ್ತದೆ ಎನ್ನುವುದೂ ಕೂಡ ರಾಜಕೀಯ ವ್ಯಾಖ್ಯಾನದ ಒಂದು ಪ್ರಮುಖ ಅಂಶವಾಗಿದೆ. ರಾಜಕೀಯ ಎನ್ನುವುದು ಮನುಷ್ಯರ ನಿರ್ಧಾರಗಳನ್ನು ಒಳಗೊಂಡಿರುತ್ತದೆ - ಅದು ವ್ಯಕ್ತಿಗತವಾದುದಾಗಿರಲಿ ಅಥವಾ ಸಾಮೂಹಿಕವಾದುದಾಗಿರಲಿ. ಆಂಡ್ರ್ಯೂ ಚಂಡಮಾರುತ ಅಥವಾ 1994ರಲ್ಲಾದ ಕ್ಯಾಲಿಫೋರ್ನಿಯ ಭೂಕಂಪ ಇವು ರಾಜಕೀಯವಲ್ಲ ಆದರೆ ಅಂತಹ ದುರಂತಗಳಿಗೆ ಪ್ರತಿಸ್ಪಂದನಗಳಲ್ಲಿ

ಖಂಡಿತವಾಗಿ ರಾಜಕೀಯವಿದೆ. ಹಣದುಬ್ಬರದಂತಹ ಆರ್ಥಿಕ ಬೆಳವಣಿಗೆಗಳು ರಾಜಕೀಯವಲ್ಲ, ಆದರೆ ಹಣದುಬ್ಬರವನ್ನು ಉಂಟುಮಾಡಿದ ಸಾರ್ವಜನಿಕ ಆಯ್ಕೆಗಳು ಮತ್ತು ಅದಕ್ಕೆ ತೋರುವ ಪ್ರತಿಸ್ಪಂದನೆಯು ಖಂಡಿತವಾಗಿಯೂ ರಾಜಕೀಯವನ್ನು ಒಳಗೊಂಡಿರುತ್ತವೆ.

ಸಾರ್ವಜನಿಕ ಆಯ್ಕೆಗಳನ್ನು ಏಕೆ ಮಾಡಲಾಗುತ್ತದೆ ಎನ್ನುವುದು ರಾಜಕೀಯದ ಎರಡು ಮುಖ್ಯ ಗುರಿಗಳತ್ತ ನಮ್ಮನ್ನು ಕೊಂಡೊಯ್ಯುತ್ತದೆ: ಅಧಿಕಾರ ಮತ್ತು ನ್ಯಾಯ. ಇತರರು ಮಾಡಿದ ಸಾರ್ವಜನಿಕ ಆಯ್ಕೆಗಳನ್ನು ಬದಲಿಸುವ ಸಾಮರ್ಥ್ಯವು ರಾಜಕೀಯ ಅಧಿಕಾರ ಎನಿಸಿಕೊಳ್ಳುತ್ತದೆ. ಅದರ ಪ್ರಕ್ರಿಯೆ ಹಾಗೂ ಪರಿಣಾಮಗಳ ದೃಷ್ಟಿಯಿಂದ ಸಾರ್ವಜನಿಕ ಆಯ್ಕೆಯು ಎಷ್ಟು ಸರಿಯಾಗಿದೆ ಎಂದು ನೋಡುವುದು ನ್ಯಾಯ ಎನಿಸಿಕೊಳ್ಳುತ್ತದೆ. ಅಧಿಕಾರ ಮತ್ತು ನ್ಯಾಯದ ಅನ್ವೇಷಣೆಯ ಪ್ರಚೋದನೆಯೆ ಬಹಳಷ್ಟು ವ್ಯಕ್ತಿಗಳು ರಾಜಕೀಯವನ್ನು ಏಕೆ ಪ್ರವೇಶ ಮಾಡುತ್ತಾರೆ ಮತ್ತು ಅದರಲ್ಲೆ ಉಳಿಯುತ್ತಾರೆ ಎನ್ನುವುದಕ್ಕೆ ವಿವರಣೆಯಾಗಿದೆ ಎನ್ನುವುದು ಈ ಅಧ್ಯಾಯದ ಕೇಂದ್ರ ವಿಷಯವಾಗಿದೆ. ಈ ಎರಡು ಪರಿಕಲ್ಪನೆಗಳು ನಾವು ರಾಜಕೀಯ ಎಂದು ಗುರುತಿಸುವ ಮಾನವ ಕ್ರಿಯಾಕ್ಷೇತ್ರವನ್ನು ನಿರ್ಧರಿಸುವ ಗಡಿರೇಖೆಗಳಾಗಿವೆ. ಹಾಗಾಗಿ ಈ ಅಧ್ಯಾಯದ ಕೊನೆಯಲ್ಲಿ ಪ್ರತಿ ಪರಿಕಲ್ಪನೆಗೂ ಒಂದೊಂದು ವಿಭಾಗವನ್ನು ಮೀಸಲಿಟ್ಟಿದ್ದೇವೆ.

ಒಂದು ನಿರ್ಣಯದ ಪರಿಣಾಮಗಳು ಅದರ 'ಸಾರ್ವತ್ರಿಕತ್ವ'ದ ಅಂತಿಮ ಪರೀಕ್ಷೆಯಾಗಿರುತ್ತದೆ. ಅಂತಿಮವಾಗಿ, ಆಯ್ಕೆಗಳನ್ನು ನಾವು 'ಸಾರ್ವಜನಿಕ' ಎಂದು ಗುರುತಿಸುವುದು ಅವುಗಳನ್ನು ಸಾರ್ವಜನಿಕ ಅಧಿಕಾರಿಗಳು ಮಾಡುತ್ತಾರೆಂದಾಗಲಿ ಅಥವಾ ಅಂತಹ ನಿರ್ಧಾರಗಳನ್ನು 'ಸಾರ್ವತ್ರಿಕಗೊಳಿಸಲಾಗಿದೆ' (ಅಂದರೆ ಪ್ರಕಟಿಸುವುದು) ಎನ್ನುವ ಕಾರಣಕ್ಕಾಗಲಿ ಅಲ್ಲ, ಬದಲಿಗೆ ಅಂತಹ ನಿರ್ಣಯಗಳು ಅಥವಾ ಆಯ್ಕೆಗಳು "ಸಾರ್ವಜನಿಕ"ರ ಮೇಲೆ ಪರಿಣಾಮ ಬೀರುತ್ತವೆ ಎನ್ನುವ ಕಾರಣಕ್ಕಾಗಿ ಅವು ಸಾರ್ವಜನಿಕ ಎನಿಸಿಕೊಳ್ಳುತ್ತವೆ. ಆದರೆ "ಸಾರ್ವಜನಿಕ" ಎಂದರೇನು?

ಶಾಸ್ತ್ರೀಯ ಪರಿಭಾಷೆಯಲ್ಲಿ 'ಸಾರ್ವಜನಿಕ' ಎಂದರೆ ರಾಜಕೀಯ ವ್ಯವಸ್ಥೆಯ ಎಲ್ಲ ಸದಸ್ಯರುಗಳು ಎಂದರ್ಥ. ಪ್ರಾಚೀನ ಗ್ರೀಕ್ ಮತ್ತು ರೋಮ್‌ನಲ್ಲಿ ಸಾರ್ವಜನಿಕ ಮತ್ತು ಸಾರ್ವಜನಿಕ ಒಳಿತ(ರೆಸ್ ಪಬ್ಲಿಕ, ನಂತರ "ರಿಪಬ್ಲಿಕ್")ನ್ನು ಗುರುತಿಸುವುದು ಹೆಚ್ಚುಕಡಮೆ ಸರಳವಾಗಿತ್ತು. ಪ್ರತಿಯೊಂದು ನಗರವು (ಅದರ ಹೊರವಲಯದಲ್ಲಿರುವ ಕೃಷಿಭೂಮಿಯನ್ನೂ ಸೇರಿ) ಒಂದು ಸಂಪೂರ್ಣ ಪೊಲಿಸ್ (ಅಂದರೆ, ಒಂದು ರಾಜಕೀಯ ವ್ಯವಸ್ಥೆ, ನಗರ ಸಮಾಜ, ಅಥವಾ ದೇಶ) ಆಗಿತ್ತು. ಪೊಲಿಸ್‌ಗೆ ಒಂದು ಸರಕಾರವಿತ್ತು, ರಾಜಕೀಯ ವ್ಯವಸ್ಥೆಯ ಈ ಘಟಕವು ಒಬ್ಬನ, ಅಥವಾ ಕೆಲವರ, ಅಥವಾ ಬಹಸಂಖ್ಯೆಯ ಜನರ ಆಳ್ವಿಕೆಯನ್ನು ಆಧರಿಸಿರಬಹುದು. ನೂರಾರು, ಸಾವಿರಾರು ನಿವಾಸಿಗಳನ್ನು ಹೊಂದಿದ್ದ ಪೊಲಿಸ್, ಹೆಚ್ಚುಕಡಮೆ ಒಂದೇ ತೆರನ ಜನಸಂಖ್ಯೆಯನ್ನು ಹೊಂದಿತ್ತು. ಆದರೆ ಜನಸಂಖ್ಯೆಯ ಆ ರಾಜಕೀಯ ವರ್ಗವು ವಯಸ್ಕರು, ಸ್ಥಳೀಯರು, ಮತ್ತು ಸ್ವತಂತ್ರ ಪುರುಷರಿಗೆ ಮಾತ್ರ ಸೀಮಿತವಾಗಿದ್ದ ಕಾರಣ, ಪೊಲಿಸ್‌ನಲ್ಲಿದ್ದ ಪ್ರಜೆಗಳ ಸಂಖ್ಯೆ ತುಂಬಾ ಕಡಿಮೆ ಇತ್ತು. ವಾಸ್ತವದಲ್ಲಿ ಗುಲಾಮ ಪದ್ಧತಿಯನ್ನು ಅವಲಂಬಿಸಿದ್ದ ಮತ್ತು ಮಹಿಳೆಯರ ಮತ್ತು ವಿದೇಶಿಯರ ವಿರುದ್ಧ ರಾಜಕೀಯ ಪಕ್ಷಪಾತವನ್ನು ಹೊಂದಿದ್ದ ಒಂದು ಸಮಾಜದ ಈ ಚಿಕ್ಕ ಮತ್ತು ಒಂದೇ ತೆರನ ಪ್ರಜಾಸಮೂಹವು ವ್ಯಾವಹಾರಿಕವಾಗಿ "ಸಾರ್ವಜನಿಕ" ವೆನಿಸಿಕೊಳ್ಳುತ್ತಿತ್ತು.

ಆಧುನಿಕ ರಾಜಕೀಯ ವ್ಯವಸ್ಥೆ ಅತ್ಯಂತ ಹೆಚ್ಚು ಸಂಕೀರ್ಣವಾಗಿದೆ. ಅಮೇರಿಕಾ ವ್ಯವಸ್ಥೆಯಲ್ಲಿ ಜನರಿಗೆ ಆಳ್ವಿಕೆ ನಡೆಸುವ ಅಧಿಕಾರವಿದೆ. ಬದಲಿಗೆ ಅವರು ಸರಕಾರಿ ಅಧಿಕಾರವನ್ನು ಪ್ರತ್ಯೇಕವಾದ ರಾಷ್ಟ್ರ, ರಾಜ್ಯ, ಮತ್ತು ಸ್ಥಳೀಯ ಸರಕಾರಗಳಿಗೆ ವಹಿಸಿಕೊಡುತ್ತಾರೆ. ಈ ಸರಕಾರಗಳು ಒಟ್ಟಾಗಿ ದೇಶದ ಸಾರ್ವಜನಿಕ ವಲಯವನ್ನು ರಚಿಸುತ್ತವೆ, ಆದರೆ ಇತರ ವಲಯಗಳು ಮತ್ತು ವಿವಿಧ ಸಮುದಾಯಗಳು ಮತ್ತು ಗುಂಪುಗಳೂ ಇವೆ. ಇಂತಹ ಸಂಕೀರ್ಣ ರಾಜಕೀಯ ವ್ಯವಸ್ಥೆಯಲ್ಲಿ ಹಲವು ಸಾರ್ವಜನಿಕಗಳಿರುವುದು ಸಾಧ್ಯವಿದೆ. ಆದ್ದರಿಂದ, ಆಧುನಿಕ ಪರಿಭಾಷೆಯಲ್ಲಿ ಸಾರ್ವಜನಿಕವನ್ನು ನಾವು ಹೀಗೆ ವ್ಯಾಖ್ಯಾನಿಸಬಹುದು: "ಒಂದು ರಾಜಕೀಯ ವ್ಯವಸ್ಥೆಯ ಅಥವಾ ಸ್ಥಳೀಯ ಸಮುದಾಯದ ಅಥವಾ ರಾಜಕೀಯ ವ್ಯವಸ್ಥೆಯೊಳಗಿರುವ ರಾಜಕೀಯವಾಗಿ ಮಹತ್ವವಾಗಿರುವ ಕ್ಷೇತ್ರದ ಎಲ್ಲ ಸದಸ್ಯರು." ನಂತರ ನಾವು ಸಾರ್ವಜನಿಕ ಕಲ್ಯಾಣದ ಮೇಲೆ ಪರಿಣಾಮ ಬೀರುವ ಯಾವುದೇ ಆಯ್ಕೆಯನ್ನು ಸಾರ್ವಜನಿಕ ಆಯ್ಕೆ ಎಂದು ವ್ಯಾಖ್ಯಾನಿಸಬಹುದು.

ಸಾರ್ವಜನಿಕ ಆಯ್ಕೆ ಮತ್ತು ಪ್ರಜೆಗಳು

ನಮ್ಮ ಬದುಕುಗಳನ್ನು ನಾವು ಹೇಗೆ ಬದುಕಲು ಬಯಸುತ್ತೇವೆ ಎನ್ನುವುದರ ಬಗ್ಗೆ ನಾವೆಲ್ಲರೂ ವೈಯಕ್ತಿಕವಾದ ಆಯ್ಕೆಗಳನ್ನು ಮಾಡುತ್ತೇವೆ. ಬೇರೆಯರಿಗೆ ನಾವು ಹೇಗೆ ಕಾಣಿಸಿಕೊಳ್ಳಬೇಕು, ಬದುಕಿನ ಅಡ್ಡಿ ಆತಂಕಗಳನ್ನು ಹೇಗೆ ಎದುರಿಸಬೇಕು, ನಮ್ಮ ಕಲಿಕೆಯನ್ನು ನಾವು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕು, ಸಂಕಷ್ಟಗಳನ್ನು ಮತ್ತು ಪ್ರಚೋದನೆಗಳೊಂದಿಗೆ ನಾವು ಹೇಗೆ ವ್ಯವಹರಿಸಬೇಕು, ಇತರರೊಂದಿಗೆ ಎಂತಹ ಸಂಬಂಧವನ್ನು ಹೊಂದಬಯಸುತ್ತೇವೆ ಎನ್ನುವುದನ್ನು ನಾವು ನಿರ್ಧರಿಸುತ್ತೇವೆ.

ಕೆಲವು ವೈಯಕ್ತಿಕ ಆಯ್ಕೆಗಳೂ ಕೂಡ ಸಾರ್ವಜನಿಕ ಪರಿಣಾಮಗಳನ್ನು ಉಂಟುಮಾಡುತ್ತವೆ. ಅನುಭೋಗಿಗಳಾಗಿ ನಮ್ಮ ವ್ಯಕ್ತಿಗತ ನಿರ್ಧಾರಗಳು ನಾವು ಖರೀದಿಸುವ ಅಥವಾ ತಿರಸ್ಕರಿಸುವ ವಸ್ತುಗಳ ನಿಟ್ಟಿನ ಬೆಲೆಗಳು ಮತ್ತು ಲಾಭಗಳ ಪರಿಣಾಮಗಳಿಗಿಂತಲೂ ಹೆಚ್ಚಿನ ಸಂಚಿತ (cumulative ) ಪರಿಣಾಮವನ್ನು ಬೀರುತ್ತವೆ. ವಾಹನಗಳು ಮತ್ತು ಮನೆಯನ್ನು ಬೆಚ್ಚಗಿಡುವ ಉದ್ದೇಶಕ್ಕಾಗಿ ಇಂಧನದ ಕೊಳ್ಳುವಿಕೆಯನ್ನು ಕನಿಷ್ಟಗೊಳಿಸುವ ವೈಯಕ್ತಿಕ ನಿರ್ಧಾರಗಳು ಶಕ್ತಿ ಸಂರಕ್ಷಣಾ ನೀತಿಯ ಕಾರ್ಯಾನ್ವಯನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ನಾವು ಕೊಳ್ಳುವಂತಹ ಅಥವಾ ಬಾಡಿಗೆಗೆ ಪಡೆಯುವಂತಹ ಮನೆಗಳ ವಿಧಗಳು ಭವಿಷ್ಯದ ಸಮುದಾಯಗಳನ್ನು ರೂಪಿಸುತ್ತವೆ. ನಮ್ಮ ಸಾಮಾಜಿಕ ಅವಕಾಶಗಳ ರೂಪಿಸುವಿಕೆಯು ಅಪರಾಧ ನಿಯಂತ್ರಣ, ನೀರು ಸರಬರಾಜು, ತ್ಯಾಜ್ಯ ವಿಲೇವಾರಿ, ಸಾರಿಗೆ ಯೋಜನೆ, ಹಾಗೂ ಸಾರ್ವಜನಿಕ ಉದ್ಯಾನಗಳ ವಿನ್ಯಾಸಗಳಂತಹ ಸಾರ್ವಜನಿಕ ವಸ್ತುಗಳು ಮತ್ತು ಸೇವೆಗಳ ಭವಿಷ್ಯದ ಅಗತ್ಯಗಳ ಮೇಲೆ ಮಹತ್ವದ ಪರಿಣಾಮಗಳನ್ನು ಬೀರುತ್ತದೆ.

ನಾವು ಪ್ರಜೆಗಳಾಗಿ ವ್ಯಾಪಕವಾದ ಮತ್ತು ದೀರ್ಘ ಪರಿಣಾಮವುಳ್ಳ ಸಾರ್ವಜನಿಕ ಆಯ್ಕೆಗಳನ್ನು ಮಾಡುತ್ತೇವೆ. ವಲಸೆಗಾರರು ಪ್ರಜೆಗಳಾಗುವ ಆಯ್ಕೆ ಮಾಡುತ್ತಾರೆ; ತಮ್ಮ ಪೌರತ್ವವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆ ಬೇಡವೆ ಎನ್ನುವುದನ್ನು ಯುವಜನರು ತೀರ್ಮಾನಿಸುತ್ತಾರೆ; ಮತದಾರರು ತಮ್ಮ ಮತವನ್ನು ಚಲಾಯಿಸಬೇಕೆ ಬೇಡವೆ ಎಂದು ನಿರ್ಧರಿಸುತ್ತಾರೆ.

ಇತ್ತೀಚಿನ ದಶಕಗಳಲ್ಲಿ ಪ್ರಜೆಗಳ ಒತ್ತಡದ ನೇರ ಪರಿಣಾಮವಾಗಿ ಬಹಳಷ್ಟು ಸಾರ್ವಜನಿಕ ನೀತಿಯ ಚರ್ಚಾಂಶಗಳನ್ನು ಸಾರ್ವಜನಿಕ ಕಾರ್ಯಸೂಚಿಯಾಗಿ ಇಡಲಾಗುತ್ತಿದೆ. 'ಕುಡಿದು ವಾಹನವನ್ನು ಚಲಾಯಿಸುವುದರ ವಿರುದ್ಧದ ತಾಯಂದಿರು' [Mothers Against Drunk Driving(MADD)] ಎನ್ನುವ ಹೆಸರಿನಲ್ಲಿ ಕಾಳಜಿಯುಳ್ಳ ತಾಯಂದಿರ ಸಂಘಟನೆಯು ಹೆದ್ದಾರಿ ಸುರಕ್ಷತಾ ನೀತಿಯ ಮೇಲೆ ಬೀರಿದ ಪ್ರಭಾವವು ಪೌರರ ಆಯ್ಕೆಗಳು ಹೇಗೆ ಸಾರ್ವಜನಿಕ ನೀತಿಗಳಾಗಿ ಪರಿವರ್ತಿತವಾಗುತ್ತಿವೆ ಎನ್ನುವುದಕ್ಕೆ ಒಂದು ಉದಾಹರಣೆಯಾಗಿದೆ.

ಉತ್ತಮ ಪೌರನಾಗುವುದೆಂದರೇನು ಎನ್ನುವುದು ಕನಿಷ್ಠಪಕ್ಷ ಅರಿಸ್ಟಾಟಲನ ಕಾಲದಿಂದಲೂ ಚರ್ಚೆಯ ಒಂದು ವಿಷಯವಾಗಿದೆ. ಕೆಳಗಿನ ವಿಭಾಗವು ಈ ಪ್ರಶ್ನೆಯ ಕುರಿತು ಅರಸ್ಟಾಟಲನ ಚಿಂತನೆಗಳನ್ನು ಪರಿಶೀಲಿಸುತ್ತದೆ.

ಪಾಶ್ಚಾತ್ಯ ರಾಜಕೀಯ ಚಿಂತನೆಯಲ್ಲಿ ಪೌರತ್ವದ ಕುರಿತು ಅರಿಸ್ಟಾಟಲ್‌ನ ಅಭಿಪ್ರಾಯ

ಸುಮಾರು ಇಪ್ಪತ್ಮೂರು ಶತಮಾನಗಳ ಹಿಂದೆ ಪಾಲಿಟಿಕ್ಸ್ ಎನ್ನುವ ತನ್ನ ಕೃತಿಯ ಮೂರನೆ ಪುಸ್ತಕವನ್ನು ಅರಿಸ್ಟಾಟಲ್ "ಪೌರತ್ವ ಮತ್ತು ಸಂವಿಧಾನಗಳ ಸಿದ್ಧಾಂತಗಳು" ಎನ್ನುವ ವಿಷಯಕ್ಕೆ ಮೀಸಲಿಡುತ್ತಾನೆ. ಆಗಿನಿಂದಲೂ ಈ ಕೃತಿಯು ಪೌರತ್ವದ ಕುರಿತಾದ ಯಾವುದೇ ಗಂಭೀರ ಅಧ್ಯಯನದ ಪ್ರಾರಂಭಿಕ ಬಿಂದುವೆನಿಸಿದೆ.

ಎರಡು ಮೂಲಭೂತ ಪ್ರಶ್ನೆಗಳನ್ನು ಅರಿಸ್ಟಾಟಲ್ ನಮ್ಮ ಮುಂದಿಡುತ್ತಾನೆ: ಪೌರನನ್ನಾಗಿ ಮಾಡುವುದು ಯಾವುದು? ಮತ್ತು ಯಾವುದು ಉತ್ತಮ ಪೌರನನ್ನಾಗಿ ಮಾಡುತ್ತದೆ?

ಮೊದಲನೆಯ ಪ್ರಶ್ನೆಗೆ ಅರಿಸ್ಟಾಟಲ್ ಮೂರು ಭಾಗಗಳಲ್ಲಿ ಉತ್ತರಿಸುತ್ತಾನೆ. ಮೊದಲನೆಯದು ವ್ಯಾಖ್ಯಾನಕ್ಕೆ ಸಂಬಂಧಿಸಿದ್ದು. ಒಬ್ಬ ಪೌರನು ರಾಜಕೀಯ ಸಮಾಜದ ಸದಸ್ಯನಾಗಿರುತ್ತಾನೆ; ಒಬ್ಬ ಪ್ರಜಾಪ್ರಭುತ್ವದ ಪೌರನು ಆ ಸಮಾಜದ ನ್ಯಾಯಿಕ ಮತ್ತು ವಿವೇಚನಾತ್ಮಕ ಕಾರ್ಯಗಳಲ್ಲಿ ಭಾಗಿಯಾಗುತ್ತಾನೆ. ಎರಡನೆ ಭಾಗವು ಪೌರತ್ವದ ಉಗಮವನ್ನು ಕುರಿತಾಗಿದೆ. ಇಲ್ಲಿ ಅರಿಸ್ಟಾಟಲ್ ಮುಖ್ಯವಾಗಿ ಜಸ್ ಸಾಂಗ್ವಿನಿಸ್ ಅಂದರೆ ರಕ್ತಸಂಬಂಧದ ಕಾನೂನನ್ನು ಅವಲಂಬಿಸುತ್ತಾನೆ. ಇದರ ಪ್ರಕಾರ ಮಕ್ಕಳಿಗೆ ಅವರ ಪೋಷಕರಿಂದ ಪೌರತ್ವವು ದೊರೆಯುತ್ತದೆ. ಪೌರತ್ವವನ್ನು ಕುರಿತ ಇತರ ಮೂರು ಪರ್ಯಾಯ ಮೂಲಗಳ ಪ್ರಶ್ನೆಯನ್ನು ಅರಿಸ್ಟಾಟಲ್ ಮುಂಡಿಸುತ್ತಾನಾದರೂ ಅವನ್ನು ಸಂಪೂರ್ಣವಾಗಿ ಉತ್ತರಿಸುವುದಿಲ್ಲ: ಪೊಲಿಸ್ ಸ್ಥಾಪಕರು ಹೇಗೆ ಪೌರರಾದರು? ಸಹಜ ಪೌರತ್ವ ಪಡೆದವರು ಸಂಪೂರ್ಣ ಪೌರರಾಗುತ್ತಾರೆಯೆ? ಕ್ರಾಂತಿಯು ಘಟಿಸಿದ ಸಂದರ್ಭದಲ್ಲಿ ಹಳೆಯ ಮತ್ತು ಹೊಸ ಪೌರರನ್ನು ಹೇಗೆ ನಡೆಸಿಕೊಳ್ಳಬೇಕು? ಮೂರನೆ ಭಾಗವು, ಬಹಳಷ್ಟು ಮಟ್ಟಿಗೆ ಅರಿಸ್ಟಾಟಲ್ ಜೊತೆ ಗುರುತಿಸಲ್ಪಟ್ಟ ಕ್ರಿಯಾತ್ಮಕ ಅಥವಾ ಮೂಲ ಸಂಕಲ್ಪ ಸಿದ್ಧಾಂತ(teleological)ದ ನಿಟ್ಟಿನ ಉದ್ದೇಶ-ಉನ್ಮುಖ (end-oriented) ದೃಷ್ಟಿಕೋನವಾಗಿದೆ. ಇಲ್ಲಿ, ಅರಿಸ್ಟಾಟಲ್, ಈ ಮೊದಲಿನ ಹಾಗೆ ನ್ಯಾಯಿಕ ಮತ್ತು ವಿವೇಚನಾ ಅಧಿಕಾರವನ್ನು ಹಂಚಿಕೊಳ್ಳುವ ಸಾಂವಿಧಾನಿಕ ಹಕ್ಕುಗಳನ್ನು ಪಡೆದವನು ಪೌರನಾಗುತ್ತಾನೆ ಎನ್ನುವ ನಿಲುವನ್ನೆ ತಳೆಯುತ್ತಾನೆ. ಅದೇ ಸಮಯದಲ್ಲಿ, ಅರಿಸ್ಟಾಟಲ್ ಗುಲಾಮ ಪದ್ಧತಿಯನ್ನು ಸಮಾಜದ ಸಹಜ ಹಾಗೂ ಅಗತ್ಯವಾದ ಒಂದು ಸ್ಥಿತಿ

ಎಂದು ಬೆಂಬಲಿಸುತ್ತಾನೆ. ಅದರ ಪರಿಣಾಮವಾಗಿ ಪೌರತ್ವ ಮತ್ತು ರಾಜಕೀಯ ಇವೆರಡು ಪ್ರತ್ಯೇಕ ವಲಯಗಳಾಗಿದ್ದವು.

"ಯಾವುದು ಉತ್ತಮ ಪೌರನನ್ನಾಗಿ ಮಾಡುತ್ತದೆ?" ಎನ್ನುವುದು ಅರಿಸ್ಟಾಟಲ್‌ನ ಎರಡನೆ ಪ್ರಶ್ನೆಯಾಗಿತ್ತು. ಪೌರ ಮತ್ತು ಅವನ ಪೊಲಿಸ್ ನಡುವಿನ ಸಂಬಂಧವನ್ನು ನಾವಿಕ ಮತ್ತು ಆತನ ಹಡಗಿನ ಸಂಬಂಧಕ್ಕೆ ಹೋಲಿಸುವ ಮೂಲಕ ಅವನು ಈ ಪ್ರಶ್ನೆಗೆ ಭಾಗಶಃ ಉತ್ತರಿಸುತ್ತಾನೆ. ನಾವಿಕರು ಹಡಗಿನ ಸಹಚರರಾಗಿರುವಂತೆ, ಪೌರರು ಪೊಲಿಸ್‌ನ ಸಹಚರನಾಗಿರುತ್ತಾರೆ. ನಾವಿಕರು ತಮಗಿರುವ ವಿಭಿನ್ನ ಸಾಮರ್ಥ್ಯಗಳಿಗನುಗುಣವಾಗಿ ವಿಭಿನ್ನವಾಗಿ ವರ್ತಿಸುತ್ತಾರೆ (ಉದಾಃ ಅಂಬಿಗರು, ಮಾರ್ಗದರ್ಶಿಗಳು, ಮತ್ತು ವೀಕ್ಷಿಸುವವರು). ಅದೇ ರೀತಿ ಪೊಲಿಸ್‌ನೊಳಗೆ ರಾಜಕೀಯ ಕಾರ್ಯಗಳನ್ನು ನಿರ್ವಹಿಸುವ ಪೌರರೂ ಸಹ ಪರಸ್ಪರ ಭಿನ್ನವಾಗಿರುತ್ತಾರೆ. ಅದೇನೇ ಇದ್ದರೂ ಎಲ್ಲ ನಾವಿಕರು ಸಮಾನ ಗುರಿಯಾದ ನಾವೆಯ ಪ್ರಯಾಣದ ಸುರಕ್ಷತೆಯ ದಿಕ್ಕಿನಲ್ಲಿ ಕೆಲಸ ಮಾಡುತ್ತಾರೆ. ಆದ್ದರಿಂದ ಉತ್ತಮ ನಾವಿಕನ/ಳನ್ನು ಅವನು/ಳು ತನ್ನ ನಿರ್ದಿಷ್ಟ ಕೆಲಸವನ್ನು ಎಷ್ಟು ಸಮರ್ಥವಾಗಿ ಮತ್ತು ನಿಷ್ಠೆಯಿಂದ ನಿರ್ವಹಿಸುತ್ತಾನೆ/ಳೆ ಮತ್ತು ಸಮಾನ ಗುರಿಯಾದ ಸುರಕ್ಷತೆಯನ್ನು ಸಾಧಿಸಲು ಎಷ್ಟು ಕೊಡುಗೆ ಸಲ್ಲಿಸುತ್ತಾನೆ/ಳೆ ಎನ್ನುವುದರ ಆಧಾರದ ಮೇಲೆ ನಿರ್ಧರಿಸಬಹುದಾಗಿದೆ. ಅದೇ ರೀತಿ ಒಬ್ಬ ಪೌರನು/ಳು ನಿರ್ವಹಿಸುವ ನಿರ್ದಿಷ್ಟ ಕೆಲಸ ಮತ್ತು ರಾಜಕೀಯ ವ್ಯವಸ್ಥೆಯ ಒಳಿತಿಗೆ ಅವನ/ಳ ಒಟ್ಟಾರೆ ಕೊಡುಗೆ ಏನು ಎನ್ನುವುದರ ಆಧಾರದ ಮೇಲೆ ಅವನು ಉತ್ತಮ ಪೌರನೆ ಅಲ್ಲವೆ ಎನ್ನುವುದನ್ನು ನಿರ್ಧರಿಸಬಹುದಾಗಿದೆ.

ಪ್ರತಿಯೊಂದು ಪೊಲಿಸ್‌ನ ಅಂತಿಮ ಉದ್ದೇಶ ಮಾನವನ ಉತ್ಕೃಷ್ಟತೆಯಾಗಿರುತ್ತದೆ ಎನ್ನುವ ನಿಲುವನ್ನು ಅರಿಸ್ಟಾಟಲ್ ತೆಗೆದುಕೊಂಡಿದ್ದರಿಂದ, ಉತ್ತಮ ಪೌರನಾಗಲು ಬೇಕಾದ ಮತ್ತೆರಡು ಅಗತ್ಯಗಳನ್ನು ಅವನು ಹೇಳುತ್ತಾನೆ. ಒಬ್ಬ ಉತ್ತಮ ಪೌರನು ತನ್ನೊಳಗೆ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಉತ್ಕೃಷ್ಟತೆಯನ್ನು ತರಲು ಮತ್ತು ಅದನ್ನು ಕಾನೂನಿನ ಚೌಕಟ್ಟಿನಲ್ಲಿ ಸಾಧಿಸಲು ಬದ್ಧನಾಗಿರುತ್ತಾನೆ. ಸಂಕ್ಷೇಪವಾಗಿ ಹೇಳುವುದಾದರೆ, ಆಗ, ಒಬ್ಬ ಉತ್ತಮ ಪೌರನು ದೇಶಭಕ್ತನಾಗಿರುತ್ತಾನೆ/ಳೆ, ಕಾನೂನಿಗೆ ವಿಧೇಯನಾಗಿರುತ್ತಾನೆ/ಳೆ ಮತ್ತು ಸಮಾಜದಲ್ಲಿ ತನ್ನ ಸಂಪೂರ್ಣ ಸಾಮರ್ಥ್ಯವನ್ನು ತೊಡಗಿಸಿ ತನ್ನ ಪಾತ್ರವನ್ನು ನಿರ್ವಹಿಸುವ ಮೂಲಕ ಉತ್ಕೃಷ್ಟತೆಯನ್ನು ಸಾಧಿಸಲು ಪ್ರಯತ್ನಿಸುತ್ತಾನೆ/ಳೆ.

ಚಟುವಟಿಕೆ

ಯಾವುದು ಉತ್ತಮ ಪೌರನನ್ನಾಗಿ ಮಾಡುತ್ತದೆ?

ಪೌರತ್ವಕ್ಕೆ ಸಂಬಂಧಿಸಿದ ನಿಮ್ಮ ಜೀವನದ ಒಂದು ಘಟನೆಯ ಕುರಿತು ಯೋಚಿಸಿ.

- ಅದು ಯಾವಾಗ ನಡೆಯಿತು?
- ಅದರಲ್ಲಿ ಒಳಗೊಂಡಿದ್ದವರಾರು?
- ಏನು ನಡೆಯಿತು?
- ಅದು ಸಕಾರಾತ್ಮಕವಾಗಿತ್ತೆ ಅಥವಾ ನಕಾರಾತ್ಮಕವಾಗಿತ್ತೆ?

ವೃತ್ತಪತ್ರಕೆಗಳನ್ನು ಮುದ್ರಿಸುವ ಹಾಳೆಯೊಂದರ ಮೇಲೆ ಮೂಲ ಮಾಹಿತಿಯನ್ನು ದಾಖಲಿಸಿ; ತರಗತಿಯ ಇತರ ಸದಸ್ಯರ ಅದೇ ರೀತಿಯ ಮಾಹಿತಿಯ ಹಾಳೆಗಳ ಜೊತೆ ಅದನ್ನು ಗೋಡೆಗೆ ಲಗತ್ತಿಸಿ.

ಐದು ಜನ ವಿದ್ಯಾರ್ಥಿಗಳ ಗುಂಪಿನಲ್ಲಿ ಪರಸ್ಪರ ಭೇಟಿ ಮಾಡಿ. ನೀವು ಹಾಳೆಯಲ್ಲಿ ದಾಖಲಿಸಿದ ಮಾಹಿತಿಯನ್ನು ಮಾತ್ರ ಬಳಸಿ ಯಾವುದು ಉತ್ತಮ ಪೌರನನ್ನಾಗಿ ಮಾಡುತ್ತದೆ ಎನ್ನುವುದರ ಬಗ್ಗೆ ಎಲ್ಲರಿಗೂ ಸರ್ವಸಮ್ಮತ ಹೇಳಿಕೆಯನ್ನು ಕೊಡಿ.

ವೃತ್ತಪತ್ರಿಕೆಗಳನ್ನು ಮುದ್ರಿಸುವ ಹಾಳೆಯೊಂದರ ಮೇಲೆ ನಿಮ್ಮ ಗುಂಪಿನ ತೀರ್ಮಾನಗಳನ್ನು ಬರೆಯಿರಿ. ಅದನ್ನು ಪ್ರಕಟಿಸಿ ಮತ್ತು ಇತರೆ ಗುಂಪುಗಳ ತೀರ್ಮಾನದೊಂದಿಗೆ ಹೋಲಿಸಿ.

- ಹಲವಾರು ಗುಂಪುಗಳ ತೀರ್ಮಾನಗಳಲ್ಲಿದ್ದ ಭಿನ್ನತೆಗಳು ಮತ್ತು ಸಮಾನ ಅಂಶಗಳಾವುವು?
- ಉತ್ತಮ ಪೌರತ್ವದ ಬಗ್ಗೆ ನಿಮ್ಮ ವ್ಯಾಖ್ಯಾನವು ಪೌರನೀತಿ ಪಠ್ಯಪುಸ್ತಕದಲ್ಲಿ ನೀವು ನಿರೀಕ್ಷಿಸುವ ವ್ಯಾಖ್ಯಾನವನ್ನು ಎಷ್ಟರಮಟ್ಟಿಗೆ ಹೋಲುತ್ತದೆ?
- ಸಾಮಾಜಿಕ ಅಧ್ಯಯನಗಳನ್ನು ಭೋಧಿಸುವಲ್ಲಿ ಈ ಪ್ರಯೋಗದ ಇಂಗಿತಗಳು/ಪರಿಣಾಮಗಳೇನು?

## ಪೌರರ ಕರ್ತವ್ಯದ ನೈತಿಕತೆಯ ಕುರಿತು ಅಬ್ರಾಹಂ ಲಿಂಕನ್

ಒಬ್ಬನ ಬದ್ಧತೆ ಮತ್ತು ಮತ್ತೊಬ್ಬನ ಬದ್ದತೆಯ ನಡುವೆ ಸಂಘರ್ಷ ಹುಟ್ಟಿಕೊಂಡರೆ ಒಬ್ಬ ಒಳ್ಳೆಯ ಪೌರ ಮತ್ತು ಒಬ್ಬ ಒಳ್ಳೆಯ ವ್ಯಕ್ತಿಯ ನಡುವಿನ ಸಂಘರ್ಷವು ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ ಯಾವುದೋ ಒಂದು ನಿರ್ದಿಷ್ಟವಾದ ಕಾನೂನು ಅಥವಾ ಆಳ್ವಿಕೆ ಸಾರ್ವತ್ರಿಕವಾಗಿರುವ ನ್ಯಾಯದ ಮಾನದಂಡಕ್ಕೆ ವಿರುದ್ಧವಾಗಿರಬಹುದು. ಅಂತಹ ಪರಿಸ್ಥಿತಿಯಲ್ಲಿ, ಕಾನೂನಿಗೆ ವಿಧೇಯನಾಗಿರಬೇಕೆಂಬ ಪೌರನೀತಿಯ ಬದ್ಧತೆಯು ತನ್ನ ಆತ್ಮಸಾಕ್ಷಿಗನುಗುಣವಾಗಿ ನಡೆಯುವ ನೈತಿಕ ಬದ್ಧತೆಯೊಡನೆ ಸಂಘರ್ಷಕ್ಕಿಳಿಯುತ್ತದೆ.

ಆಗಸ್ಟ್ 22, 1862ರಂದು ಅಧ್ಯಕ್ಷರಾದ ಅಬ್ರಾಹಂ ಲಿಂಕನ್ ಅವರು ಬರೆದ ಪತ್ರವು ಪೌರರ ಕರ್ತವ್ಯಗಳು ಮತ್ತು ವೈಯಕ್ತಿಕ ಆತ್ಮಸಾಕ್ಷಿಯ ನಡುವಿನ ಸಂಘರ್ಷದ ಸ್ಪಷ್ಟ ಮತ್ತು ಮನಮುಟ್ಟುವ ಉದಾಹರಣೆಯಾಗಿದೆ. ಈ ಪತ್ರವನ್ನು ಅವರು ಆಗಸ್ಟ್ 20, 1862ರಲ್ಲಿ ಟ್ರಿಬ್ಯುನ್ ಪತ್ರಿಕೆಯಲ್ಲಿ “ಇಪ್ಪತ್ತು ಮಿಲಿಯನ್‌ರ ಪ್ರಾರ್ಥನೆ” ಎನ್ನುವ ಶೀರ್ಷಿಕೆಯಲ್ಲಿ ಪ್ರಕಟವಾದ ಹೊರೆಸ್ ಗ್ರೀಲೆಯವರ ಆಗಸ್ಟ್ 19ರ ಪತ್ರಕ್ಕೆ ಪ್ರತಿಕ್ರಿಯೆಯಾಗಿ ಬರೆದಿದ್ದರು. ಆ ಪತ್ರದಲ್ಲಿ “ಬಂಡಾಯಗಾರ ಗುಲಾಮರ ಬಗ್ಗೆ ನೀವು (ಲಿಂಕನ್) ಅನುಸರಿಸುತ್ತಿರುವ ನೀತಿ”ಯ ಬಗ್ಗೆ ತನಗೆ ಅತ್ಯಂತ ನಿರಾಸೆಯಾಗಿದೆ ಎನ್ನುವ ಅಭಿಪ್ರಾಯವನ್ನು ಗ್ರೀಲೆಯವರು ವ್ಯಕ್ತಪಡಿಸಿದ್ದರು. ಲಿಂಕನ್ ಅವರ ಪ್ರತಿಕ್ರಿಯೆಯ ಪೂರ್ಣ ಪಠ್ಯವನ್ನು ಈ ಕೆಳಗೆ ನೀಡಲಾಗಿದೆ. “ಪೌರ ಕರ್ತವ್ಯಗಳ ನೈತಿಕತೆ”ಯ ಬಗ್ಗೆ ಇದಕ್ಕಿಂತ ಉತ್ತಮವಾದ ಹೇಳಿಕೆ ನಮಗೆ ಸಿಗುವುದಿಲ್ಲ. ಎಂತಹುದೇ ಬೆಲೆಯನ್ನು ತೆತ್ತಾದರೂ ಒಕ್ಕೂಟವನ್ನು ಉಳಿಸಿಕೊಳ್ಳುವುದು ಅಧ್ಯಕ್ಷರಾಗಿ ಲಿಂಕನ್ನರ ಕರ್ತವ್ಯವಾಗಿತ್ತು. ಅವರ ಕರ್ತವ್ಯಕ್ಕೆ ಯಾವುದೇ ಚ್ಯುತಿ ಬಾರದಂತೆ ಲಿಂಕನ್ ಏನಾದರೂ ಮಾಡಿ ಗುಲಾಮರನ್ನು ಸ್ವತಂತ್ರಗೊಳಿಸಬೇಕು ಎನ್ನುವ ತನ್ನ “ವೈಯಕ್ತಿಕ ಬಯಕೆ”ಯ ಜೊತೆ ಹೊಂದಾಣಿಕೆ ಮಾಡಿಕೊಂಡರು.

ಚಟುವಟಿಕೆ

ಹೊರೆಸ್ ಗ್ರೀಲೆಗೆ ಅಧ್ಯಕ್ಷ ಲಿಂಕನ್‌ರವರು ಬರೆದ ಪತ್ರವನ್ನು ವಿಶ್ಲೇಷಿಸುವುದು

ಲಿಂಕನ್‌ರ ಪತ್ರವನ್ನು ಓದಿ. ಈ ಕೆಳಗಿನ ಪ್ರಶ್ನೆಗಳನ್ನು ನಿಮ್ಮ ತರಗತಿಗಳಲ್ಲಿ ಚರ್ಚಿಸಿ: ಒಬ್ಬ ಒಳ್ಳೆಯ ನಾಯಕ ಮತ್ತು ಒಳ್ಳೆಯ ವ್ಯಕ್ತಿಯಾಗಿರುವುದರ ಕುರಿತು ಅಬ್ರಾಹಂ ಲಿಂಕನ್ ಅವರ ಅಭಿಪ್ರಾಯವೇನು? ಒಳ್ಳೆಯ ಪೌರ ಮತ್ತು ಒಳ್ಳೆಯ ವ್ಯಕ್ತಿಯ ಬಗ್ಗೆ ಅರಿಸ್ಟಾಟಲ್ ಕೊಟ್ಟಿರುವ ವ್ಯಾಖ್ಯಾನವನ್ನು ಅವರು ಒಪ್ಪುತ್ತಾರೆಯೆ ಅಥವಾ ನಿರಾಕರಿಸುತ್ತಾರೆಯೆ? ನೀವು ಅರಿಸ್ಟಾಟಲ್‌ರನ್ನು ಒಪ್ಪುತ್ತೀರಾ? ಲಿಂಕನ್ನ್‌ರನ್ನು ಒಪ್ಪುತ್ತೀರಾ?

ಈ ಪ್ರಶ್ನೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾ ಲಿಂಕನ್ನರಿಗೆ ಒಂದು ಸಂಕ್ಷಿಪ್ತ ಪತ್ರ ಬರೆಯಿರಿ.

ಮಾನ್ಯ ಹೊರೆಸ್ ಗ್ರೀಲೆಯವರಿಗೆ

ಮಾನ್ಯರೆ,

ಎಕ್ಸಿಕ್ಯುಟಿವ್ ಮ್ಯಾನ್ಸನ್

ವಾಷಿಂಗ್ಟನ್, ಆಗಸ್ಟ್ 22, 1862

ನ್ಯೂಯರ್ಕ್ ಟ್ರಿಬ್ಯೂನ್‌ನಲ್ಲಿ ನನ್ನನ್ನು ಉದ್ದೇಶಿಸಿ ನೀವು 19ರಂದು ಬರೆದ ಪತ್ರವನ್ನು ಈಗ ತಾನೆ ಓದಿದೆ. ನನಗೆ ತಿಳಿದ ಮಟ್ಟಿಗೆ ತಪ್ಪಾಗಿರಬಹುದಾದ ಯಾವುದಾರೂ ಹೇಳಿಕೆಗಳು ಅಥವಾ ವಾಸ್ತವವನ್ನು ಕುರಿತಾದ ಊಹೆಗಳು ಇದ್ದಲ್ಲಿ, ಅದನ್ನು ನಾನು ಈಗ ಮತ್ತು ಇಲ್ಲಿ ಅಲ್ಲಗಳೆಯಲಾರೆ. ಇದರಲ್ಲಿ ಯಾವುದಾದರೂ ನನಗೆ ತಿಳಿದಮಟ್ಟಿಗೆ ತಪ್ಪಾದ ಅನುಮಾನಗಳಿದ್ದರೆ, ಈಗ ಮತ್ತು ಇಲ್ಲಿ ಅದರ ವಿರುದ್ಧ ವಾದಿಸಲಾರೆ. ಇದರಲ್ಲಿ ಅಸಹನೀಯವಾದ ಮತ್ತು ನಿರಂಕುಶ ಧ್ವನಿಯನ್ನು ಗ್ರಹಿಸಬಹುದಾದರೆ, ಅವನ ಅಂತರಂಗವು ಸರಿಯಾದ ಹಾದಿಯಲ್ಲೆ ಇರುತ್ತದೆಂದು ನಾನು ಸದಾಕಾಲ ಭಾವಿಸುವ ನನ್ನ ಹಳೆಯ ಸ್ನೇಹಿತನ ಮೇಲಿನ ಗೌರವದಿಂದ, ಅದನ್ನು ಗಾಳಿಗೆ ತೂರುತ್ತೇನೆ.

ನೀವು ಹೇಳಿದಂತೆ "ನಾನು ಅನುಸರಿಸುತ್ತಿರುವಂತೆ ಕಾಣುವ" ನೀತಿಯ ಕುರಿತು ಯಾರಿಗೂ ಯಾವುದೇ ಅನುಮಾನ ಬೇಡ.

ನಾನು ಒಕ್ಕೂಟವನ್ನು ಉಳಿಸುತ್ತೇನೆ. ಸಂವಿಧಾನದಡಿಯಲ್ಲಿ ಅತ್ಯಂತ ಕ್ಷಿಪ್ರವಾದ ಹಾದಿಯಲ್ಲಿ ಸಾಗಿ ಅದನ್ನು ಉಳಿಸುತ್ತೇನೆ. ರಾಷ್ಟ್ರೀಯ ಅಧಿಕಾರ ಎಷ್ಟು ಬೇಗ ಸ್ಥಾಪಿತವಾಗುತ್ತದೊ ಅಷ್ಟು ಬೇಗ 'ಈ ಹಿಂದಿನ ಒಕ್ಕೂಟ'ಕ್ಕೆ ನಿಕಟವಾದ ಒಂದು ಒಕ್ಕೂಟವಾಗಿ ಉಳಿಯುತ್ತದೆ (ಈ ಸಂದರ್ಭದಲ್ಲಿ ಲಿಂಕನ್ ಈ ಮುಂದಿನ ವಾಕ್ಯಕ್ಕೆ ಕಾಟು ಹಾಕಿದ್ದಾರೆ (crossed out): "ಒಡೆದ ಮೊಟ್ಟೆಗಳನ್ನು ಮತ್ತೆ ಸೇರಿಸಲಾಗುವುದಿಲ್ಲ ಮತ್ತು ಮೊಟ್ಟೆ ಒಡೆಯುವುದು ಮುಂದುವರೆಯುತ್ತಾ ಹೋದಂತೆ ಮತ್ತಷ್ಟು ಮೊಟ್ಟೆಗಳು ಒಡೆಯುತ್ತವೆ)." ಗುಲಾಮ ಪದ್ಧತಿಯನ್ನು ಉಳಿಸುವವರೆಗೂ ಒಕ್ಕೂಟವನ್ನು ಉಳಿಸಲಾಗುವುದಿಲ್ಲ ಎನ್ನುವವರಿದ್ದರೆ ಅವರೊಂದಿಗೆ ನನ್ನ ಸಹಮತವಿಲ್ಲ. ಗುಲಾಮ ಪದ್ದತಿಯನ್ನು ನಾಶಪಡಿಸಲು ಶಕ್ತರಾಗುವವರೆಗೂ ಒಕ್ಕೂಟವನ್ನು ಉಳಿಸಲಾಗುವುದಿಲ್ಲ ಎನ್ನುವವರಿದ್ದರೆ ಅವರೊಡನೆ ನನಗೆ

ಸಹಮತವಿಲ್ಲ. ಈ ಹೋರಾಟದಲ್ಲಿ ನನ್ನ ಮಹತ್ವಾಕಾಂಕ್ಷೆ ಇರುವುದು ಒಕ್ಕೂಟವನ್ನು ಉಳಿಸುವುದರಲ್ಲೆ ಹೊರತು ಗುಲಾಮ ಪದ್ಧತಿಯನ್ನು ಉಳಿಸುವುದಲ್ಲಾಗಲಿ ಅಳಿಸುವುದರಲ್ಲಾಗಲಿ ಅಲ್ಲ. ಯಾವುದೇ ಗುಲಾಮನನ್ನು ಮುಕ್ತಗೊಳಿಸದೆ ಒಕ್ಕೂಟವನ್ನು ಉಳಿಸಬೇಕಾದರೆ ನಾನು ಅದನ್ನು ಮಾಡುತ್ತೇನೆ, ಮತ್ತು ಎಲ್ಲ ಗುಲಾಮರನ್ನು ಸ್ವತಂತ್ರಗೊಳಿಸಿ ಅದನ್ನು ಉಳಿಸಲು ಸಾಧ್ಯವಿದ್ದರೆ ಅದನ್ನು ಮಾಡುತ್ತೇನೆ; ಮತ್ತು ಅವರಲ್ಲಿ ಕೆಲವರನ್ನು ಮಾತ್ರ ಮುಕ್ತಗೊಳಿಸಿ ಉಳಿದವರನ್ನು ಹಾಗೆಯೆ ಬಿಟ್ಟು ಅದನ್ನು ಉಳಿಸಿಕೊಳ್ಳಬಹುದಾದರೆ ಅದನ್ನೂ ಸಹ ಮಾಡುತ್ತೇನೆ. ಗುಲಾಮಗಿರಿಯ ಬಗ್ಗೆ, ವರ್ಣೀಯರ ಬಗ್ಗೆ ನಾನು ಏನು ಮಾಡುತ್ತೇನೆಯೋ, ಅದು ಒಕ್ಕೂಟವನ್ನು ಉಳಿಸಲು ಸಹಾಯಮಾಡುತ್ತದೆಂದು ನಾನು ನಂಬಿರುವ ಕಾರಣ, ಹಾಗೆ ಮಾಡುತ್ತೇನೆ. ಯಾವುದನ್ನು ನಾನು ವರ್ಜಿಸುತ್ತಿದ್ದೇನೆಯೋ ಅದು ಒಕ್ಕೂಟವನ್ನು ಉಳಿಸಲು ಸಹಾಯಮಾಡುತ್ತದೆ ಎನ್ನುವ ನಂಬಿಕೆ ನನಗಿಲ್ಲ. ಹಾಗಾಗಿ ಅದನ್ನು ವರ್ಜಿಸುತ್ತೇನೆ. ನಾನು ಮಾಡುತ್ತಿರುವುದು ಯಾವಾಗ ನನ್ನ ಉದ್ದೇಶಕ್ಕೆ ಧಕ್ಕೆಯಾಗುತ್ತದೆ ಎಂದು ನನಗನಿಸುತ್ತದೆಯೊ ಆಗ ಅದನ್ನು ಕಡಿಮೆ ಮಾಡುತ್ತೇನೆ. ನಾನು ಮಾಡುತ್ತಿರುವುದು ನನ್ನ ಉದ್ದೇಶಕ್ಕೆ ಪೂರಕವಾಗಿದೆ ಎನಿಸಿದಾಗ ಅದನ್ನು ಹೆಚ್ಚು ಮಾಡುತ್ತೇನೆ. ನನ್ನದು ತಪ್ಪಾಗಿದೆ ಎಂದು ತೋರಿಸಿದರೆ ಅದನ್ನು ಸರಿಪಡಿಸಲು ಪ್ರಯತ್ನಿಸುತ್ತೇನೆ. ಹೊಸ ಅಭಿಪ್ರಾಯಗಳನ್ನು, ಅವು ಸರಿಯಾದ ಅಭಿಪ್ರಾಯಗಳೆಂದು ನನಗನಿಸಿದರೆ, ತಕ್ಷಣವೆ ಅಳವಡಿಸಿಕೊಳ್ಳುತ್ತೇನೆ.

ನನ್ನ ಅಧಿಕೃತ ಕರ್ತವ್ಯದ ಅಭಿಪ್ರಾಯಕ್ಕನುಗುಣವಾಗಿ ನನ್ನ ಉದ್ದೇಶವನ್ನು ಇಲ್ಲಿ ತಿಳಿಸಿದ್ದೇನೆ. ಎಲ್ಲೆಡೆಯಲ್ಲೂ ಎಲ್ಲ ಮನುಷ್ಯರು ಸ್ವತಂತ್ರರಾಗಬಲ್ಲರು ಎನ್ನುವ ಆಗಾಗ ವ್ಯಕ್ತಪಡಿಸಲಾದ ನನ್ನ ವೈಯಕ್ತಿಕ ಇಚ್ಛೆಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಲು ನನಗಿಷ್ಟವಿಲ್ಲ. ನಿಮ್ಮವನು,

ಎ. ಲಿಂಕನ್

ರಾಜಕೀಯ ಮತ್ತು ಅಧಿಕಾರ

ಎರಡು ಕಾರಣಗಳಿಗಾಗಿ ಜನರು ರಾಜಕೀಯವನ್ನು ಪ್ರವೇಶಿಸುತ್ತಾರೆ: ಅವೆಂದರೆ, ಅಧಿಕಾರ ಮತ್ತು ನ್ಯಾಯ. ರಾಜಕೀಯ ಅಧಿಕಾರದ ಬಯಕೆ ಎನ್ನುವುದು ಸಾರ್ವಜನಿಕ ನಿರ್ಧಾರಗಳ ಮೇಲೆ ಪರಿಣಾಮ ಬೀರುವ ಬಯಕೆಯಾಗಿರುತ್ತದೆ. ನ್ಯಾಯದ ಅನ್ವೇಷಣೆಯೆಂದರೆ ಸಾರ್ವಜನಿಕ ನೀತಿಯಲ್ಲಿನ ಒಬ್ಬನ ಆತ್ಮಸಾಕ್ಷಿ ಮತ್ತು ಅನ್ಯಾಯರಹಿತವಾದದ್ದರ ಅನುಸರಣೆಯಾಗಿರುತ್ತದೆ.

ಇವೆರಡು ಪರಿಕಲ್ಪನೆಗಳು ಒಟ್ಟಾಗಿ ರಾಜಕೀಯದ ಚೌಕಟ್ಟನ್ನು ಮತ್ತು ಒಂದು ವಿಷಯದ ನಿಟ್ಟಿನಲ್ಲಿ ರಾಜಕೀಯ ವಿಜ್ಞಾನದ ಪರಿಕಲ್ಪನಾತ್ಮಕ ಗಡಿಗಳನ್ನು ರಚಿಸುತ್ತವೆ [ಅಧಿಕಾರ ಮತ್ತು ನ್ಯಾಯದ ಈ ಪರಿಕಲ್ಪನೆಯನ್ನು ಡೇನಿಯಲ್ ಜೆ. ಇಲೇಜರ್ ಅವರ ಕೃತಿಯಿಂದ ಅಳವಡಿಸಿಕೊಳ್ಳಲಾಗಿದೆ (ಉದಾಹರಣೆಗೆ, ಇಲೇಜರ್ 1984ಎ 112-14ನ್ನು ನೋಡಿ)]. ರಾಜಕೀಯ ಅಧಿಕಾರವು ಒಂದು ಗಡಿಯನ್ನು (ಅಕ್ಷರೇಖೆಯನ್ನು) ಮತ್ತು ರಾಜಕಾರಣದ ನಿರ್ದೇಶಾಂಕಗಳ ಸಮುಚ್ಚಯಮೊಂದನ್ನು ರೂಪಿಸಿದರೆ, ನ್ಯಾಯವು ಮತ್ತೊಂದನ್ನು ರಚಿಸುತ್ತದೆ. ಈ ವಿಭಾಗದಲ್ಲಿ ನಾವು ಅಧಿಕಾರದ ಪರಿಕಲ್ಪನೆಯನ್ನು ಪರಿಶೀಲಿಸುತ್ತೇವೆ ನಂತರದ ವಿಭಾಗದಲ್ಲಿ ನ್ಯಾಯದ ಕಡೆ ತಿರುಗುತ್ತೇವೆ.

ಸಾಮಾನ್ಯವಾದ ಪರಿಭಾಷೆಯಲ್ಲಿ ಅಧಿಕಾರವನ್ನು "ನೀವು ಬಯಸಿದ್ದನ್ನು ಪಡೆಯುವ ಸಾಮರ್ಥ್ಯ" ಎಂದು ವ್ಯಾಖ್ಯಾನಿಸಬಹುದಾಗಿದೆ. ರಾಜಕೀಯದಲ್ಲಿರುವ ಪ್ರತಿಯೊಬ್ಬರೂ ತಾವು ಬಯಸಿದ್ದನ್ನು ಮಾಡಲು ಸಹ ಪ್ರಯತ್ನಿಸುತ್ತಿರುವುದರಿಂದ ರಾಜಕೀಯ ಅಧಿಕಾರವನ್ನು "ಇತರರ ಸಾರ್ವಜನಿಕ ಆಯ್ಕೆಯನ್ನು ಬದಲಿಸುವ ಸಾಮರ್ಥ್ಯ" ಎಂದು ವ್ಯಾಖ್ಯಾನಿಸಬಹುದು. ಈ ಅರ್ಥದಲ್ಲಿ ಅಧಿಕಾರ ಎನ್ನುವುದು ರಾಜಕೀಯದ ಅತ್ಯಂತ ಮೂಲಭೂತವಾದ ಗುರಿಗಳಲ್ಲಿ ಒಂದೆನಿಸಿದೆ. ಆದರೆ 'ಅಧಿಕಾರದ ಆಟ'ದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಇತರರ ನಿರ್ಧಾರಗಳನ್ನು ಬದಲಿಸುವುದರ ಕಾರಣಗಳ ಕಡೆಗೆ ಗಮನವನ್ನೇ ಹರಿಸದ ಹೊರತು, ಇದು ತಂತಾನೇ ಒಂದು ಗುರಿಯಾಗಿರುವುದಿಲ್ಲ.

ಸಾಮಾನ್ಯವಾಗಿ, ರಾಜಕೀಯ ವಿಜ್ಞಾನಿಗಳು ವಿಶಿಷ್ಟವಾಗಿ ಅಧಿಕಾರ ಸಮೀಕರಣದ ಎರಡು ಮುಖಗಳ ನಡುವಿನ ವ್ಯತ್ಯಾಸವನ್ನು ಗುರುತಿಸುತ್ತಾರೆ. ಇತರರನ್ನು ಪ್ರಭಾವಿಸುವ ಸಾಮರ್ಥ್ಯ ಅಥವಾ ಸಂಭಾವ್ಯತೆ ಮತ್ತು ವಾಸ್ತವದಲ್ಲಿ ಅಧಿಕಾರವನ್ನು ಚಲಾಯಿಸುವ ಪರಸ್ಪರ ಕ್ರಿಯಾತ್ಮಕ ಸಂದರ್ಭ. ಸಾಮಾಜಿಕ ವಿಜ್ಞಾನಿಗಳು ಇದರಲ್ಲಿ ಮೊದಲನೆಯದನ್ನು ಗುರುತಿಸುವ ಮತ್ತು ಪ್ರಮಾಣೀಕರಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ, ಹಾಗೆ ಮಾಡುವ ಮೂಲಕ ಎರಡನೆಯದರ ಕುರಿತು ಇರುವ ಅಸ್ಪಷ್ಟತೆಯನ್ನು ಕಡಿಮೆ ಮಾಡಬಹುದು ಎನ್ನುವ ನಂಬಿಕೆ ಅವರದು.

ಅಧಿಕಾರ ಸಂಪನ್ಮೂಲಗಳು

ರಾಜಕೀಯ ಪಾತ್ರಧಾರಿಗಳ ಅಧಿಕಾರದ ಸಂಭಾವ್ಯ ಸಾಮರ್ಥ್ಯವನ್ನು ವಿಶ್ಲೇಷಿಸುವಲ್ಲಿ ರಾಜಕೀಯ ವಿಜ್ಞಾನಿಗಳು ಸಂಪನ್ಮೂಲಗಳ ಹಲವು ವರ್ಗೀಕರಣಗಳನ್ನು ಪರಿಗಣಿಸುತ್ತಾರೆ. ಈ ವರ್ಗೀಕರಣಗಳು ಸ್ಥಾನಿಕ, ಪ್ರಖ್ಯಾತಿ, ಮತ್ತು ಬೌದ್ಧಿಕ ಸಂಪನ್ಮೂಲಗಳನ್ನು ಮತ್ತು ಪಾತ್ರಧಾರಿಯ ಪ್ರವೇಶಾವಕಾಶ ಮತ್ತು ಬೆಂಬಲದ ತಳಹದಿಯನ್ನು ಒಳಗೊಂಡಿರುತ್ತದೆ.

ಸ್ಥಾನಿಕ ಸಂಪನ್ಮೂಲಗಳು ಎನ್ನುವುದು ಹೊಂದಿರುವ ಸ್ಥಾನದ ಕಾರ್ಯನಿರ್ವಹಣೆಯಾಗಿರುತ್ತದೆ. ಔಪಚಾರಿಕ ಅಧಿಕಾರಗಳು, ಹಣಕಾಸಿನ ಸಂಪನ್ಮೂಲಗಳು, ಮತ್ತು ಸಿಬ್ಬಂದಿಯನ್ನು ಒಳಗೊಂಡಿರುತ್ತವೆ. ಸಾಂವಿಧಾನಿಕ ಸರಕಾರದ ವ್ಯವಸ್ಥೆಯಲ್ಲಿ ಪಾತ್ರದಾರಿಗಳ ಔಪಚಾರಿಕ ಅಧಿಕಾರಗಳು (ರಾಜಕೀಯದ) ಕಾರ್ಯಕ್ಕೆ ಚಾಲನೆಯನ್ನು ನೀಡುತ್ತದೆ. ಅಮೇರಿಕಾದ ಅಧ್ಯಕ್ಷ ಮತ್ತು ಕಾಂಗ್ರೆಸ್ ಪ್ರತಿ ವರ್ಷವೂ ಆಯವ್ಯಯಕ್ಕೆ ಸಂಬಂಧಿಸಿದಂತೆ ಒಪ್ಪಂದಕ್ಕೆ ಬರಬೇಕಾಗುತ್ತದೆ, ಏಕೆಂದರೆ, ಈ ಎರಡೂ ಸಂಸ್ಥೆಗಳು ಔಪಚಾರಿಕ ಆಯವ್ಯಯವನ್ನು ರೂಪಿಸುವ ಅಧಿಕಾರವನ್ನು ಹೊಂದಿರುತ್ತವೆ. ನಿಜವಾದ ಅರ್ಥದಲ್ಲಿ ಸರಕಾರಿ ಸಂಸ್ಥೆಗಳು ಒಂದು ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುವುದು ಅಧಿಕಾರ ವಿಭಜನೆಯ ನಿರ್ದೇಶನದಂತಲ್ಲ, ಬದಲಿಗೆ ಅವು "ಅಧಿಕಾರಗಳನ್ನು ಹಂಚಿಕೊಳ್ಳುವ ಪ್ರತ್ಯೇಕಗೊಂಡ ಸಂಸ್ಥೆಗಳ" ಸರ್ಕಾರದ ನಿರ್ದೇಶನದಂತೆ (ನ್ಯೂಸ್ಟಾಟ್ 1976, 101). ರಾಜಕೀಯ ಪಾತ್ರದಾರಿಗಳು ತಮ್ಮ ಗುರಿಗಳ ಸಾಧನೆಯತ್ತ ನಿರ್ದೇಶಿಸಬಲ್ಲ ಹಣಕಾಸಿನ ಮತ್ತು ಸಿಬ್ಬಂದಿ ಸಂಪನ್ಮೂಲಗಳು ಎರಡನೆ ಪ್ರಾಮುಖ್ಯತೆಯನ್ನು ಪಡೆಯುತ್ತವೆ.

ಪಾತ್ರದಾರಿಯ ಯಶಸ್ಸಿನ ಖ್ಯಾತಿ, ವಿಶ್ವಾಸಾರ್ಹತೆ ಅಥವಾ ನಂಬಿಕೆ ಮತ್ತು ಶೈಲಿ, ಇವು ಖ್ಯಾತಿಯ ಸಂಪನ್ಮೂಲಗಳೆನಿಸುತ್ತವೆ. "ಯಶಸ್ಸಿನ ಮುಂದೆ ಮತ್ತಾವುದೂ ಜಯಶಾಲಿಯಾಗುವುದಿಲ್ಲ" ಎನ್ನುವ ಪ್ರಭಾವಳಿಯ

ತತ್ವದಿಂದ ರಾಜಕೀಯವು ಸಂಚಾಲಿತವಾಗಿರುತ್ತದೆ. ಇದರ ಮೂಲಕ ರಾಜಕೀಯ ಪಾತ್ರದಾರಿಗಳು ತಮ್ಮ ಖ್ಯಾತಿಯ ಬಂಡವಾಳವನ್ನು ನಿರ್ಮಿಸಿಕೊಳ್ಳುತ್ತಾರೆ. ನೀಡಿದ ಭರವಸೆಗಳನ್ನು ಈಡೇರಿಸುವ ವಿಶ್ವಾಸಾರ್ಹತೆ ಮತ್ತು ಸಹಕಾರದಿಂದ ಹಿಡಿದು ಸಂಘರ್ಷದವರೆಗಿನ ಶೈಲಿಯು ರಾಜಕೀಯ ಪಾತ್ರದಾರಿಗಳ ಹೆಚ್ಚುವರಿ ಮಹತ್ವವಾಗಿರುತ್ತದೆ. ಅರ್ಹತೆಯಿದ್ದೊ ಇಲ್ಲದೆಯೊ ಅಧ್ಯಕ್ಷ ರೊನಾಲ್ಡ್ ರೇಗನ್ ತನ್ನ ಮೊದಲನೆ ಉದ್ಘಾಟನಾ ಸಮಾರಂಭದಲ್ಲಿ ಇರಾನಿಯರಿಂದ ಅಪಹರಿಸಲ್ಪಟ್ಟ ಒತ್ತೆಯಾಳುಗಳನ್ನು ಬಿಡಿಸಿದ ಯಶಸ್ಸಿನ ಖ್ಯಾತಿಯನ್ನು ಗಳಿಸಿದನು.

ರಾಜಕೀಯ ಜಗತ್ತಿನಲ್ಲಿ ರಾಜಕೀಯ ಪಾತ್ರದಾರಿಯ ಕಾರ್ಯತಂತ್ರದ ಯೋಜನೆಯ ಮತ್ತು ಕುಶಲ ಕೈಚಳಕದ ಸಾಮರ್ಥ್ಯವು ಬೌದ್ಧಿಕ ಸಂಪನ್ಮೂಲ ಎನಿಸಿಕೊಳ್ಳುತ್ತದೆ. ಒಂದು ರಾಜಕೀಯ ತಂತ್ರವು ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಮಾಡುವ ಚುನಾವಣಾ ಪ್ರಚಾರದಂತಹ ದೊಡ್ಡ ಮಟ್ಟದ ಕಾರ್ಯಾಚರಣೆಯ ಒಟ್ಟಾರೆ ಯೋಜನೆಯನ್ನು ಒಳಗೊಂಡಿರಬಹುದು. ಒಟ್ಟಾರೆ ತಂತ್ರಗಾರಿಕೆ ಮತ್ತು ದಿನನಿತ್ಯದ ಕೌಶಲ್ಯದಿಂದ ಕೂಡಿದ ಕಾರ್ಯಗಳನ್ನು ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಮತ್ತು ಹೊಂದಾಣಿಕೆ ಮಾಡಿಕೊಳ್ಳಬೇಕಾದ ಅಗತ್ಯಗಳಿಗೆ ಹೊಂದಿಸಿಕೊಳ್ಳಬೇಕಾಗುತ್ತದೆ, ಮತ್ತು ಅದೇ ಸಮಯದಲ್ಲಿ ಜಯಗಳಿಸುವ ಗುರಿಯನ್ನು ಮತ್ತು ಸಾಧಿಸಲು ಬಯಸಿದ ಉದ್ದೇಶಗಳ ಅಖಂಡತೆಯನ್ನು ನಿಭಾಯಿಸಬೇಕಾಗುತ್ತದೆ. ಇದು ರಾಜಕೀಯ ವಿಜ್ಞಾನಿಗಳ ಅಧ್ಯಯನ ಮತ್ತು ಆಭ್ಯಾಸದ, ಪ್ರಧಾನ ವಿಷಯವೆನಿಸಿದೆ.

ಪ್ರವೇಶಾವಕಾಶ (access) ಎನ್ನುವುದು ರಾಜಕೀಯ ಪಾತ್ರದಾರಿಗಳು ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವ ರಾಜಕೀಯ ನಾಯಕರೊಂದಿಗೆ ಎಷ್ಟು ನಿಕಟವಾದ ಸಂಪರ್ಕವನ್ನು ಹೊಂದಿದ್ದಾರೆ ಎನ್ನುವುದಕ್ಕೆ ಸಂಬಂಧಿಸಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ರಾಬರ್ಟ್ ಸ್ಟ್ರಾಸ್‌ನ ಒಂದು ರಾಜಕೀಯ ಕಥೆಯನ್ನು ಹೆಡ್ರಿಕ್ ಸ್ಮಿತ್ ಉಲ್ಲೇಖಿಸುತ್ತಾನೆ:

“ಅಧಿಕಾರ ಎನ್ನುವುದು ಒಂದು ಆಸಕ್ತಿಕರ ಸಂಗತಿಯೆಂಬುದು ನಿಮಗೆ ತಿಳಿದಿದೆ.” ಸ್ಟ್ರಾಸ್ ಹೀಗೆ ಹೇಳಿದ್ದಾನೆ... “ರಾಜಕೀಯ ಅಧಿಕಾರ ಎನ್ನುವುದು ರಾಜಕೀಯ ಭೋಜನ ಕೂಟಕ್ಕೆ ಹೋಗುವುದಾಗಿತ್ತು ಎಂದು ನಾನು ಯೋಚಿಸುತ್ತಿದ್ದೆ. ನಂತರ ನಾನು ರಾಜಕೀಯ ಅಧಿಕಾರವು ರಾಜಕೀಯ ಭೋಜನ ಕೂಟದ ಆಯೋಜನೆಗೆ ಸಹಾಯಮಾಡುತ್ತಿದೆ ಎಂದೆಣಿಸಿದೆ. ನಂತರ ಸಮಾವೇಶ ನಡೆಯುವ ನಗರದಲ್ಲಿ ಅಭ್ಯರ್ಥಿಯ ಹೋಟೆಲ್‌ನಲ್ಲಿ ಉಳಿಯಲು ಆಹ್ವಾನಿತರಾಗುವುದನ್ನು ರಾಜಕೀಯ ಅಧಿಕಾರ ಎಂದುಕೊಂಡೆ. ಆ ನಂತರ ನಾನು ಸ್ಯಾಮ್ ರೆಬರ್ನ್ ಅವರ ಐಷಾರಾಮಿ ಕೋಣೆಯ ಹೊರಗೆ ದೊಡ್ಡ ಹಜಾರದ ರಾಜಕೀಯ ಸಮ್ಮೇಳನದಲ್ಲಿ ನಿಂತುಕೊಳ್ಳುತ್ತಿದ್ದೆ, ಅದೊಂದು ವಿಶೇಷ ಎನಿಸಿತು. ಆ ನಂತರ ನಾನು ಅಭ್ಯರ್ಥಿಯ ಐಷಾರಾಮಿ ವಾಸ್ತವ್ಯದ ಕೂರುವ ಕೋಣೆಗೆ ಹೋದೆ, ಅದೂ ಸಹ ವಿಶೇಷವೆನಿಸಿತು. ನಂತರ ನನಗೆ ನಿರ್ಧಾರಗಳನ್ನು ಹಿಂದಿನ ಮಲಗುವ ಕೋಣೆಯಲ್ಲಿ ಮಾಡಲಾಗುತ್ತದೆ ಎನ್ನುವುದು ಗೊತ್ತಾಯಿತು. ಅಂತಿಮವಾಗಿ ನನಗೆ ಇತರ ಎಂಟು ಅಥವಾ ಹತ್ತು ಜನರೊಂದಿಗೆ ಮಲಗುವ ಕೋಣೆಗೆ ಆಹ್ವಾನಿಸಲಾಯಿತು ಆಗ ನನಗೆ ತಿಳಿಯಿತು ನಾನು ಒಳಗುಂಪಿಗೆ ಸೇರಿದ್ದೇನೆಂದು. ಅಂತಿಮವಾಗಿ ನನಗೆ ತಿಳಿದಿದ್ದೇನೆಂದರೆ ಅವರು ಶೌಚಾಲಯದ ಕೋಣೆಗೆ ಹೋದರು. ಕೊನೆಯಲ್ಲಿ ನಾನು, ಜಿಮ್ಮಿ ಕಾರ್ಟರ್ ಮತ್ತು ಹ್ಯಾಮಿಲ್ಟನ್ ಜೊರ್ಡಾನ್ ಮಾತ್ರ ಶೌಚಾಲಯದಲ್ಲಿ ಅಂತಿಮವಾದ ನಿರ್ಧಾರವನ್ನು ತೆಗೆದುಕೊಂಡೆವು.” (ಸ್ಮಿತ್ 1988, ಪು. 70-71)

ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ ಅಭ್ಯರ್ಥಿಗಳ ಕ್ಷೇತ್ರಗಳು ಮತ್ತು ಹೊಂದಾಣಿಕೆಗಳು ಅಂತಿಮವಾದ ಸಂಪನ್ಮೂಲಗಳಾಗಿರುತ್ತವೆ. ಹಾಗಾಗಿ ಅವುಗಳ ವಿಶ್ಲೇಷಣೆಯು ರಾಜಕೀಯ ವಿಜ್ಞಾನದ ಬಹುಮುಖ್ಯ ಕ್ಷೇತ್ರವಾಗಿರುತ್ತದೆ: ಸಾರ್ವಜನಿಕ ಅಭಿಪ್ರಾಯ ಮತ್ತು ಮತದಾರರ ವರ್ತನೆ. ಅಮೇರಿಕಾದ ವ್ಯವಸ್ಥೆಯಲ್ಲಿ ಬಹಳಷ್ಟು ರಾಜಕೀಯ ಪಾತ್ರದಾರಿಗಳು ಜನಪ್ರತಿನಿಧಿಗಳಾಗಿರುತ್ತಾರೆ, ಮತ್ತು ಅವರ ಒಂದು ನಿರ್ದಿಷ್ಟ ನಿರ್ಧಾರಕ್ಕೆ ಸಂಬಂಧಿಸಿದಂತೆ ಎಷ್ಟು ಮತಗಳನ್ನು ಒದಗಿಸಬಲ್ಲರು ಎನ್ನುವುದರ ಮೇಲೆ ಅವರು ರಾಜಕಾರಣದಲ್ಲಿ ಎಷ್ಟು ಪ್ರಭಾವಿಗಳು ಎನ್ನುವುದು ಅವಲಂಬಿಸಿರುತ್ತದೆ. ಒಂದು ಚುನಾವಣಾ ನಿರ್ಧಾರದಲ್ಲಿ ಎಷ್ಟು ಮತಕ್ಷೇತ್ರಗಳನ್ನು ಪಡೆಯಬಹುದು ಎನ್ನುವುದು ಮುಖ್ಯವಾದ ಪ್ರಶ್ನೆಯಾಗಿರುತ್ತದೆ.

ಎಷ್ಟು ಮಂದಿ ಶಾಸಕರನ್ನು ಮತವನ್ನು ಚಲಾಯಿಸುವಂತೆ ಒಂದಲ್ಲ ಒಂದು ವಿಧದಲ್ಲಿ ಒಟ್ಟಿಗೆ ತರಬಹುದು ಎನ್ನುವುದು ಶಾಸನೀಯ ಚರ್ಚಾಂಶಗಳನ್ನು ನಿರ್ಧರಿಸುತ್ತದೆ. ಈ ಹಂತದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ರಾಜಕೀಯ ತಂತ್ರವಾಗಿರುತ್ತದೆ (ರಾಜಕೀಯ ವಿಜ್ಞಾನದ ಕ್ಷೇತ್ರದಲ್ಲಿ). ಈ ಪ್ರಕ್ರಿಯೆಯಲ್ಲಿ ಮತಕ್ಷೇತ್ರಗಳು ತಮ್ಮ ಪಾತ್ರವನ್ನು ಇನ್ನೂ ಉಳಿಸಿಕೊಂಡಿರುತ್ತವೆ. ಉದಾಹರಣೆಗೆ, ವಶೀಲಿಗಾರರು ಶಾಸಕರನ್ನು ಭೇಟಿಮಾಡಿ, ತಮ್ಮ ಮತಕ್ಷೇತ್ರದ ಎಷ್ಟು ಮತದಾರರು ವಶೀಲಿಗಾರರ ಹಿತಾಸಕ್ತ ಗುಂಪಿನ ಸದಸ್ಯರಾಗಿದ್ದಾರೆ ಎಂದು ತಿಳಿಸುತ್ತಾರೆ. ಅಧ್ಯಕ್ಷ(ಅಥವಾ ಗವರ್ನರ್)ನು ಆತನ/ಆಕೆಯ ವಿಷಯವನ್ನು ಜನರಿಗೆ ನೇರವಾಗಿ ತಿಳಿಸುವ ಮೂಲಕ ಶಾಸಕರುಗಳಿಗೆ ಮನವಿಯನ್ನು ಬರೆಯುವಂತೆ ಅವರನ್ನು ಒತ್ತಾಯಿಸುತ್ತಾನೆ.

ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಒಬ್ಬ ರಾಜಕೀಯ ಪಾತ್ರದಾರಿಯು ಕಾರ್ಯಾಚರಣೆಗೆ ತರುವ ಒಟ್ಟಾರೆ ಅಧಿಕಾರ ಸಂಪನ್ಮೂಲಗಳು ಅವನ/ಳ ಪ್ರಭಾವವಾಗಿರುತ್ತದೆ. ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಒಬ್ಬನೇ ಒಬ್ಬ ರಾಜಕೀಯ ನಿರ್ಧಾರವನ್ನು ತೆಗೆದುಕೊಳ್ಳುವ ವ್ಯಕ್ತಿಯಿಂದ ರಾಜಕೀಯ ನಿರ್ಧಾರವನ್ನು ಕೈಗೊಳ್ಳಬಹುದು. ಆದರೆ, ಬಹಳಷ್ಟು ಸಂದರ್ಭಗಳಲ್ಲಿ ಅಂತಿಮ ನಿರ್ಧಾರವು ಮತದಾರ ಕ್ಷೇತ್ರಗಳಲ್ಲಿ ಅಥವಾ ಶಾಸಕಾಂಗದ ಸಹಕರ್ಮಿಗಳಿಂದ ಚಲಾಯಿಸುವ ಮತಗಳಿಂದ ರೂಪುಗೊಳ್ಳುತ್ತದೆ. ಅಂತಹ ಸಂದರ್ಭಗಳಲ್ಲಿ ಅಂತಹ ಅಂತಿಮವಾದ ಮತವೇ ಪ್ರಭಾವದ ಪರೀಕ್ಷಣವಾಗಿರುತ್ತದೆ, ಮತ್ತು ಅದರ ಫಲಿತಾಂಶವನ್ನು ರಾಜಕೀಯ ವಿಜ್ಞಾನಿಗಳು ಮತ್ತು ರಾಜಕೀಯ ಪಾತ್ರದಾರಿಗಳಿಂದ ಮಾಪನಮಾಡಲಾಗುತ್ತದೆ.

ಚಟುವಟಿಕೆ

ಅಧಿಕಾರವನ್ನು ಮೌಲ್ಯಮಾಪನ ಮಾಡುವುದು

ಸ್ಥಳೀಯ ಅಥವಾ ರಾಜ್ಯದ ಒಬ್ಬ ರಾಜಕೀಯ ಪಾತ್ರದಾರಿಯನ್ನು ಆರಿಸಿಕೊಳ್ಳಿ. ಆ ಪಾತ್ರದಾರಿಯ ಅಧಿಕಾರವನ್ನು ಮೌಲ್ಯಮಾಪನ ಮಾಡುವ ಸಂಶೋಧನಾ ಯೋಜನೆಯೊಂದನ್ನು ರೂಪಿಸಿ. ಎಂತಹ ಪ್ರಶ್ನೆಗಳನ್ನು ನೀವು ಕೇಳಬಯಸುತ್ತೀರಿ? ಎಂತಹ ದತ್ತಾಂಶಗಳನ್ನು ನೀವು ಕಲೆಹಾಕುತ್ತೀರಿ? ಯಾವ ಮೂಲದಿಂದ? ದತ್ತಾಂಶವನ್ನು ನೀವು ಹೇಗೆ ವಿಶ್ಲೇಷಣೆ ಮಾಡುತ್ತೀರಿ?

ಉನ್ನತ ಹಂತದ ಅಧಿಕಾರವು ಅಗತ್ಯವಾಗಿಯೂ ಒಳ್ಳೆಯದಾಗಿರುತ್ತದೆಯೆ ಅಥವಾ ಇಲ್ಲವೆ? ನಿಮ್ಮ ಉತ್ತರವನ್ನು ವಿವರಿಸಿ.

ಅಧಿಕಾರವನ್ನು ಚಲಾಯಿಸುವುದು

ಅಧಿಕಾರ ಸಮೀಕರಣದ ಮತ್ತೊಂದು ಪಾರ್ಶ್ವವೆನಿಸಿದ, ಅಧಿಕಾರವನ್ನು ವಾಸ್ತವದಲ್ಲಿ ಚಲಾಯಿಸುವ ಪರಿಸ್ಥಿತಿಯತ್ತ ದೃಷ್ಟಿಯನ್ನು ಹಾಯಿಸಿದರೆ, ಸಮಾಜವು ಹೆಚ್ಚುಹೆಚ್ಚಾಗಿ ತಜ್ಞತೆಯನ್ನು ಗಳಿಸುತ್ತಾ ಹೋದಂತೆ ಸಾರ್ವಜನಿಕ ನೀತಿಯ ಕ್ಷೇತ್ರಗಳು ದ್ವಿಗುಣಗೊಳ್ಳುತ್ತಾ ಹೋಗುತ್ತವೆ. ಹಾಗಾಗಿ ಇದರಲ್ಲಿರುವ ಕೆಲವೇ ಕ್ಷೇತ್ರಗಳಲ್ಲಿ ಮಾತ್ರ ರಾಜಕೀಯ ಪಾತ್ರದಾರಿಗಳು ತೊಡಗಿರುತ್ತಾರೆ.

1970ರ ದಶಕದ ಉತ್ತರಾರ್ಧದಲ್ಲಿ ವಾಷಿಂಗ್ಟನ್ ರಾಜ್ಯದ ಗವರ್ನರ್ ಆಗಿದ್ದ ಡೇನಿಯಲ್ ಜೆ. ಇವಾನ್ಸ್, ವಾಷಿಂಗ್ಟನ್ ಡಿ.ಸಿ.ಯಲ್ಲಿ ಎದುರಿಸಿದ ನೀತಿಗತ ಕ್ಷೇತ್ರವನ್ನು ಉಲ್ಲೇಖಿಸುವ “ಉಕ್ಕಿನ ತ್ರಿಕೋನಗಳು” (iron triangles) ಎನ್ನುವ ಪದಗುಚ್ಛವನ್ನು ರಚಿಸಿದನು. ಪ್ರತಿಯೊಂದು ನೀತಿಗತ ಕ್ಷೇತ್ರದಲ್ಲೂ - ಅದು ಸಾರಿಗೆ, ಆರೋಗ್ಯ, ಮಾನವ ಸೇವೆ, ಅಥವಾ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ಹೀಗೆ ಯಾವುದೇ ಆಗಿರಲಿ - ಸಾಪೇಕ್ಷವಾಗಿ ಸ್ವತಂತ್ರವಾದ, ಪ್ರತ್ಯೇಕವಾಗಿ ಕಾರ್ಯನಿರ್ವಹಿಸುವ ಒಂದು ಉಪಕ್ಷೇತ್ರವನ್ನು ಗವರ್ನರ್ ಇವಾನ್ಸ್ ಗುರುತಿಸಿದನು. ಉದಾಹರಣೆಗೆ, ಶಿಕ್ಷಣ ಕ್ಷೇತ್ರದಲ್ಲಿದ್ದ ಹಲವು ಉಪಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣದ ಉಪಕ್ಷೇತ್ರವು ಒಂದಾಗಿತ್ತು. ಇತರ ಉಪಕ್ಷೇತ್ರಗಳಲ್ಲಿರುವಂತೆ ಉನ್ನತ ಶಿಕ್ಷಣದ ನೀತಿ ರಚನೆಯು ಪ್ರತಿಯೊಂದು ಸರಕಾರದಲ್ಲೂ ಮೂರು ವಿಧದ ಪಾತ್ರದಾರಿಗಳ ಗುಂಪನ್ನು ಒಳಗೊಂಡಿತ್ತು: (1) ಸಂಬಂಧಪಟ್ಟ ಶಾಸನೀಯ ಸಮಿತಿಗಳು ಮತ್ತು ಉಪಸಮಿತಿಗಳ ನಾಯಕರುಗಳು, (2) ಸಂಬಂಧಪಟ್ಟ ಸರಕಾರಿ ನಿಯೋಗಗಳ ಮುಖ್ಯಸ್ಥರುಗಳು, (3) ಸಂಬಂಧಪಟ್ಟ ಹಿತಾಸಕ್ತ ಗುಂಪುಗಳ ಪ್ರತಿನಿಧಿಗಳು. ವಿವಾದಗ್ರಸ್ತವಲ್ಲದ ಚರ್ಚಾಂಶಗಳ ವಿಷಯಗಳ ಸಂದರ್ಭದಲ್ಲಿ ಈ ಪಾತ್ರದಾರಿಗಳು ಚರ್ಚಾಂಶಗಳ ಸಮಸ್ಯೆಗಳನ್ನು ಬಗೆಹರಿಸುತ್ತಾ ಮತ್ತು ಸಮಸ್ಯೆಗಳು ಉದ್ಭವಿಸಿದಾಗ ನಿರ್ಧಾರಗಳನ್ನು ಕೈಗೊಳ್ಳುತ್ತಾ ನಿಯಮಿತವಾಗಿ ಮತ್ತು ಹೆಚ್ಚಾಗಿ ದಿನನಿತ್ಯದ ರೂಢಿಯಂತೆ ಪರಸ್ಪರ ವ್ಯವಹರಿಸುತ್ತಾರೆ. ಕೆಲವು ರಾಜಕೀಯ ಪಾತ್ರದಾರಿಗಳು ಒಂದು ನೀತಿಗತ ಕ್ಷೇತ್ರದಿಂದ ಮತ್ತೊಂದಕ್ಕೆ ಬದಲಾಯಿಸುತ್ತಾರೆ ಮತ್ತು ಅತ್ಯಂತ ಕಡಿಮೆ ಸಂಖ್ಯೆಯ ರಾಜಕೀಯ ನಾಯಕರುಗಳಿಗೆ ವಿವಾದಗ್ರಸ್ತವಲ್ಲದ ಚರ್ಚಾಂಶಗಳಲ್ಲಿ ಭಾಗವಹಿಸಲು ಸಮಯವಿರುತ್ತಿತ್ತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ರಾಜಕೀಯ ಅಧಿಕಾರವನ್ನು ಚಲಾಯಿಸಲು ಅಧಿಕಾರದ ವಿವಿಧ ಸಂಪನ್ಮೂಲಗಳು ಮತ್ತು ತತ್ವಗಳಿರುತ್ತವೆ. ಆದರೆ, ಒಂದು ಸಂಕೀರ್ಣವಾದ ಪ್ರಜಾಪ್ರಭುತ್ವ ಸಮಾಜದಲ್ಲಿ ರಾಜಕೀಯ ಅಧಿಕಾರವನ್ನು ಪಡೆದುಕೊಳ್ಳುವ, ಉಪಯೋಗಿಸುವ, ಮತ್ತು ಅದನ್ನು ಕಾಪಾಡಿಕೊಳ್ಳುವುದಕ್ಕೆ ಯಾವುದೇ ಸರಳವಾದ ಸೂತ್ರವಿರುವುದಿಲ್ಲ.

ಚಿತ್ರ 7.2



ಬಹಳಷ್ಟು ಜನರಿಗೆ ಅಧ್ಯಕ್ಷತೆಯು ಅತ್ಯಂತ ಪ್ರಭಾವಿ ಹುದ್ದೆಯಾಗಿದೆ. ಹಾಗಿದ್ದೂ ಟ್ರೂಮನ್‌ನಿಂದ ಹಿಡಿದು ಬುಷ್‌ವರೆಗೆ ತಾವು ಮಾಡಬೇಕಾಗಿದ್ದನ್ನು ಮಾಡಲು ಅಸಮರ್ಥರಾಗಿದ್ದರ ಬಗ್ಗೆ ದೂರಿದ್ದಾರೆ. ನಿಮ್ಮ ಪ್ರಕಾರ, ಅಧ್ಯಕ್ಷತೆಯ ಬಗ್ಗೆ ಯಾವ ಅಭಿಪ್ರಾಯ ಸರಿಯಾದುದಾಗಿದೆ? ಮೂಲ: ಬೆಟ್‌ಮನ್ ಆರ್ಕೈವ್.

## ನ್ಯಾಯ ಮತ್ತು ಸರಕಾರದ ಪಾತ್ರಗಳು

ನಾವು ಮುಂದೆ ನೋಡುವಂತೆ ನ್ಯಾಯವು ಸರಕಾರ ಮತ್ತು ತಾನು ಒಂದು ಭಾಗವಾಗಿರುವ ನಾಗರಿಕ ಸಮಾಜದ ಗುರಿಯಾಗಿದೆ. ಅಂದರೆ ಸರಕಾರದ ಪ್ರತಿಯೊಂದು ನಿರ್ಧಾರ ಅಥವಾ ಕ್ರಿಯೆಯನ್ನು ಮೊದಲು ಮತ್ತು ಎಲ್ಲಕ್ಕಿಂತಲೂ ಮುಖ್ಯವಾಗಿ, ನ್ಯಾಯದ ಮುಖ್ಯ ತತ್ವದ ಮಾನದಂಡದ ಮೂಲಕ ಅಳೆಯಲಾಗುತ್ತದೆ. ನ್ಯಾಯ ಅಂದರೆ ನಿಷ್ಪಕ್ಷಪಾತತೆ; ಒಂದು ನ್ಯಾಯಯುತ ಸಮಾಜದಲ್ಲಿ ತಮ್ಮ ಸಾರ್ವಜನಿಕ ಸಂಸ್ಥೆಗಳಿಂದ ಜನರು ನಿಷ್ಪಕ್ಷ ನಿರ್ಧಾರಗಳು ಮತ್ತು ನಡವಳಿಕೆಯನ್ನು ನಿರೀಕ್ಷಿಸುತ್ತಾರೆ. ಆದರೆ ನಿಷ್ಪಕ್ಷಪಾತತೆ ಎಂದರೇನು, ಮತ್ತು ಸ್ವಾತಂತ್ರ್ಯಕ್ಕೆ ಬೆಲೆ ಕೊಡುವ ಒಂದು ಸಮಾಜದಲ್ಲಿ ಅದನ್ನು ಹೇಗೆ ವ್ಯಾಖ್ಯಾನಿಸಲಾಗುತ್ತದೆ ಮತ್ತು ಕಾರ್ಯಾನ್ವಿತಗೊಳಿಸಲಾಗುತ್ತದೆ?

## ಸ್ವಾತಂತ್ರ್ಯ ಮತ್ತು ನ್ಯಾಯದ ವಿಶಿಷ್ಟತೆ

"ಆಳಲ್ಪಡುವವರ ಒಪ್ಪಿಗೆಯ ಮುಖಾಂತರ ಪಡೆದ ನ್ಯಾಯಯುತ ಅಧಿಕಾರದಿಂದ ಸರಕಾರಗಳು ಜನರ ನಡುವೆ ಸ್ಥಾಪಿತವಾಗಿವೆ" ಅವು "ಬದುಕುವ, ಸಂತೋಷವನ್ನರಸುವ ಮತ್ತು ಸ್ವಾತಂತ್ರ್ಯದ ನಿಟ್ಟಿನ ಪರಭಾರೆ ಮಾಡಲಾಗದ ಕೆಲವು ನಿರ್ದಿಷ್ಟ ಹಕ್ಕುಗಳನ್ನು" ರಕ್ಷಿಸುತ್ತವೆ ಎನ್ನುವುದು ಸ್ವಾತಂತ್ರ್ಯ ಘೋಷಣೆಯ ಪ್ರತಿಪಾದನೆಯಾಗಿದೆ. 1787ರ ಅಮೇರಿಕಾ ಸಂವಿಧಾನವು ಘೋಷಣೆಯಲ್ಲಿ ತಿಳಿಸಿರುವಂತೆ, ಸರಕಾರದ ಹಕ್ಕುಗಳ-ನಿರ್ದೇಶಿತ ಉದ್ದೇಶವನ್ನು ಮೀರಿ: "ಮತ್ತಷ್ಟು ಪರಿಪೂರ್ಣವಾದ ಒಕ್ಕೂಟವನ್ನು ರಚಿಸುವುದಕ್ಕಾಗಿ, ನ್ಯಾಯವನ್ನು ಸ್ಥಾಪಿಸುವುದಕ್ಕಾಗಿ, ದೇಶದೊಳಗಿನ ಶಾಂತಿಯನ್ನು ಕಾಪಾಡುವುದಕ್ಕಾಗಿ, ಎಲ್ಲರಿಗೂ ಸಮಾನ ರಕ್ಷಣೆ ನೀಡಲು, ಎಲ್ಲರ ಕಲ್ಯಾಣವನ್ನು ಉತ್ತೇಜಿಸಲು, ಮತ್ತು ನಮಗೂ ಮತ್ತು ನಮ್ಮ ಮುಂದಿನ ಜನಾಂಗಕ್ಕೂ ಸ್ವಾತಂತ್ರ್ಯದ ಭರವಸೆಯನ್ನು ಖಾತ್ರಿಪಡಿಸಿಕೊಳ್ಳಲು" ತನ್ನ ಸ್ಥಾಪನೆಯನ್ನು ಹೆಮ್ಮೆಯಿಂದ ಘೋಷಿಸಿಕೊಳ್ಳುತ್ತದೆ. ತಮ್ಮ ನಿಷ್ಠೆಯ ಪ್ರತಿಜ್ಞೆಯಲ್ಲಿ ಪೌರರು "ಎಲ್ಲರಿಗೂ ಸ್ವಾತಂತ್ರ್ಯ ಮತ್ತು ನ್ಯಾಯದೊಂದಿಗೆ" ಗಣರಾಜ್ಯಕ್ಕೆ ತಮ್ಮ ನಿಷ್ಠೆಯನ್ನು ತೋರಿಸಬೇಕೆಂದು ನಿರೀಕ್ಷಿಸಲಾಗುತ್ತದೆ.

ಆಗಾಗ್ಗೆ ಗೊಂದಲಮಯವೆನಿಸುವ ಈ ಅಂಶಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ. ಯಾವ ತತ್ವಗಳನ್ನು ಎಲ್ಲಕ್ಕಿಂತ ಹೆಚ್ಚು ಬಾರಿ ಉಲ್ಲೇಖಿಸಲಾಗಿದೆ? ಏಕೆ? ಈ ತತ್ವಗಳಲ್ಲಿ ಯಾವುದಾದರೂ ಪರಸ್ಪರ ಸಂಬಂಧ ಅಥವಾ ಕ್ರಮಗಳಿವೆಯೆ?

ಅಮೇರಿಕಾದ ರಾಜನೀತಿಯ ಸಂಸ್ಥಾಪಕ ನಿರ್ಮಾಣದ ದಾಖಲೆಗಳಾದ್ಯಂತ, ರಾಜಕೀಯ ತತ್ವಗಳ ಎರಡು ವಿಧಗಳು ಪುರಾವರ್ತಿತವಾಗುತ್ತವೆ. ಮೊದಲಿನ ವಿಧವು ಈಗಾಗಲೇ ಚರ್ಚಿಸಲ್ಪಟ್ಟ ಸರಕಾರಕ್ಕೆ ತಳಹದಿಯಾಗಿರುವ ಮತ್ತು ಅದನ್ನು ಕಾಯ್ದುಕೊಂಡು ಬರುವ ತತ್ವಗಳನ್ನು ಒಳಗೊಂಡಿದೆ - ಅಂದರೆ ಗಣರಾಜ್ಯ ವಾದ [ಜನರ ಒಪ್ಪಿಗೆ (popular consent)] ಮತ್ತು ಸಂವಿಧಾನಾತ್ಮಕವಾದ [ಕಾನೂನಿನ ಆಳ್ವಿಕೆ (constitutionalism)] ತತ್ವಗಳು. ರಾಜಕೀಯ ತತ್ವಗಳ ಎರಡನೆಯ ವಿಧವು ಸರಕಾರವು ಯಾವ ಗುರಿಗಳತ್ತ ನಿರ್ದೇಶಿತವಾಗಿದೆಯೊ ಅದಕ್ಕೆ ಸಂಬಂಧಿಸಿದೆ. ಇದರಲ್ಲಿ ಅಡಕವಾಗಿರುವ ಮತ್ತು ಆ ದಾಖಲೆಗಳಲ್ಲಿ ಅತ್ಯಂತ ಹೆಚ್ಚು ಉಲ್ಲೇಖಿತವಾಗುವ ಎರಡು ಪರಿಭಾಷೆಗಳೆಂದರೆ: ಸ್ವಾತಂತ್ರ್ಯ ಮತ್ತು ನ್ಯಾಯ.

ಸ್ವಾತಂತ್ರ್ಯವನ್ನು ಅದರ ರಾಜಕೀಯ ಸಂದರ್ಭದಲ್ಲಿ, "ಎಲ್ಲಿಯವರೆಗೆ ನಾವು ಅನುಭವಿಸುವ ಸ್ವಾತಂತ್ರ್ಯವು ಕಾನೂನುಬಾಹಿರವಾಗಿ ಇತರರ ಸ್ವಾತಂತ್ರ್ಯವನ್ನು ನಿರ್ಬಂಧಿಸುವುದಿಲ್ಲವೊ ಅಲ್ಲಿಯವರೆಗೆ ಕ್ರಿಯೆಯಲ್ಲಿ ತೊಡಗಲು, ಯೋಚಿಸಲು, ತಮ್ಮನ್ನು ಅಭಿವ್ಯಕ್ತಿಸಲು, ಮತ್ತು ತನಗಿಷ್ಟ ಬಂದಂತೆ ಆಯ್ಕೆ ಮಾಡಿಕೊಳ್ಳಲು ಇತರರು ಮನಬಂದಂತೆ ನಮ್ಮನ್ನು ಅಡ್ಡಪಡಿಸದಿರುವ ಸ್ವಾತಂತ್ರ್ಯ" ಎಂದು ವ್ಯಾಖ್ಯಾನಿಸಬಹುದಾಗಿದೆ. ಅಮೇರಿಕಾದ ವ್ಯವಸ್ಥೆಯಲ್ಲಿ ಹಕ್ಕುಗಳ ಮಸೂದೆಯಲ್ಲಿ ಮತ್ತು ನಂತರದ ಅಮೇರಿಕಾ ಸಂವಿಧಾನಕ್ಕೆ ಮಾಡಿದ ತಿದ್ದುಪಡಿಗಳಲ್ಲಿ ಒಳಗೊಂಡಿರುವ ಸ್ವಾತಂತ್ರ್ಯಗಳು ಅತ್ಯಂತ ಮೌಲ್ಯಯುತವಾದದ್ದೆಂದು ಭಾವಿಸಲಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ವ್ಯಕ್ತಿಗಳು ತಮ್ಮ ಗುರಿಗಳನ್ನು ಬೆನ್ನತ್ತಲು ಅನುವಾಗುವಂತೆ ಅವರನ್ನು ಮುಕ್ತರನ್ನಾಗಿಸುವುದರಿಂದ ಅಮೇರಿಕಾದ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಪ್ರಕ್ರಿಯಾತ್ಮಕವಾದುದು ಎಂದು ಹೇಳಬಹುದು. ಆದರೆ ಗುರಿಗಳಲ್ಲೆ ಅಡಕವಾಗಿರುವ ಸತ್ವವನ್ನು ಖಾತ್ರಿಪಡಿಸುವ ರೀತಿಯಲ್ಲಿ ಈ ಪರಿಕಲ್ಪನೆಯನ್ನು ವಿಸ್ತರಿಸುವುದು ಅತ್ಯಂತ ಅಪರೂಪವಾಗಿದೆ. ಮತ್ತೊಂದು ರೀತಿಯಲ್ಲಿ ಇದನ್ನು ಹೇಳುವುದಾದರೆ, ಸ್ವಾತಂತ್ರ್ಯ ಸಂತೋಷದ ಬೆನ್ನತ್ತುವಿಕೆಯನ್ನು ಶಕ್ತಗೊಳಿಸುತ್ತದೆಯೇ ಹೊರತು ಸಂತೋಷವನ್ನಲ್ಲ. ಹಾಗಾಗಿ, ಸ್ವಾತಂತ್ರ್ಯವು

ಒಂದು "ಮೊದಲ ತತ್ವವಾಗಿದೆ" ಏಕೆಂದರೆ ಅದರ ಹೊರತಾಗಿ ತಲುಪಲಾಗದ ಇತರೆ ಮಾನವ ಗುರಿಗಳಿಗೆ ಅದು ಸಾಧಕ(instrumental)ವಾಗಿದೆ.

ಸ್ವಾತಂತ್ರ್ಯವು ವ್ಯಕ್ತಿಯ ಕ್ರಿಯೆಯ ಸಾಧಕ ಗುರಿಯಾಗಿದ್ದರೆ, ನ್ಯಾಯ ಎನ್ನುವುದು ಸರಕಾರಿ ಕ್ರಿಯೆಯ ಸಾಧಕ ಗುರಿಯೆನಿಸಿದೆ. ಜೇಮ್ಸ್ ಮೆಡಿಸನ್ ತನ್ನ ಫೆಡರಲಿಸ್ಟ್ ಲೇಖನಗಳಲ್ಲಿ ಸರಕಾರದ ರಚನೆಯ ಕುರಿತ ತನ್ನ ಚರ್ಚೆಯನ್ನು ಈ ಅವಲೋಕನದೊಂದಿಗೆ ಮುಕ್ತಾಯಗೊಳಿಸುತ್ತಾನೆ: "ನ್ಯಾಯವು ಸರಕಾರದ ಗುರಿಯಾಗಿದೆ, ಇದು ನಾಗರಿಕ ಸಮಾಜದ ಗುರಿಯಾಗಿದೆ. ಅದನ್ನು ಹಿಂದೆಯೂ ಬೆನ್ನತ್ತಲಾಗಿದೆ ಮತ್ತು ಅದು ಪ್ರಾಪ್ತವಾಗುವವರೆಗೂ, ಅಥವಾ ಬೆನ್ನತ್ತುವಿಕೆಯಲ್ಲಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವವರೆಗೂ ಅದರ ಬೆನ್ನತ್ತಲಾಗುತ್ತದೆ" (ದಿ ಫೆಡರಲಿಸ್ಟ್ 51).

ಅಧಿಕಾರ, ಸ್ವಾತಂತ್ರ್ಯ ಮತ್ತು ನ್ಯಾಯದ ನಡುವಿನ ಸಂಬಂಧವನ್ನು ಹೀಗೆ ವಿವರಿಸಬಹುದು: ನಾಗರಿಕ ಸಮಾಜಗಳಲ್ಲಿ ಸರಕಾರವು ಸರ್ವೋಚ್ಚ ಅಧಿಕಾರವನ್ನು ಹೊಂದಿರುತ್ತದೆ, ಅಂದರೆ ಇತರರು ಕ್ರಿಯೆಯಲ್ಲಿ ತೊಡಗುವಂತೆ ಒತ್ತಾಯಪಡಿಸುವ ನ್ಯಾಯಸಮ್ಮತವಾದ ಅಧಿಕಾರ. ವಾಸ್ತವದಲ್ಲಿ ಸರಕಾರವನ್ನು ಇತರ ಸಂಸ್ಥೆಗಳಿಂದ ಬೇರ್ಪಡಿಸುವ ಅಂಶ ಇದೇ ಆಗಿದೆ. ಸರ್ಕಾರದ ಯಾವುದೇ ದಮನಕಾರಿ ಕ್ರಿಯೆಯ ಪರಿಣಾಮ ವ್ಯಕ್ತಿಯ ಸ್ವಾತಂತ್ರ್ಯದ ಅತಿಕ್ರಮಣವಾಗಿರುತ್ತದೆ. ನ್ಯಾಯ ಎನ್ನುವುದು ಅಂತಹ ಕ್ರಿಯೆಯ ನ್ಯಾಯ ನಿರ್ಣಯ ಮಾಡುವ ಮೊದಲ ತತ್ವ ಅಥವಾ ಮಾನದಂಡವಾಗಿರುತ್ತದೆ. ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಎನ್ನುವುದು ಅನಿರ್ಬಂಧಿತ ಹಕ್ಕಾಗಿರುವುದಿಲ್ಲ. ಅದನ್ನು ಸರಕಾರದ ಕ್ರಿಯೆಯು ಸೀಮಿತಗೊಳಿಸಬಹುದು. ಆದರೆ ಅಂತಹ ಕ್ರಿಯೆ ನ್ಯಾಯಯುತವಾಗಿದ್ದರೆ ಮಾತ್ರ. ಈ ಅರ್ಥದಲ್ಲಿ ಸ್ವಾತಂತ್ರ್ಯ ಘೋಷಣೆಯು ನ್ಯಾಯ ಮತ್ತು ಅಧಿಕಾರವನ್ನು "ನ್ಯಾಯಯುತ ಅಧಿಕಾರಗಳು" ಎಂಬ ವಿಚಾರದ ನಿಟ್ಟಿನಲ್ಲಿ ಒಟ್ಟುಗೂಡಿಸುತ್ತದೆ. ಆದರೆ ನ್ಯಾಯಯುತ ಅಧಿಕಾರಗಳು ಎಂದರೇನು? ಇದು ನಮ್ಮನ್ನು ನ್ಯಾಯದ ಪರಿಕಲ್ಪನೆಯೆಡೆಗೆ ಕೊಂಡೊಯ್ಯುತ್ತದೆ.

## ನ್ಯಾಯದ ವ್ಯಾಖ್ಯಾನ

ಅಧಿಕಾರ ಮತ್ತು ಸ್ವಾತಂತ್ರ್ಯದ ಹಾಗೆ ನ್ಯಾಯವು ರಾಜಕೀಯ ವಿಜ್ಞಾನಕ್ಕೆ ಮುಖ್ಯವಾದ ಮತ್ತು ವೈಜ್ಞಾನಿಕ ವ್ಯಾಖ್ಯಾನಕ್ಕೆ ದಕ್ಕುವ ಒಂದು ಸಂಕೀರ್ಣ ಮತ್ತು ಅಸ್ಪಷ್ಟ ಪರಿಕಲ್ಪನೆಯಾಗಿದೆ. ನ್ಯಾಯವನ್ನು "ಸೂಕ್ತವಾದ ಕಾನೂನಿನ ಪ್ರಕ್ರಿಯೆ ಹಾಗೂ ಪ್ರಮಾಣಕ್ಕೆ ಅನುಗುಣವಾದ ಸಮಾನತೆಯ ಸೂಕ್ತ ಪರಿಗಣನೆಯನ್ನು ಆಧರಿಸಿ ನಿರ್ಧರಿತವಾದ ನಿಷ್ಪಕ್ಷಪಾತತೆ" ಎಂದು ವ್ಯಾಖ್ಯಾನಿಸಬಹುದಾಗಿದೆ. ಈ ವ್ಯಾಖ್ಯಾನಕ್ಕೆ ಮೂರು ಮುಖಗಳಿವೆ: ನಿರ್ಧಾರ ಕೈಗೊಳ್ಳುವವರು ವಿವಿಧ ಜನರಿಗೆ ಅನುಕೂಲ ಹಾಗೂ ಹೊರೆಗಳನ್ನು ಹೊರಿಸಲೇಬೇಕಾದ ಪ್ರಮಾಣಕ್ಕೆ ಅನುಗುಣವಾದ ಸಮಾನತೆಯ ನಿಟ್ಟಿನ ನಿಷ್ಪಕ್ಷಪಾತತೆ; ಒಬ್ಬ ವ್ಯಕ್ತಿಯ ಕ್ರಿಯೆಗಳನ್ನು ಪ್ರಭಾವಿಸುವ ಪರಿಸ್ಥಿತಿಗಳ ವೈವಿಧ್ಯತೆಯನ್ನು ನಿರ್ಧಾರ ಕೈಗೊಳ್ಳುವವರು ಗಣನೆಗೆ ತೆಗದುಕೊಳ್ಳುವ ನಿಟ್ಟಿನ ಸೂಕ್ತ ಪರಿಗಣನೆ; ಮತ್ತು ನಿರ್ಧಾರ ಕೈಗೊಳ್ಳುವವರು ತಮ್ಮ ನಿರ್ಧಾರವನ್ನು ಕಾನೂನಿಗೆ ಅನುಸಾರವಾಗಿ ಕೈಗೊಳ್ಳುವ ಸೂಕ್ತ ಪ್ರಕ್ರಿಯೆ.

ಪ್ರಮಾಣಾನುಗುಣತೆ (propotionality): ನ್ಯಾಯದ ಮೂಲವೆನಿಸಿರುವ ಪ್ರಮಾಣಾನುಗುಣತೆ ಎಂದರೆ ಪರಸ್ಪರ ಹೋಲಿಕೆ ಇರುವ ಪರಿಸ್ಥಿತಿಗಳಲ್ಲಿ ಸಮಾನ ಕ್ರಿಯೆಯಲ್ಲಿ ತೊಡಗುವ ಇಬ್ಬರು ವ್ಯಕ್ತಿಗಳನ್ನು ಸಮಾನವಾಗಿ

ಪರಿಗಣಿಸಬೇಕು ಎಂದರ್ಥ. ಈ ಸಾಮಾನ್ಯ ನಿಯಮವನ್ನು ಅಪರಾಧದ ಕಾನೂನಡಿಯಲ್ಲಿ ತಪ್ಪು ಮತ್ತು ಸಜೆಯನ್ನು ನಿರ್ಧರಿಸುವ ಸಂದರ್ಭದಲ್ಲಿ, ನಾಗರಿಕ ಕಾನೂನಡಿಯಲ್ಲಿ ಕ್ಲೇಮುಗಳನ್ನು ಹೊಂದಾಣಿಕೆ ಮಾಡುವ ಸಂದರ್ಭದಲ್ಲಿ, ಸಾರ್ವಜನಿಕ ನೀತಿಯನುಸಾರ ದುರ್ಲಭ ಸಂಪನ್ಮೂಲಗಳ ವಿತರಣೆಯಲ್ಲಿ, ಹಣಕಾಸಿನ ನೀತಿಯ ಮೂಲಕ ತೆರಿಗೆಯ ಹೊರೆ ಮತ್ತು ಪ್ರೋತ್ಸಾಹನಗಳ ಹಂಚಿಕೆಯಲ್ಲಿ, ಸಾಂವಿಧಾನಾತ್ಮಕ ಸಂರಚನೆಯಂತೆ ಹಕ್ಕುಗಳನ್ನು ಕೊಡಮಾಡುವಲ್ಲಿ ಅನ್ವಯಿಸಲಾಗುತ್ತದೆ. ಕೆಲವು ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಪ್ರಮಾಣಕ್ಕೆ ಅನುಗುಣವಾದ ಸಮಾನತೆಯು ಪರಿಪೂರ್ಣ ಸಮಾನತೆಯಾಗಿರುತ್ತದೆ. ಉದಾಹರಣೆಗೆ, ಎಲ್ಲ ಪೌರರು (ಹುಟ್ಟಿನಿಂದ ಅಥವಾ ಸ್ವಾಭಾವಿಕ) ಮತದಾನದ ಹಕ್ಕುಗಳಿಗೆ ಅರ್ಹರಾಗಿರುತ್ತಾರೆ. ಆದರೆ ಬಹಳಷ್ಟು ಸಂದರ್ಭಗಳಲ್ಲಿ ಪ್ರಮಾಣಕ್ಕೆ ಅನುಗುಣವಾದ ಸಮಾನತೆಯಡಿಯಲ್ಲಿ ವಿಭಿನ್ನವಾದ ಅನುಕೂಲಗಳನ್ನು ಮತ್ತು ಹೊರೆಗಳನ್ನು ನಿಗದಿಪಡಿಸಬೇಕಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಅವನಿಗೆ ಅಥವಾ ಅವಳಿಗೆ ಸಲ್ಲಬೇಕಾದ ಹೊರೆ ಅಥವಾ ಅನುಕೂಲಗಳನ್ನು ಅದೇ ಪರಿಸ್ಥಿತಿಯಲ್ಲಿರುವ ಇತರರಿಗೆ ಸಂಬದ್ಧವಾಗಿರುವಂತೆ ಮಂಜೂರು ಮಾಡಲು ಒಂದು ವಿವೇಚನಾಯುಕ್ತವಾದ ಆಧಾರವನ್ನು ನಿರ್ಧರಿಸುವುದು ನ್ಯಾಯಯುತ ರಾಜಕೀಯದ ಬೃಹತ್ ಸವಾಲಾಗಿರುತ್ತದೆ.

ಕಾನೂನುಬಾಹಿರ ವಲಸೆ ಮಕ್ಕಳಿಗೆ (ಕಾನೂನಿನ ಅನುಮತಿಯನ್ನು ಪಡೆಯದೆ ಅಮೇರಿಕಾಕ್ಕೆ ಬಂದ ಮ್ಕಕಳು) ಉಚಿತ ಸಾರ್ವಜನಿಕ ಶಿಕ್ಷಣವನ್ನು ನಿರಾಕರಿಸಿದ ಟೆಕ್ಸಾಸ್ ಶಿಕ್ಷಣ ಸಂಹಿತೆಯ ಅವಕಾಶಗಳನ್ನು ಅಮೇರಿಕಾದ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ ಪ್ಲೈಲರ್ ಎದುರು ಡೊ (1982) ಮೊಕದ್ದಮೆಯನ್ನೆ ತೆಗದುಕೊಳ್ಳಿ. ಒಂದೇ ಪರಿಸ್ಥಿತಿಯಲ್ಲಿರುವ ಎಲ್ಲ ವ್ಯಕ್ತಿಗಳನ್ನು ಸಮಾನವಾಗಿ ಪರಿಗಣಿಸಬೇಕೆಂದು ಹದಿನಾಲ್ಕನೆ ತಿದ್ದುಪಡಿಯ ಸಮಾನ ರಕ್ಷಣೆಯ ಕಲಮು ನಿರ್ದೇಶಿಸುತ್ತದೆ. ಅದೇ ಸಮಯದಲ್ಲಿ ವಿವಾದಿತ ಹಕ್ಕಿಗೆ (ಅಂದರೆ, ಶಿಕ್ಷಣದ ಹಕ್ಕು) ಸಂಬಂಧಿಸಿದಂತೆ ಅದು ಮೂಲಭೂತ ಹಕ್ಕಲ್ಲ ಎಂದು ಈ ಮೊದಲೆ ಸರ್ವೋಚ್ಛ ನ್ಯಾಯಾಲಯವು ನಿರ್ಧರಿಸಿರುವ ಸಂದರ್ಭದಲ್ಲಿ ಸರಕಾರದ ಪ್ರಮುಖ ಧ್ಯೇಯೋದ್ಧೇಶಗಳನ್ನು ಈಡೇರಿಸುವ ಅಥವಾ ಸರಕಾರದ ಪರ್ಯಾಪ್ತ ಹಿತಾಸಕ್ತಿಗಳನ್ನು ಕಾಪಾಡುವುದಕ್ಕಾಗಿ ಸರಕಾರವು ವರ್ಗೀಕರಣಗಳನ್ನು ಮಾಡಬಹುದಾಗಿದೆ. ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ಪ್ರಭುತ್ವದ ಪ್ರಮುಖ ಕಾಳಜಿ ಹಣಕಾಸಿಗೆ ಸಂಬಂಧಿಸಿದ್ದೆ ಹೊರತು ತನ್ನ ಗಡಿಯ ವ್ಯಾಪ್ತಿಯಲ್ಲಿ ವಾಸವಿರುವ ಮಕ್ಕಳಿಗೆ ನೀಡಲು ಮುಂದಾಗಿರುವ ಉಚಿತ ಸಾರ್ವಜನಿಕ ಶಿಕ್ಷಣವನ್ನು ಪ್ರತ್ಯೇಕ ಗುಂಪಿನಲ್ಲಿರುವ ಮುಗ್ಧ ಮಕ್ಕಳಿಗೆ ನಿರಾಕರಿಸುವುದಕ್ಕೆ" ಇದು ಒಂದು ಸೂಕ್ತ ಮತ್ತು ಸತ್ವಯುತ ಕಾರಣವಾಗಿರುವುದಿಲ್ಲ ಎನ್ನುವ ನೆಲೆಯಲ್ಲಿ ಸರ್ವೋಚ್ಛ ನ್ಯಾಯಾಲಯವು ಸರಕಾರದ ನಿಲುವನ್ನು ತಿರಸ್ಕರಿಸಿತು.

ಸೂಕ್ತ ಮನ್ನಣೆಯು ನಿರ್ಧಾರ ಕೈಗೊಳ್ಳುವಿಕೆಯ ಪ್ರಕ್ರಿಯೆಯ ಬಗ್ಗೆ ಇರುವ ನಿರ್ದಿಷ್ಟವಾದ ನಿರೀಕ್ಷೆಗಳನ್ನು ಪ್ರತಿಬಿಂಬಿಸುತ್ತದೆ. ಸಾರ್ವಜನಿಕ ನಿರ್ಧಾರಗಳು "ಚಿಂತನೆ ಮತ್ತು ಆಯ್ಕೆಯ"ನ್ನು ಆಧರಿಸಿರಬೇಕೆ ಹೊರತು "ಆಕಸ್ಮಿಕ ಮತ್ತು ಬಲದ" ಮೇಲಲ್ಲ ಎನ್ನುವ ದಿ ಫೆಡರಲಿಸ್ಟ್ ಸಂಖ್ಯೆ 1ರಲ್ಲಿ ಅಭಿವ್ಯಕ್ತವಾಗಿರುವ ಹ್ಯಾಮಿಲ್ಟೋನಿಯನ್ ನಂಬಿಕೆಯು ಮೊದಲನೆಯ ನಿರೀಕ್ಷೆ. ಚಿಂತನೆಯು ಎಲ್ಲ ಆಯಾಮಗಳನ್ನು ನಿಷ್ಪಕ್ಷಪಾತವಾಗಿ ನೋಡುವ ಮತ್ತು ಪರಿಗಣಿಸುವ ವಿವೇಚನಾ ಪ್ರಕ್ರಿಯೆಯ ಭಾಗವಾಗಿರುತ್ತದೆ ಎನ್ನುವುದು ಎರಡನೆಯ ನಿರೀಕ್ಷೆಯಾಗಿದೆ. ವಿಚಾರ ವಿಮರ್ಶೆಯ ಪ್ರಕ್ರಿಯೆಯು ಕನಿಷ್ಠ ಪಕ್ಷ ವಿವೇಚನೆಯ ಮಾನದಂಡಕ್ಕನುಗುಣವಾಗಿ ಅಂತಿಮವಾದ ನಿರ್ಧಾರಗಳನ್ನು ಕೈಗೊಳ್ಳುತ್ತದೆ ಎನ್ನುವುದು ಸೂಕ್ತ ಮನ್ನಣೆಯ ಅಂತಿಮ ಅಂಶವಾಗಿದೆ.

“ಬದುಕು, ಸ್ವಾತಂತ್ರ್ಯ, ಅಥವಾ ಆಸ್ತಿ”ಯನ್ನು ರಾಷ್ಟ್ರೀಯ ಮತ್ತು ರಾಜ್ಯ ಸರಕಾರಗಳು ಕ್ರಮಾನುಸಾರವಾಗಿ ಮನಬಂದಂತೆ ಕಸಿದುಕೊಳ್ಳದಂತೆ ರಕ್ಷಣೆ ನೀಡಲು ಅಮೇರಿಕಾ ಸಂವಿಧಾನದ ಐದನೆ ಮತ್ತು ಹದಿನಾಲ್ಕನೆ ತಿದ್ದುಪಡಿಯು ಕಾನೂನಿನ ಸೂಕ್ತ ಪ್ರಕ್ರಿಯೆಯನ್ನು ಖಾತ್ರಿಗೊಳಿಸಿದೆ. ಕನಿಷ್ಠಪಕ್ಷ ಸೂಕ್ತ ಪ್ರಕ್ರಿಯೆಯು ನ್ಯಾಯಿಕ ವಿಚಾರಣೆಯು ನಿಷ್ಪಕ್ಷಪಾತ ಪ್ರಜ್ಞೆಯಿಂದ ನಿರ್ದೇಶಿತವಾಗಿರಬೇಕು ಎನ್ನುವುದನ್ನು ಸೂಚಿಸುತ್ತದೆ. ಡೇನಿಯಲ್ ವೆಬ್‌ಸ್ಟರ್‌ನ ಮಾತಿನಲ್ಲಿ ಹೇಳುವುದಾದರೆ ನ್ಯಾಯಿಕ ವಿಚಾರಣೆಯು “ನಿಂದಿಸುವ ಮೊದಲು ಕೇಳಿಸಿಕೊಳ್ಳಬೇಕು, ವಿಚಾರಣೆಯ ನಂತರವೇ ಮುಂದುವರೆಯಬೇಕು, ಮತ್ತು ವಿಚಾರಣೆಯ ನಂತರವೆ ನ್ಯಾಯನಿರ್ಣಯ ಮಾಡಬೇಕು.” Joint Anti-facist Refuge Committee ಮೊಕದ್ದಮೆಯಲ್ಲಿ ನ್ಯಾಯಮೂರ್ತಿ ಫೆಲಿಕ್ಸ್ ಫ್ರಾಂಕ್‌ಫರ್ಟರ್ ತಮ್ಮ ಅಭಿಪ್ರಾಯದಲ್ಲಿ ಒತ್ತಿ ಹೇಳಿರುವಂತೆ ಕಾನೂನಿನ ಸೂಕ್ತ ಪ್ರಕ್ರಿಯೆಯು “ಮನುಷ್ಯ ಮನುಷ್ಯನ ನಡುವೆ ಅದಕ್ಕೂ ಹೆಚ್ಚಾಗಿ ವ್ಯಕ್ತಿ ಮತ್ತು ಸರಕಾರದ ನಡುವಿನ ನಿಷ್ಪಕ್ಷಪಾತತೆಯ ಗಹನವಾದ ಒಂದು ಮನೋದರ್ಮವಾಗಿದೆ.” ನ್ಯಾಮೂರ್ತಿ ಫ್ರಾಂಕ್‌ಫರ್ಟ್ ಮುಂದುವರೆದು “ಸೂಕ್ತ ಪ್ರಕ್ರಿಯೆ ಎನ್ನುವುದು ಯಾಂತ್ರಿಕ ಸಾಧನವಲ್ಲ. ಅದು ಒಂದು ಮಾನದಂಡವೂ ಅಲ್ಲ. ಅದೊಂದು ಪ್ರಕ್ರಿಯೆಯಾಗಿದೆ’” ಎಂದು ತಿಳಿಸಿದ್ದಾನೆ.

ನ್ಯಾಯದ ವ್ಯಾಖ್ಯಾನಿಸುವಿಕೆಯನ್ನು ನೋಡಿದರೆ ನ್ಯಾಯವನ್ನು ಅರ್ಥಮಾಡಿಕೊಳ್ಳುವುದು ಸ್ವಲ್ಪಮಟ್ಟಿಗೆ ಸರಳವೆನಿಸುತ್ತದೆ. ಮೆಡಿಸನ್ ಅನ್ನು ಉದ್ಧರಿಸುವುದಾದರೆ ಇದು ಸರಕಾರದ ಗುರಿ (ಮತ್ತು) ನಾಗರಿಕ ಸಮಾಜದ ಗುರಿ.” ಸಮಾನತೆಯನ್ನು ಹೆಚ್ಚಿಸುವುದು, ಜನಸಾಮಾನ್ಯರ ಕಲ್ಯಾಣದ ಉತ್ತೇಜನೆ, ಅಗತ್ಯವಿದ್ದವರಿಗೆ ಸಹಾಯ, ಕಾನೂನು ಸುವ್ಯವಸ್ಥೆಯನ್ನು ಒದಗಿಸುವುದು, ವಿಶ್ವಶಾಂತಿಯನ್ನು ಕಾಪಾಡುವಂತಹ ಇತರ ರಾಜಕೀಯ ತತ್ವಗಳನ್ನು ನ್ಯಾಯದ ಸಂದರ್ಭದಲ್ಲಿ ವ್ಯಾಖ್ಯಾನಿಸಲಾಗುತ್ತದೆ ಮತ್ತು ಅವೆಲ್ಲವೂ ನ್ಯಾಯದ ಮಾನದಂಡಗಳಾಗಿವೆ. ಸಾಪೇಕ್ಷ ಪರಿಭಾಷೆಯಲ್ಲಿ ಹೇಳುವುದಾದರೆ ಪ್ರತಿಯೊಂದು ಸಮಾಜವು ಇವೆಲ್ಲವುಗಳ ಮತ್ತು ಇತರ ರಾಜಕೀಯ ತತ್ವಗಳ ನ್ಯಾಯಯುತ ಮಿಶ್ರಣವನ್ನು ತಾನೇ ನಿರ್ಧರಿಸತಕ್ಕದ್ದು. ಪರಿಣಾಮವಾಗಿ ದಿ ಫೆಡರಲಿಸ್ಟ್ ಸಂಖ್ಯೆ 17ರಲ್ಲಿ ಅಲೆಕ್ಸಾಂಡರ್ ಹ್ಯಾಮಿಲ್ಟನ್ ಹೇಳಿರುವಂತೆ ನ್ಯಾಯವೆಂಬುದು “ಸಮಾಜದ ಶ್ರೇಷ್ಠ ಸಂಯೋಜಕವೂ” ಆಗುತ್ತದೆ.

ಚಟುವಟಿಕೆ

ಶಾಸನೀಯ ವಿಚಾರಣೆಯನ್ನು ಅನುಕರಿಸುವುದು

ವಿದ್ಯಾರ್ಥಿಗಳು ಸೇರಬೇಕಾದ ಶಾಲೆಗಳನ್ನು ಕುಟುಂಬವು ತೀರ್ಮಾನಿಸಲು ಅವಕಾಶವೀಯಬೇಕೆ? ಈ ಪ್ರಶ್ನೆಯನ್ನು ಪ್ರಸ್ತುತದಲ್ಲಿ ಸರಕಾರದ ಎಲ್ಲ ಹಂತಗಳಲ್ಲೂ ಚರ್ಚಿಸಲಾಗುತ್ತಿದೆ. ಅಮೇರಿಕಾದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ಅಗತ್ಯವಿರುವ ಸಂಪನ್ಮೂಲಗಳನ್ನು ಹೊಂದಿರುವ ಕುಟುಂಬಗಳಿಗೆ ಐತಿಹಾಸಿಕವಾಗಿ ಆಯ್ಕೆಗಳನ್ನು ಕೊಟ್ಟಿದೆ. ಉದಾಹರಣೆಗೆ, ಹಣಕಾಸಿನ ಸಂಪನ್ಮೂಲವಿರುವ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳಿಸಲು ಸಾಧ್ಯವಿದೆ. ಅದೇ ರೀತಿ ಸಾಕಷ್ಟು ಸಂಪನ್ಮೂಲಗಳನ್ನು ಹೊಂದಿರುವ ಪೋಷಕರು ಒಳ್ಳೆಯ ಶಾಲೆಗಳಿರುವ ಪ್ರದೇಶ ಅಥವಾ ಜಿಲ್ಲೆಗಳಲ್ಲಿ ವಾಸಿಸುವುದನ್ನು ಆಯ್ಕೆಮಾಡಬಲ್ಲರು ಮತ್ತು ಶಾಲೆಗಳನ್ನು ಹೇಗೆ ನಡೆಸಬೇಕು ಮತ್ತು ಎಂತಹ ಕಾರ್ಯಕ್ರಮಗಳನ್ನು ಅಲ್ಲಿ ಹಮ್ಮಿಕೊಳ್ಳಬೇಕು ಎನ್ನುವ ಬಗ್ಗೆ ಅವರ ಅಭಿಪ್ರಾಯಗಳನ್ನು ಬೆಂಬಲಿಸಬೇಕೆಂದು ಶಾಲೆಗಳ ನೀತಿನಿರೂಪಕರಿಗೆ ಮನವೊಲಿಸಬಲ್ಲರು. ಇದಲ್ಲದೆ ಪ್ರತಿಭಾಶಾಲಿಗಳಿಗಾಗಿ ನಡೆಸುವ ಕಾರ್ಯಕ್ರಮಗಳು

ಅಥವಾ ಪ್ರದರ್ಶನ ಕಲೆಗಳ ಕಾರ್ಯಕ್ರಮಗಳಂತಹ ಶಾಲೆಯ ಒಳಗೆ ನಡೆಯುವ ವಿಶೇಷ ಕಾರ್ಯಕ್ರಮಗಳು ಮಕ್ಕಳಿಗೆ ಲಭ್ಯವಿರುವ ಶಿಕ್ಷಣದ ವಿಧಾನದಲ್ಲಿ ಒಂದು ಪ್ರಮಾಣದ ಆಯ್ಕೆಯನ್ನು ನೀಡುತ್ತವೆ.

ಹಾಗಾಗಿ ಸ್ವಲ್ಪ ಪ್ರಮಾಣದಲ್ಲಿ ಹೆತ್ತವರು, ವಿದ್ಯಾರ್ಥಿಗಳು, ಮತ್ತು ಶಿಕ್ಷಕರುಗಳಿಗೆ ಯಾವಾಗಲೂ ಆಯ್ಕೆಗಳಿದ್ದವು ಮತ್ತು ಆಯ್ಕೆಗಳನ್ನು ಮಾಡಿದ್ದಾರೆ. ಆದರೆ, ಸಾಮಾನ್ಯವಾಗಿ ಹೇಳುವುದಾದರೆ, ಶಾಲಾ ಜಿಲ್ಲೆಗಳು ಆಯ್ಕೆಗಳನ್ನು ಗರಿಷ್ಠಗೊಳಿಸಲು ಯಾವುದೇ ನಿರ್ದಿಷ್ಟ ನೀತಿಗಳನ್ನು ರೂಪಿಸಿರುವುದಿಲ್ಲ ಮತ್ತು ಶಾಲೆಗಳ, ಕಾರ್ಯಕ್ರಮಗಳ, ಕೋರ್ಸುಗಳ, ಗರಿಷ್ಟ ಆಯ್ಕೆಗಳ ಗುರಿಯನ್ನು ಬೆಂಬಲಿಸುವ ಯಾವುದೇ ತರ್ಕಗಳಿಲ್ಲ; ಮತ್ತು ಆಯ್ಕೆಗಳನ್ನು ಉತ್ತೇಜಿಸಲು ಒಂದು ಔಪಚಾರಿಕವಾದ ನೀತಿಗಳನ್ನು ಮಾಡಬೇಕೆನ್ನುವ ಬೇಡಿಕೆಯು ಸಾರ್ವಜನಿಕರಿಂದ ಇನ್ನೂ ಬಂದಿಲ್ಲ.

ಒಂದು ಮಾನವ ರೇಖಾನಕ್ಷೆ(ಗ್ರಾಫ್)ಯನ್ನು ರಚಿಸುವ ಮೂಲಕ ಈ ವಿಷಯದ ಬಗ್ಗೆ ತರಗತಿಯ ಸದಸ್ಯರ ನಿಲುವೇನು ಎನ್ನುವುದರ ಒಂದು ಆರಂಭಿಕ ವಿಶ್ಲೇಷಣೆ ಮಾಡಿ. ಈ ಕೆಳಗಿನ ಪ್ರತಿಯೊಂದು ಸ್ಥಿತಿಯನ್ನು ಪ್ರತಿನಿಧಿಸುವಂತೆ ಗೋಡೆಯ ಮೇಲೆ ಸ್ಥಳವನ್ನು ನಿಗದಿಪಡಿಸಿ: ಖಾಸಗಿ ಮತ್ತು ಸಾರ್ವಜನಿಕ ಶಾಲೆಗಳಲ್ಲಿ ಅಪರಿಮಿತ ಆಯ್ಕೆ (ಧನಸಹಾಯದೊಂದಿಗೆ), ಸಾರ್ವಜನಿಕ ಶಾಲೆಗಳಲ್ಲಿ ಅಪರಿಮಿತ ಆಯ್ಕೆ (ಸಾರಿಗೆ ಮತ್ತು ಅಗತ್ಯವಿರುವ ಇತರ ಸಹಾಯಗಳನ್ನು ಒದಗಿಸುವುದರೊಂದಿಗೆ), ಆಯ್ಕೆಯನ್ನು ಬೆಂಬಲಿಸುವ ಯಾವುದೇ ಸಹಾಯವಿಲ್ಲದಿರುವುದು. ಪ್ರತಿಯೊಬ್ಬ ವಿದ್ಯಾರ್ಥಿಯೂ ಈ ವಿಷಯವನ್ನು ಕುರಿತಂತೆ ತನ್ನ ನಿಲುವನ್ನು ಹೆಚ್ಚು ಕಡಿಮೆ ಬೆಂಬಲಿಸುವ ನಿಲುವಿನ ಎದುರು ನಿಲ್ಲಬೇಕು. ಪ್ರತಿಯೊಂದು ನಿಲುವನ್ನು ಪ್ರತಿನಿಧಿಸುವ ಮೂರು ಜನರನ್ನು ಆಯ್ಕೆ ಮಾಡಿ ಈ ಕೆಳಗೆ ವಿವರಿಸಲಾಗಿರುವುದರ ಅನುಕರಣೆಯ ನಿಟ್ಟಿನಲ್ಲಿ ಶಾಸನೀಯ ಸಮಿತಿಯಲ್ಲಿ ಸೇವೆಯನ್ನು ನೀಡಲು ಕಳುಹಿಸಬೇಕು.

ಶಾಸನ ಸಮಿತಿಯ ಸದಸ್ಯರುಗಳು ಶಾಲಾ ಆಯ್ಕೆಯ ಕುರಿತಂತೆ ಅಭಿಪ್ರಾಯಗಳನ್ನು ಕೇಳಿ ನಂತರ ಈ ವಿಷಯದ ಬಗ್ಗೆ ಒಂದು ನೀತಿಯನ್ನು ರೂಪಿಸಬೇಕಲ್ಲದೆ, ಸಮಿತಿಯು ಸಭೆಯನ್ನು ನಡೆಸಲು ಒಬ್ಬ ಅಧ್ಯಕ್ಷನನ್ನು ಆಯ್ಕೆ ಮಾಡತಕ್ಕದ್ದು. ಸದಸ್ಯರು ಸಾಕ್ಷಿಗಳನ್ನು ಪ್ರಶ್ನಿಸಲು ಮತ್ತು ಒಂದು ಉತ್ತಮ ನೀತಿಯನ್ನು ರೂಪಿಸಲು ಅನುವಾಗುವಂತೆ ಸಂಶೋಧನೆಯನ್ನು ನಡೆಸಬೇಕು.

ತರಗತಿಯ ಉಳಿದ ಸದಸ್ಯರುಗಳನ್ನು ಆರು ಗುಂಪುಗಳಾಗಿ ವಿಭಜಿಸಬೇಕು. ಅದರಲ್ಲಿರುವ ಪ್ರತಿಯೊಂದು ಗುಂಪು ಈ ಕೆಳಗೆ ನಿಡಲಾಗಿರುವ ಪಾತ್ರವೊಂದನ್ನು ವಹಿಸಬೇಕು. ಪ್ರತಿಯೊಂದು ಗುಂಪು ಅವರ ಪಾತ್ರದ ನಿಲುವನ್ನು ಬೆಂಬಲಿಸುವ ನಿಟ್ಟಿನ ಮಾಹಿತಿಯನ್ನು ಸಂಗ್ರಹಿಬೇಕು ಮತ್ತು ಎರಡು ನಿಮಿಷಗಳ ಪ್ರಾರಂಭಿಕ ಹೇಳಿಕೆಯನ್ನು ಸಿದ್ಧಪಡಿಸಬೇಕು. ಅವರು ಸಮಿತಿಯ ಸದಸ್ಯರುಗಳ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲು ಸಿದ್ಧರಿರಬೇಕು.

ಪ್ರೊಫೆಸರ್ ಗುಡ್‌ರೆಂಚ್

ಆಯ್ಕೆ ಎನ್ನುವುದು ಶಾಲೆಯ ಇತರ ಸುಧಾರಣೆಗಳಂತಲ್ಲ. ಉತ್ತಮ ಸಾರ್ವಜನಿಕ ಶಾಲಾ ಶಿಕ್ಷಣಕ್ಕಾಗಿ ಮಾಡುವ ಸುಧಾರಣಾ ಕಾರ್ಯನೀತಿಯ ಭಾಗವಾಗಿ ಇದನ್ನು ಅವುಗಳೊಂದಿಗೆ ಸಂಯೋಜಿಸಬಾರದು. ಸುಧಾರಕರು ಹತ್ತು ಹಲವು ಇತರೆ ವಿಧಗಳಲ್ಲಿ ಪ್ರಯತ್ನಿಸಿ, ತರಬಯಿಸಿದ ಬದಲಾವಣೆಗಳಂತಹುದನ್ನು ಸಾಧ್ಯವಾಗಿಸುವ ಸಾಮರ್ಥ್ಯ

ಆಯ್ಕೆಗಿದೆ. ಆಯ್ಕೆಯನ್ನು ಇತರ ಸುದಾರಣೆಗಳ ಹಂಗಿಲ್ಲದೆ ಅಳವಡಿಸಿಕೊಳ್ಳಬೇಕು. ಏಕೆಂದರೆ ಇತರ ಸುಧಾರಣೆಗಳು ಪ್ರಜಾಪ್ರಭುತ್ವದ ನಿಯಂತ್ರಣವನ್ನು ಆಧರಿಸಿವೆ ಮತ್ತು ಅವುಗಳನ್ನು ಅಧಿಕಾರಶಾಹಿ ಮಾಧ್ಯಮಗಳ ಮೂಲಕ ಕಾರ್ಯಗತಗೊಳಿಸಲಾಗುತ್ತದೆ.

ಶ್ರೀ. ಚಾರ್ಲ್ಸ್ ಬಿ. ಲೀಡರ್

ಶಾಲೆಗಳಿಗೆ ಸ್ವಾಯತ್ತತೆ ಮತ್ತು ಆಂತರಿಕ ನೌಕರಶಾಹಿ ನಿಯಂತ್ರಣವಿದೆ ಎನ್ನುವುದು ಶಾಲೆಗಳು ಎಷ್ಟು ಪರಿಣಾಮಕಾರಿಯಾಗಿವೆ ಎನ್ನುವುದರ ಪ್ರಮುಖ ಮುನ್ಸೂಚನೆಯಾಗಿದೆ. ಅಮೇರಿಕಾದ ಸಾರ್ವಜನಿಕ ಶಾಲೆಗಳನ್ನು ರಾಜಕೀಯವು ಹಾಳುಗೆಡವುತ್ತಿದೆ. ಒಂದು ಖಾಸಗಿ ಶಾಲೆಯ ಮುಖ್ಯೋಪಾಧ್ಯಾಯನಾಗಿ ನಾನು ನನ್ನ ಮೂಲ ಕ್ಷೇತ್ರ ಮತ್ತು ಮಂಡಳಿಗೆ ಹೊಣೆಗಾರನಾಗಿರುತ್ತೇನೆ. ಇದಕ್ಕೆ ಪ್ರಬಲ ನಾಯಕತ್ವ, ಸ್ಪಷ್ಟವಾದ ಗುರಿಗಳು, ಮಹತ್ವಾಕಾಂಕ್ಷೆಯ ಶೈಕ್ಷಣಿಕ ಕಾರ್ಯಕ್ರಮಗಳು, ಒಂದು ತಂಡವಾಗಿ ಕಾರ್ಯನಿರ್ವಹಿಸುವ ಮನೋಭಾವ, ಮತ್ತು ಶಿಕ್ಷಕರಲ್ಲಿ ವೃತ್ತಿಪರತೆಯು ಬೇಕಾಗುತ್ತದೆ. ಈ ದೇಶದಲ್ಲಿ ನಾವು ಒಂದು ಬಗೆಯ ಭೋಧನಾ-ತೆರಿಗೆ ಸಂದಾಯ (tution-tax credit) ಅಥವಾ ವೋಚರ್ ವ್ಯವಸ್ಥೆಯನ್ನು (voucher system) ಸ್ಥಾಪಿಸುವ ಅಗತ್ಯವಿದೆ.

ಮಿಸ್. ಬೀ ಫ್ರೀ (Ms. Bee Free)

ನನ್ನ ಮಕ್ಕಳಿಗೆ ಶಾಲೆಯನ್ನು ಅಯ್ಕೆ ಮಾಡಲು ನನಗೆ ಸಾಧ್ಯವಾಗಬೇಕು ಎಂದು ನಾನು ಬಯಸುತ್ತೇನೆ. ನನ್ನ ಮಕ್ಕಳ ಆರೋಗ್ಯ ಮತ್ತು ಶಿಕ್ಷಣಕ್ಕೆ ಮಿಗಿಲಾದುದು ನನಗೆ ಮತ್ತೇನೂ ಇಲ್ಲ.

ಶ್ರೀ. ವಿಲ್ಸನ್ ವುಡ್ರೊ

ಉಳಿತಾಯ ಮತ್ತು ಸಾಲದ ಒಡನಾಟಗಳನ್ನು ನೋಡಿ. ನಿಮಗೆ ಗಣನೀಯ ಮಟ್ಟದ ಅನಿಯಂತ್ರಣ ದೊರಕಿದರೆ ಅಲ್ಲಿ ಅನಿರೀಕ್ಷಿತ ಪರಿಣಾಮಗಳಿರುತ್ತವೆ. ಹೆತ್ತವರು ಉತ್ತಮ ಶೈಕ್ಷಣಿಕ ಕಾರ್ಯಕ್ರಮಗಳಿಗಾಗಿ ಶಾಲೆಯನ್ನು ಆಯ್ಕೆ ಮಾಡಬೇಕೆ ಅಥವಾ ಇತರ ಯಾವುದಾದರೂ ಕಾರಣಗಳಿಗಾಗಿಯೊ ಎಂದು ನಾನು ಪ್ರಶ್ನಿಸುತ್ತೇನೆ. ಜನರು ಶಾಲೆಗಳ ನಡುವೆ ಸರಿಯಾದ ಆಯ್ಕೆ ಮಾಡಲು ಸಾದ್ಯವಾಗುವಂತಹ ಮಾಹಿತಿ ವ್ಯವಸ್ಥೆಯನ್ನು ಸೃಷ್ಟಿಸುವುದು ಬಹುತೇಕವಾಗಿ ಅಸಾದ್ಯವಾದ ಕೆಲಸವೆ ಸರಿ. ಸಂತೃಪ್ತ ಪ್ರಜೆಗಳು ತಮ್ಮ ಮಕ್ಕಳನ್ನು ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ಕಳುಹಿಸಲು ವಾಸ್ತವವಾಗಿ, ಅಂತಹ ಆಯ್ಕೆಯ ವ್ಯವಸ್ಥೆಯನ್ನು ಉಪಯೋಗಿಸುವರೆ ಎನ್ನುವ ಬಗ್ಗೆ ನನಗೆ ಅನುಮಾನವಿದೆ.

ಶ್ರೀ. ಜಿ.ಟಿ. ವಾಷಿಂಗ್ಟನ್

ಆಯ್ಕೆ ಎನ್ನುವುದು ಬಹಳಷ್ಟುಮಟ್ಟಿಗೆ ಸಾರ್ವಜನಿಕ ಶಾಲಾ ವ್ಯವಸ್ಥೆಯನ್ನು ನಾಶಪಡಿಸಬಹುದಾದ ಒಂದು ಸಾಕ್ಷಿರಹಿತ ತಂತ್ರವಾಗಿದೆ. ಉತ್ತಮ ಕಲಿಕೆಯ ಆವಿಷ್ಕಾರಗಳ ಮೇಲೆ ಗಮನವನ್ನು ಕೇಂದ್ರೀಕರಿಸುವ ಹೆಚ್ಚಿನ ಸಾಧ್ಯತೆಗಳಿರುವ ಶೈಕ್ಷಣಿಕ ಫಲಿತಾಂಶಗಳನ್ನು ಆಧರಿಸಿದ ಪ್ರತಿಫಲ ಮತ್ತು ಶಿಕ್ಷೆಗಳ ವ್ಯವಸ್ಥೆಯ ಅಗತ್ಯ ನಮಗಿದೆ. ವೃತ್ತಿಪರ ಶಿಕ್ಷಕರಾಗಿ ನಮಗೆ ಮಕ್ಕಳು ಹೇಗೆ ಕಲಿಯುತ್ತಾರೆ ಎನ್ನುವುದರ ಬಗ್ಗೆ ಉತ್ತಮ ತಿಳುವಳಿಕೆಯಿದೆ. ನಮ್ಮ ಶಾಲೆಗಳು ಮತ್ತು ಶಿಕ್ಷಕರನ್ನು ಬೆಂಬಲಿಸಲು ರಾಷ್ಟ್ರ ಮತ್ತು ರಾಜ್ಯದ ಮಟ್ಟದಲ್ಲಿ ಹೆಚ್ಚಿನ ಬದ್ಧತೆಯು ಅವಶ್ಯ.

ಮಾನ್ಯ ಅಬ್ಬಿ ಲಿಂಕ್

ಆಯ್ಕೆಯನ್ನು ತಪ್ಪು ಹಾದಿಗೆಳೆಯಲಾಗಿದೆ. ಪೋಷಕರ ಆಯ್ಕೆ ಎನ್ನುವುದು ಸಮಾನತೆ ಎನ್ನುವ ಕುರಿಯ ಚರ್ಮವನ್ನು ಹೊದ್ದ ಗಣ್ಯರ ತೋಳವಾಗಿದೆ. ಅಂತಿಮವಾಗಿ, ಇದು ಲಕ್ಷಾಂತರ ವಿದ್ಯಾರ್ಥಿಗಳಿಗೆ ಸಮಾನ ಅವಕಾಶಗಳನ್ನು ನಿರಾಕರಿಸುತ್ತದೆ. ಮತ್ತು ಸದ್ಯದಲ್ಲಿರುವ ಸಾರ್ವಜನಿಕ ಶಾಲಾ ವ್ಯವಸ್ಥೆಯಲ್ಲಿ ಸ್ಪರ್ಧೆ ಇಲ್ಲದಿರುವುದರಿಂದ ಅದು ಒಂದು ನೀರಸ ವ್ಯವಸ್ಥೆಯಾಗಿದೆ. ಪೋಷಕರಿಗೆ ಮತ್ತು ಸಮುದಾಯಗಳಿಂದ ಚುನಾಯಿತವಾದ ಸ್ಥಳೀಯ ಶಾಲಾ ಸಮೀತಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡುವ ಅಗತ್ಯವಿದೆ, ಮತ್ತು ಅವರಿಗೆ ಆಯವ್ಯಯವನ್ನು ನಿರ್ಧರಿಸುವ ಮತ್ತು ಪ್ರಾಂಶುಪಾಲರನ್ನು ಮತ್ತು ಶಿಕ್ಷಕರನ್ನು ನೇಮಿಸಿಕೊಳ್ಳುವ ಮತ್ತು ತೆಗೆದು ಹಾಕುವ ಅಧಿಕಾರವನ್ನೂ ಕೊಡಬೇಕು. ಕಡಿಮೆ ಆದಾಯವಿರುವ ವಿಧ್ಯಾರ್ಥಿಗಳ ಸಮಸ್ಯೆಯನ್ನು ಪರಿಹರಿಸಲು ಇರುವುದು ಇದೊಂದೆ ಮಾರ್ಗ.

ಸಂಶೋಧನೆಯು ಪೂರ್ಣಗೊಂಡ ನಂತರ ಪ್ರತಿಯೊಬ್ಬ ಸಾಕ್ಷಿಗೂ ಎರಡು ನಿಮಿಷ ಪ್ರಾರಂಭಿಕ ಹೇಳಿಕೆಗಳನ್ನು ನೀಡಲು ಮತ್ತು ಮೂರು ನಿಮಿಷಗಳ ಕಾಲ ಪ್ರಶ್ನೋತ್ತರಗಳಿಗೆ ನಿಗದಿಪಡಿಸಿ ಎಲ್ಲವನ್ನೂ ಆಲಿಸಿ. ಎಲ್ಲರ ಹೇಳಿಕೆ ಮುಗಿದ ನಂತರ ಸಮಿತಿಯ ಸದಸ್ಯರು ಶಾಲೆಗಳ ಆಯ್ಕೆಗೆ ಸಂಬಂಧಿಸಿದಂತೆ ಪ್ರಸ್ತಾಪಿತ ಶಾಸನದ ಬಗ್ಗೆ ಒಮ್ಮತಕ್ಕೆ ಬರಲು ಪ್ರಯತ್ನಿಸಬೇಕು.

ಈ ಕೆಳಗಿನ ಪ್ರಶ್ನೆಗಳನ್ನು ಪರಿಗಣಿಸಿ, ಚಟುವಟಿಕೆಯನ್ನು ಸಂಕ್ಷಿಪ್ತವಾಗಿ ವಿವರಿಸಿ:

- ಈ ಚಟುವಟಿಕೆಗೆ ಸಂಬಂಧಿಸಿದಂತೆ ಸ್ವಾತಂತ್ರ್ಯದ ಪರಿಕಲ್ಪನೆ ಹೇಗಿದೆ.
- ನಿಮ್ಮ ತರಗತಿಯಲ್ಲಿ ಅನುಕರಿಸಲ್ಪಟ್ಟ ಪ್ರಕ್ರಿಯೆಯು ಚರ್ಚಾಂಶದ ಎಲ್ಲ ಭಾಗಗಳಿಗೂ ಸೂಕ್ತವಾಗಿ ಸ್ಪಂದಿಸಿದೆಯೆ? ನಿಮಗೆ ತಿಳಿದ ಹಾಗೆ ಇದು ಕಾನೂನಿನ ಸೂಕ್ತ ಪ್ರಕ್ರಿಯೆಗೆ ಅವಕಾಶ ನೀಡಿದೆಯೆ?
- ಸಮಿತಿಯಿಂದ ರೂಪಿಸಲಾದ ನೀತಿಯು ಪ್ರಮಾಣಕ್ಕೆ ಅನುಗುಣವಾದ ಸಮಾನತೆಗೆ ಅವಕಾಶ ನೀಡಿದೆಯೆ?
- ಮಾಧ್ಯಮಿಕ ಹಂತದ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಈ ಚಟುವಟಿಕೆಯನ್ನು ನೀವು ಹೇಗೆ ಅಳವಡಿಸಿಕೊಳ್ಳಬಹುದು?
- ಮಾಧ್ಯಮಿಕ ಹಂತದ ವಿದ್ಯಾರ್ಥಿಗಳೊಂದಿಗೆ ಈ ಚಟುವಟಿಕೆಯ ವಿವರವನ್ನು ಕೇಳಲು ನೀವು ಯಾವ ಪ್ರಶ್ನೆಗಳನ್ನು ಬಳಸುತ್ತೀರಿ?

ಸಾಂವಿಧಾನಾತ್ಮಕ ಚೌಕಟ್ಟು

ಗುರಿಗಳು, ಪಾತ್ರದಾರಿಗಳು, ಮತ್ತು ಅವರ ಅಧಿಕಾರಗಳು ಮತ್ತು ಮಿತಿಗಳು, ಕ್ಷೇತ್ರದ ಗಡಿಗಳು, ಮತ್ತು ಮೂಲ ನಿಯಮಗಳ ಬಗೆಗಿನ ಆಯ್ಕೆಯನ್ನು ಮಾಡಲು ಅನುಸರಿಸಬೇಕಾದ ನಿಯಮಗಳನ್ನು ಸಂವಿಧಾನಗಳು ರೂಪಿಸುತ್ತವೆ.

ಸಾಂವಿಧಾನಾತ್ಮಕ ನಿಯಮಗಳು: ಗುರಿಗಳು

ಸಾಂವಿಧಾನಾತ್ಮಕ-ಪ್ರಭುತ್ವ ಅಥವಾ ಕಾನೂನಿನ ಆಳ್ವಿಕೆಯು ಮೊದಲ ಸಾಂವಿಧಾನಾತ್ಮಕ ಗುರಿಯಾಗಿದೆ. ಅಂದರೆ ನಿಯಮಾನುಸಾರ ಕಾರ್ಯವನ್ನು ನಿರ್ವಹಿಸಲು ಪಾತ್ರದಾರಿಗಳ ನಡುವಿನ ಒಮ್ಮತ. ಸಾರ್ವಜನಿಕರ ಒಪ್ಪಿಗೆ ಮತ್ತು ರಾಜಕೀಯ ಆಯ್ಕೆಯ ಸ್ವಾತಂತ್ರ್ಯ (ಆಗಾಗ್ಗೆ ಗಣರಾಜ್ಯ ವಾದ(republicanism) ಎಂದು ಕರೆಯಲಾಗುವ) ಪ್ರಜಾಪ್ರಭುತ್ವ ಸಮಾಜಗಳ ಎರಡನೆ ಗುರಿಯಾಗಿದೆ. ಸಾಮಾನ್ಯವಾಗಿ ಸಂವಿಧಾನದ ಪೀಠಿಕೆಯು ಸಂವಿಧಾನದ ಗುರಿ ಮತ್ತು ಉದ್ದೇಶಗಳನ್ನು ಪ್ರತಿಬಿಂಬಿಸುತ್ತದೆ. ಹಾಗಾಗಿ, ಅಮೇರಿಕಾದ ಸಂವಿಧಾನವು ಹೀಗೆ ಹೇಳುತ್ತದೆ:

ಅಮೇರಿಕಾದ ಪ್ರಜೆಗಳಾದ ನಾವು, ಮತ್ತಷ್ಟು ಪರಿಪೂರ್ಣವಾದ ಒಕ್ಕೂಟವೊಂದನ್ನು ರಚಿಸಲು, ನ್ಯಾಯವನ್ನು ಸ್ಥಾಪಿಸಲು, ದೇಶೀಯ ಶಾಂತಿಯನ್ನು ಭದ್ರಪಡಿಸಲು, ಸರ್ವರ ರಕ್ಷಣೆಯನ್ನು ಮಾಡಲು, ಸರ್ವರ ಕಲ್ಯಾಣವನ್ನು ಸಾಧಿಸಲು, ಹಾಗೂ ನಮಗೆ ಮತ್ತು ನಮ್ಮ ಮುಂದಿನ ಪೀಳಿಗೆಗೆ ಸ್ವಾತಂತ್ರ್ಯವನ್ನು ಖಾತ್ರಿಪಡಿಸಲು, ಅಮೇರಿಕಾ ಒಕ್ಕೂಟ ರಾಜ್ಯಗಳಿಗೆ ಈ ಸಂವಿಧಾನವನ್ನು ಸಂಕಲ್ಪಿಸುತ್ತೇವೆ ಮತ್ತು ಸ್ಥಾಪಿಸುತ್ತೇವೆ.

ಸಂವಿಧಾನದಲ್ಲಿ ಹೇಳಲಾದ ಗುರಿಗಳು ಮಾತ್ರ ಮುಕ್ತ ಸಮಾಜದ ಸಾರ್ವಜನಿಕ ಗುರಿಗಳಲ್ಲ. ಬದಲಿಗೆ ಅವು ಒಂದು ಮುಕ್ತ ಸಮಾಜದ ಮೂಲಭೂತ ಗುರಿಗಳಾಗಿವೆ. ಅಂದರೆ, ಅತ್ಯಂತ ಅಮೂಲ್ಯವೆನಿಸಿದ ಆ ಗುರಿಗಳನ್ನು ಆಕಸ್ಮಿಕವೆನ್ನಲಾಗುವುದಿಲ್ಲ. ನಾವು ಮುಂಗಾಣುವಷ್ಟು ಹತ್ತಿರದ ಭವಿಷ್ಯದಲ್ಲಿ ಅಮೇರಿಕನ್ನರು ರಾಷ್ಟ್ರೀಯ ಸಂವಿಧಾನವು ನಿಗದಿಪಡಿಸಿರುವ ಗುರಿಗಳನ್ನು ಪರಿವರ್ತಿಸುವ ಆಯ್ಕೆಯನ್ನು ಮಾಡುವ ಸಾಧ್ಯತೆಯಿಲ್ಲ. ಹಾಗಿದ್ದೂ, ಅವರ ರಾಜ್ಯದ ಸಂವಿಧಾನಗಳು ಒದಗಿಸಿರುವ ಅವಕಾಶಗಳನ್ನು ಉಪಯೋಗಿಸಿಕೊಂಡು ಅಮೇರಿಕನ್ನರು ಆಗಾಗ ತಮ್ಮ ನಿರ್ದಿಷ್ಟವಾದ ರಾಜ್ಯಕ್ಕೆ ಅಗತ್ಯವೆಂದು ಪರಿಗಣಿಸಲಾದ ಗುರಿಗಳನ್ನು ಸೇರಿಸುತ್ತಾರೆ. ಉದಾಹರಣೆಗೆ, 1972ರಲ್ಲಿ ಅಳವಡಿಸಿಕೊಳ್ಳಲಾದ ಮೊಂಟಾನ ಸಂವಿಧಾನವು ತನ್ನ ಪ್ರಜೆಗಳಿಗೆ "ಸ್ವಚ್ಚ ಮತ್ತು ಆರೋಗ್ಯಕರ ಪರಿಸರದ" (ಅನುಚ್ಛೇದ 2, ಭಾಗ, 3), ಹಕ್ಕನ್ನು ಸಾಂವಿಧಾನಾತ್ಮಕವಾಗಿ ಸುನಿಶ್ಚಿತಗೊಳಿಸಿದೆ, ಮತ್ತು ನ್ಯೂಯಾರ್ಕ್ ರಾಜ್ಯದ ಸಂವಿಧಾನವು "ಮಾನವರ ಶ್ರಮವು ಸರಕೂ ಅಲ್ಲ ವಾಣಿಜ್ಯಿಕ ವಸ್ತುವೂ ಅಲ್ಲ" ಎಂದು ಹೇಳುತ್ತದೆ (ಅನುಚ್ಛೇದ 1, ಭಾಗ 17).

ಸಾಂವಿಧಾನಿಕ ನಿಯಮಗಳು: ಪಾತ್ರಧಾರಿಗಳು

ಅಮೇರಿಕಾ ವ್ಯವಸ್ಥೆಯಲ್ಲಿ ಸಾರ್ವಜನಿಕ ನೀತಿಯು ಪ್ರಜಾಪ್ರಭುತ್ವೀಯವಾಗಿದೆ, ಆದರೆ ಇದು ಎಲ್ಲ ವ್ಯಕ್ತಿಗಳಿಗೂ ಸಂಪೂರ್ಣವಾಗಿ ಮುಕ್ತವಾಗಿಲ್ಲ. ಅದರ ಅಧಿಕಾರ ಜನರೇ ಆಗಿದ್ದಾರೆ; ಈ ಅಂಶವನ್ನು ನಮ್ಮ ರಾಜ್ಯ ಮತ್ತು ರಾಷ್ಟ್ರೀಯ ಸಂವಿಧಾನಗಳಲ್ಲಿ ಮುಖ್ಯವಾಗಿ ಗುರುತಿಸಲಾಗಿದೆ. ಹಾಗಿದ್ದೂ, ಸಂವಿಧಾನದಲ್ಲಿ ನಮೂದಿಸಲಾಗಿರುವ ಎಲ್ಲ ಹಕ್ಕುಗಳಿಗೂ ಎಲ್ಲ ಜನರೂ ಸಮಾನ ಅವಕಾಶವನ್ನು ಪಡೆದಿರುವುದಿಲ್ಲ.


ಮತದಾನದ ಹಕ್ಕು ಇದಕ್ಕೊಂದು ಅತ್ಯಂತ ಸೂಕ್ತವಾದ ಉದಾಹರಣೆಯಾಗಿದೆ. ಈ ಹಕ್ಕುಗಳು ಎಲ್ಲ ಜನರಿಗಾಗಲಿ, ಎಲ್ಲ ಪ್ರಜೆಗಳಿಗಾಗಲಿ ಲಭ್ಯವಿಲ್ಲ. ಇದು 18 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ವಯಸ್ಸಿನ ಪ್ರಜೆಗಳಿಗೆ ಮಾತ್ರ ದೊರೆಯುತ್ತದೆ (ಅಮೇರಿಕಾ ಸಂವಿಧಾನ ತಿದ್ದುಪಡಿ 26, ಭಾಗ 1).

ವಿಷಯವೇನೆಂದರೆ ಸಂವಿಧಾನವು ಪಾತ್ರದಾರಿಗಳು ಮತ್ತು ಅವರ ಪಾತ್ರಗಳನ್ನು ವ್ಯಾಖ್ಯಾನಿಸುತ್ತದೆ. ಒಂದು ಸಮೂಹವಾಗಿ "ಜನರು" ಸಂವಿಧಾನ ಮತ್ತು ಅದರ ಬದಲಾವಣೆಯ ಹಿಂದಿರುವ ಅಧಿಕಾರವೆನ್ನಲಾಗಿದೆ. "ವ್ಯಕ್ತಿಗಳು" ಕೆಲವು ನಿರ್ದಿಷ್ಟ ಮೂಲಭೂತ ಹಕ್ಕುಗಳ ಫಲಾನುಭವಿಗಳಾಗಿರುತ್ತಾರೆ; ರಾಜಕೀಯ ಹಕ್ಕುಗಳಂತಹ ಇತರ ಹಕ್ಕುಗಳು ಪ್ರಜೆಗಳಿಗೆ ಸೇರಿರುತ್ತವೆ; ಜನಸಂಖ್ಯೆಯ ಕೆಲವು ಘಟಕಗಳು ತಮ್ಮ ಹಕ್ಕುಗಳನ್ನು ಸಂವಿಧಾನಬದ್ಧವಾಗಿಸುವಲ್ಲಿ ಯಶಸ್ವಿಯಾಗಿ ಸಂಘರ್ಷವನ್ನು ಕೈಗೊಂಡಿದ್ದಾರೆ (ಉದಾಹರಣೆಗೆ, ನ್ಯೂಯಾರ್ಕ್ ರಾಜ್ಯದ ಸಂವಿಧಾನದಲ್ಲಿರುವ ಶ್ರಮಿಕರ ಹಕ್ಕುಗಳ ಒದಗಣೆ); ಆದರೆ, ಯಾವ ವ್ಯಕ್ತಿಗೂ ಅವನ/ಳ ಜನಾಂಗ ಅಥವಾ ಲಿಂಗದ ಆಧಾರದ ಮೇಲೆ ಮೂಲ ಹಕ್ಕುಗಳನ್ನು ನಿರಾಕರಿಸುವಂತಿಲ್ಲ.

ಸಾಂವಿಧಾನಿಕ ನಿಯಮಗಳು: ಅಧಿಕಾರಗಳ ವಿತರಣೆ

ಸರಕಾರಿ ಹುದ್ದೆಗಳನ್ನು ಪಡೆಯುವ ಅಧಿಕಾರವನ್ನು ಹೊಂದಿರುವ ಪಾತ್ರದಾರಿಗಳನ್ನೂ ಸಹ ಸಂವಿಧಾನವು ವ್ಯಾಖ್ಯಾನಿಸುತ್ತದೆ. ಸಂಯುಕ್ತ ವ್ಯವಸ್ಥೆಯ ನಿಯಮವು ಎರಡು ವಿಧಗಳ ಸಾಂವಿಧಾನಿಕ ಸರಕಾರಗಳನ್ನು ಒದಗಿಸುತ್ತದೆ - ರಾಷ್ಟ್ರೀಯ ಮತ್ತು ರಾಜ್ಯ - ಇವುಗಳಲ್ಲಿ ಪ್ರತಿಯೊಂದಕ್ಕೂ, ತನ್ನ ಪ್ರತಿನಿಧಿಗಳಿದ್ದು, ಅವರು ನೇರವಾಗಿ ಸಾರ್ವಭೌಮ ಜನರಿಂದ ತಮ್ಮ ಅಧಿಕಾರವನ್ನು ಪಡೆಯುತ್ತಾರೆ. ತಮ್ಮ ತಮ್ಮ ವಲಯಗಳಲ್ಲಿ ಸಮಾನ ಸಹಭಾಗಿಗಳಾಗಿರುವ ಎರಡೂ ಸರಕಾರಗಳು ಅಮೇರಿಕಾದ ಸಂವಿಧಾನ ಮತ್ತು ಆ ಸಂವಿಧಾನಕ್ಕನುಸಾರವಾಗಿ ಅನುಮೋದಿತವಾದ ರಾಷ್ಟ್ರೀಯ ಸರಕಾರದ ಕಾನೂನುಗಳು ಮತ್ತು ಒಪ್ಪಂದಗಳಿಗೆ ಒಳಪಟ್ಟಿರುತ್ತವೆ. ಶ್ರೇಣೀಕರಣಕ್ಕೊಳಗಾಗದ ಅಧಿಕಾರದ ಒಂದು ಸಂಯೋಜನೆಯನ್ನು ಹೋಲುವ ಸಂಯುಕ್ತ ವ್ಯವಸ್ಥೆಯು ಇದರ ಪರಿಣಾಮದಿಂದ ರೂಪುಗೊಂಡ ಸಂರಚನೆಯಾಗಿರುತ್ತದೆ. ಚಿತ್ರ 7.3 ಅಮೇರಿಕಾ ವ್ಯವಸ್ಥೆಯ ಈ ಸಂಯೋಜನೆಯ ನೋಟವನ್ನು ಮತ್ತು ಎರಡು ಸಾಮಾನ್ಯವಾಗಿ ಚಿತ್ರಿಸಲಾದ ಆದರೆ ಸಾಂವಿಧಾನಾತ್ಮಕವಾಗಿ ಸರಿಯಲ್ಲದ ನೋಟಗಳನ್ನು ತೋರಿಸುತ್ತದೆ. ಉದಾಹರಣೆಗೆ, ಪಿರಮಿಡ್ ನೋಟವು ಆದೇಶವು ಕೆಳಮುಖವಾಗಿ ಮತ್ತು ವಿಧೇಯತೆಯು ಮೇಲ್ಮುಖವಾಗಿ ಸಾಗುವ ಶ್ರೇಣೀಬದ್ಧ, ಆದೇಶ-ಮತ್ತು-ನಿಯಂತ್ರಣ ವ್ಯವಸ್ಥೆಯನ್ನು ತೋರಿಸುತ್ತದೆ. ಈ ಅಭಿಪ್ರಾಯವು ಸರಿಯಾದುದಲ್ಲ ಏಕೆಂದರೆ ಅಂತರ್ಯುದ್ಧವು ನಿರ್ಧರಿಸಿದ್ದು ಒಕ್ಕೂಟದ ಹಿರಿಮೆಯನ್ನೆ ಹೊರತು ರಾಜ್ಯ ಸರಕಾರಗಳ ಮೇಲಿನ ರಾಷ್ಟ್ರೀಯ ಸರಕಾರದ ಪರಮಾಧಿಕಾರವನ್ನಲ್ಲ. ಮಧ್ಯಮಾರ್ಗಿ ನೋಟವು ಎಲ್ಲ ದಾರಿಗಳೂ ರಾಷ್ಟ್ರ ರಾಜಧಾನಿಗೆ ಸೇರುವ ಕೇಂದ್ರ-ಪರಿಧಿ ವ್ಯವಸ್ಥೆಯನ್ನು ತೋರಿಸುತ್ತದೆ. ಅಂತಹ ವ್ಯವಸ್ಥೆಯು, ಫ್ರಾನ್ಸ್‌ನಲ್ಲಿ ಅಸ್ತಿತ್ವದಲ್ಲಿದ್ದು, ಅಲ್ಲಿ, ಪ್ಯಾರಿಸ್ ಅಕ್ಷರಶಃ ವಿಶ್ವದ ಕೇಂದ್ರವೆನಿಸಿದೆ.

ಚಿತ್ರ 7.3




Pyramid – ಪಿರಮಿಡ್, centrist – ಮಧ್ಯಮಾರ್ಗಿ, matrix – ಸಂಯೋಜಿತ, national – ರಾಷ್ಟ್ರೀಯ, state – ರಾಜ್ಯ, local – ಸ್ಥಳೀಯ

Three views of the American system. *Source: From "The American System as a Federal Democracy," by Daniel J. Elazar, in* Teaching about American Federal Democracy, *Stephen L. Schechter ed. (Philadelphia: Center for the Study of Federalism, 1984), p. 10–11. Used by permission.*

ಆದರೆ, ಅಮೇರಿಕಾ ವ್ಯವಸ್ಥೆಯು, ನ್ಯೂಯಾರ್ಕ್ ನಗರದಲ್ಲಿರುವ ಹಣಕಾಸು ರಾಜಧಾನಿಯಿದ ಹಿಡಿದು ನ್ಯಾಶ್‌ವಿಲ್ ಮತ್ತು ಡೆಟ್ರಾಯಿಟ್‌ನಂತಹ ಸಂಗೀತದ ರಾಜಧಾನಿಯವರೆಗೆ, ಹಲವಾರು ಬಗೆಯ ರಾಜಧಾನಿಗಳನ್ನು ಹೊಂದಿದೆ.

ಅಧಿಕಾರ ವಿಭಜನೆಯ ನಿಯಮಾನುಸಾರ, ರಾಷ್ಟ್ರೀಯ ಹಾಗೂ ರಾಜ್ಯ ಸರಕಾರಗಳು ಕ್ರಮಶಃ ಶಾಖೆಗಳಾಗಿ ವಿಭಜಿತಗೊಂಡಿವೆ - ಕಾನೂನು ಮಾಡುವ ಅಧಿಕಾರ ಹೊಂದಿರುವ ಶಾಸಕಾಂಗ, ಕಾನೂನನ್ನು ಜಾರಿಗೆ ತರುವ ಜವಾಬ್ದಾರಿಯನ್ನು ಹೊಂದಿರುವ ಕಾರ್ಯಾಂಗ, ಕಾನೂನಿನಡಿಯಲ್ಲಿ ಉದ್ಭವಿಸುವ ಸಂಘರ್ಷವನ್ನು ಒಳಗೊಂಡ ಮೊಕದ್ದಮೆಗಳನ್ನು ತೀರ್ಮಾನಿಸುವ ಅಧಿಕಾರವನ್ನು ಪಡೆದಿರುವ ನ್ಯಾಯಾಂಗ. ಎಲ್ಲವನ್ನು ಒಟ್ಟಾಗಿ ತೆಗೆದುಕೊಂಡಾಗ ಈ ಮೂರು ಪಾತ್ರದಾರಿಗಳನ್ನು ಅವರವರ ಕ್ಷೇತ್ರಕ್ಕೆ ಸೀಮಿತಗೊಳಿಸುವ ಉದ್ದೇಶದಿಂದ ಅಧಿಕಾರ ವಿಭಜನೆ ಮತ್ತು ಸಂಯುಕ್ತ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ. ಅದೇ ಸಮಯದಲ್ಲಿ ವಿವಿಧ ಪಾತ್ರದಾರಿಗಳು ಒಂದು ನಿರ್ದಿಷ್ಟ ಕಾರ್ಯವನ್ನು ಪೂರ್ಣಗೊಳಿಸುವುದಕ್ಕೋಸ್ಕರ ಸಹಕರಿಸಲು ಅನುವಾಗುವಂತೆ (ಮತ್ತು ಕೆಲವು ಸಂದರ್ಭಗಳಲ್ಲಿ "ಸಹಕರಿಸತಕ್ಕದ್ದು") ಸಮಾನವಾದ ಕ್ಷೇತ್ರಗಳನ್ನು ನೀಡುವ ಮೂಲಕ ಅಧಿಕಾರ ಹಂಚಿಕೊಳ್ಳುವಿಕೆ ಎನ್ನುವ ಮೂರನೆಯ ಮತ್ತು ಕಾರ್ಯಸಾಧುವಾದ ನಿಯಮಕ್ಕೆ ಪಾತ್ರದಾರಿಗಳು ಬದ್ಧರಾಗಿರುವಂತೆ ಮಾಡಲಾಗಿದೆ. ಹಾಗಾಗಿ, ರಾಷ್ಟ್ರ, ರಾಜ್ಯ, ಮತ್ತು ಸ್ಥಳೀಯ ಸರಕಾರಗಳು ತೆರಿಗೆ ವಿಧಿಸುವ ಅಧಿಕಾರವನ್ನು ಹೊಂದಿವೆ, ಮತ್ತು ಪ್ರತಿಯೊಂದು ಸರಕಾರದಲ್ಲೂ ಶಾಸಕಾಂಗ ಮತ್ತು ಕಾರ್ಯಾಂಗಗಳು ತೆರಿಗೆಯ ಕ್ರಮವೊಂದನ್ನು ಜಾರಿಗೊಳಿಸುವುದು ಅಗತ್ಯ.

## ಸಾಂವಿಧಾನಿಕ ನಿಯಮಗಳು: ಗಡಿಗಳು ಮತ್ತು ಆಧಾರಭೂತ ನಿಯಮಗಳು

ಪಾತ್ರಧಾರಿಗಳನ್ನು ಕುರಿತ ಚರ್ಚೆಯು ಎರಡು ಪ್ರಮುಖ ಕಾರ್ಯಶೀಲ ನಿಯಮಗಳನ್ನು ಸೂಚಿಸುತ್ತದೆ. ಮೊದಲನೆಯದು ಮಿತ ಸರಕಾರದ ನಿಯಮ; ಅಂದರೆ, ನಮ್ಮ ಸಂಯುಕ್ತ ವ್ಯವಸ್ಥೆಯಲ್ಲಿರುವ ಪ್ರತಿಯೊಂದು ಸರಕಾರ ಮತ್ತು ಆ ಸರಕಾರದ ವ್ಯಾಪ್ತಿಯೊಳಗಿರುವ ಪಾತ್ರಧಾರಿಗಳಿಗೆ ಅವರು ಏನನ್ನು ಮಾಡಬಹುದು ಮತ್ತು ಎಲ್ಲಿ ಮಾಡಬಹುದು ಎನ್ನುವುದನ್ನು ವಿಶದಪಡಿಸುವ ಮಿತಿಗಳು ಮತ್ತು ಗಡಿಗಳು ಇರುತ್ತವೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಪ್ರತಿಯೊಂದು ಅಧಿಕಾರವೂ ತನ್ನದೇ ಆದ ಮಿತಿಗಳನ್ನು ಹೊಂದಿದೆ. ಒಮ್ಮೆ ಜಾನ್ ಎಫ್. ಕೆನಡಿ, ಅಧ್ಯಕ್ಷನನ್ನು, ಆತನು "ಒಬ್ಬ ಅಸಾಮಾನ್ಯ ಅಧಿಕಾರವನ್ನು ಹೊಂದಿರುವ ವ್ಯಕ್ತಿಯಾಗಿದ್ದಾನೆ" ಎಂದು ಹೇಳಿ, ಮುಂದುವರೆದು "ಆದರೆ ಅವನು ಅಂತಹ ಅಧಿಕಾರಗಳನ್ನು ಅಸಾಮಾನ್ಯ ಮಿತಿಗಳಡಿಯಲ್ಲಿ ಬಳಸಬೇಕಾಗುತ್ತದೆ" (ಸೊರೆನ್ಸನ್ 1963ರಲ್ಲಿ ಉದ್ಧರಿಸಲಾಗಿದೆ) ಎಂದು ವಿವರಿಸಿದ್ದನು.

ಅದೇ ಸಮಯದಲ್ಲಿ ಕೇವಲ ನಿಯಂತ್ರಣ ಮತ್ತು ಸಮತೋಲನದ ಹೆಸರಿನಲ್ಲಿ ಮಾತ್ರವಲ್ಲದೆ, ಸಾರ್ವಜನಿಕ ಸಂಗತಿಗಳು ವಿವಿಧ ಪಾತ್ರದಾರಿಗಳಿಂದ ಉತ್ತಮವಾಗಿ ನಿರ್ವಹಿಸಲ್ಪಡುತ್ತವೆ ಹಾಗೂ ಆ ಪ್ರತಿಯೊಬ್ಬರೂ ರಾಜಕೀಯಕ್ಕೆ ತಮ್ಮ ವಿಶಿಷ್ಟ ದೃಷ್ಟಿಕೋನವನ್ನು ತರುತ್ತಾರೆ ಮತ್ತು ವೈಯಕ್ತಿಕ ದೃಷ್ಟಿಕೋನ ಮತ್ತು ಹಿತಾಸಕ್ತಿಗಳನ್ನು ಇತರರ ದೃಷ್ಟಿಕೋನ ಮತ್ತು ಹಿತಾಸಕ್ತಿಗಳೊಂದಿಗೆ ಹೇಗೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂಬುದನ್ನು ಕಲಿಯುತ್ತಾರೆ ಎನ್ನುವ ನಂಬಿಕೆಯಿಂದಲೂ ಅಧಿಕಾರ ಹಂಚಿಕೆಯ ವ್ಯವಸ್ಥೆಯ ನಿಯಮಗಳನ್ನು ಅಮೇರಿಕಾ ಸಂವಿಧಾನವು ಗುರುತಿಸುತ್ತದೆ. ಈ ಅರ್ಥದಲ್ಲಿ, ಅಧಿಕಾರ ಹಂಚಿಕೆಯ ನಿಯಮವು ಬಹುತ್ವದ ಸಾಮಾಜಿಕ ನಿಯಮಗಳಿಗೆ ಮತ್ತು ಪಾತ್ರಧಾರಿಗಳು ವೈವಿಧ್ಯತೆಯ ಬಗ್ಗೆ ಆರೋಗ್ಯಕರವಾದ ಗೌರವಯುತ ಭಾವನೆಯಿಂದ ನಿಯಮಗಳನ್ನು ಅನುಸರಿಸುತ್ತಾರೆ ಎನ್ನುವ ಅದರ ನಿರೀಕ್ಷೆಗೆ ಸಮಾನವಾದ ಒಂದು ರಾಜಕೀಯ ನಿಯಮವಾಗಿದೆ.

ವಿಮರ್ಶಾತ್ಮಕ ಸಾಂವಿಧಾನಿಕ ಆಯ್ಕೆಗಳಲ್ಲಿ ಇಂದು ಆಸಕ್ತಿಯಿರುವ ವಿದ್ಯಾರ್ಥಿಗಳಿಗೆ ಇಂತಹ ಸಾಂವಿಧಾನಿಕ ನಿಯಮಗಳಿಂದ ನಾವು ಹಲವಾರು ಪ್ರಮುಖ ಪಾಠಗಳನ್ನು ಕಲಿಸಬಹುದಾಗಿದೆ. ಮೊದಲನೆಯದಾಗಿ, ನಮ್ಮ ರಾಷ್ಟ್ರೀಯ ಮತ್ತು ರಾಜ್ಯ ಸಂವಿಧಾನಗಳು ಜನಸಾಮಾನ್ಯರ ಕಲ್ಯಾಣವನ್ನು ಉತ್ತೇಜಿಸುವುದು ಮತ್ತು ವ್ಯಕ್ತಿಗತ ಸ್ವಾತಂತ್ರ್ಯವನ್ನು ರಕ್ಷಿಸುವಂತಹ ವಿಸ್ತೃತ ಗುರಿಗಳನ್ನು ನಿರ್ಧರಿಸಿವೆ, ಮತ್ತು ಕೆಲವು ರಾಜ್ಯ ಸಂವಿಧಾನಗಳೂ ಸಹ ಸಾರ್ವಜನಿಕ ನೀತಿಯನ್ನು ರೂಪಿಸಿವೆ. ಒಂದು ಸಾರ್ವಜನಿಕ ಸಮಸ್ಯೆಯನ್ನು ನಿವಾರಿಸಲು ಅಮೇರಿಕಾ ಸಂವಿಧಾನವನ್ನೆ ತಿದ್ದುಪಡಿ ಮಾಡುವ ಪ್ರಯತ್ನವನ್ನು ಯಾರೂ ಮಾಡಲಾರರು. ನಿಷೇಧ ತಿದ್ದುಪಡಿಯು (18ನೆ ತಿದ್ದುಪಡಿ) ಸಾಂವಿಧಾನಿಕ ತಿದ್ದುಪಡಿಯ ಮೂಲಕ ಸಾಮಾಜಿಕ ವರ್ತನೆಗಳನ್ನು ನಿಯಂತ್ರಿಸುವ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿನ ಕ್ಲಿಷ್ಟತೆಯನ್ನು ಸ್ಪಷ್ಟಪಡಿಸುತ್ತದೆ.

ಎರಡನೆಯದಾಗಿ, ಯಾವಾಗ ಒಂದು ಗುಂಪಿನ ಪಾತ್ರಧಾರಿಗಳು (ಅದು ಸರಕಾರವಾಗಿರಲಿ ಅಥವಾ ವ್ಯಕ್ತಿಗಳಾಗಿರಲಿ) ಮತ್ತೊಂದು ಗುರಿಯ ಬೆಲೆ ತೆತ್ತಾದರೂ ಅಥವಾ ಅದನ್ನು ಕಡೆಗಣಿಸಿಯಾದರೂ ಗುರಿಯನ್ನು ಸಾಧಿಸಲು ಪ್ರಯತ್ನಿಸುತ್ತಾರೊ ಅಂತಹ ಸಮಯದಲ್ಲಿ ಜನಸಾಮಾನ್ಯರ ಕಲ್ಯಾಣ ಮತ್ತು ವ್ಯಕ್ತಿ ಸ್ವಾತಂತ್ರ್ಯದಂತಹ ಸಾಂವಿಧಾನಿಕ ಗುರಿಗಳು ಹಕ್ಕುಗಳ ಸಂಘರ್ಷಕ್ಕೆ ಕಾರಣವಾಗಬಹುದು. ಪ್ರತಿಯೊಂದು ಸಾಂವಿಧಾನಿಕ ಗುರಿಗಳ ಹಿಂದೆಯೂ ತನ್ನದೇ ಹಿತಾಸಕ್ತಿ ಮತ್ತು ಹಕ್ಕುಗಳನ್ನು ಹೊಂದಿರುವ ಒಬ್ಬ ಪಾತ್ರಧಾರಿ ಅಥವಾ ಪಾತ್ರಧಾರಿಗಳ ಒಂದು ಗುಂಪು ಇರುತ್ತದೆ.

ಮೂರನೆಯದು, ಅಮೇರಿಕಾದ ಸಾಂವಿಧಾನಿಕ ಪರಂಪರೆಯು ಸಾರ್ವಜನಿಕ ನೀತಿಯನ್ನು ರೂಪಿಸುವಲ್ಲಿ ಸಂವಿಧಾನದ ಪಾತ್ರವನ್ನು ಸಾಮಾನ್ಯವಾಗಿ, ಪ್ರಕ್ರಿಯಾತ್ಮಕವಾಗಿ ನೋಡುತ್ತದೆಯೆ ಹೊರತು ಅದರ ಮೂಲಸತ್ವವಾಗಿಯಲ್ಲ. ಏಡ್ಸ್ ಹರಡುವಿಕೆ ಅಥವಾ ಮಾದಕ ದ್ರವ್ಯಗಳ ದುರುಪಯೋಗದಂತಹ ಸಾರ್ವಜನಿಕ ಸಮಸ್ಯೆಗಳು ಎದುರಾದಾಗ ಪರಿಹಾರವನ್ನು ಎಲ್ಲಿ ಹುಡುಕಬಹುದು ಎಂದು ತಿಳಿಯಲು ರಾಷ್ಟ್ರೀಯ ಮತ್ತು ರಾಜ್ಯ ಸಂವಿಧಾನಗಳತ್ತ ನೋಡುತ್ತೇವೆಯೆ ಹೊರತು ಅವು ಏನಾಗಿರಬಹುದು ಎನ್ನುವುದನ್ನಲ್ಲ. ನಾವು ಮತ್ತೆ ಗಮನಿಸಬೇಕಾದ್ದೆಂದರೆ, ಸಂವಿಧಾನಗಳು ಪಾತ್ರಧಾರಿಗಳನ್ನು, ಅವರ ಅಧಿಕಾರಗಳನ್ನು, ಮತ್ತು ಅದರ ಮಿತಿಗಳನ್ನು ನಿಗದಿಪಡಿಸುತ್ತವೆ.

ನಾಲ್ಕನೆಯದಾಗಿ, ಸಾಂವಿಧಾನಿಕ ಪ್ರಕ್ರಿಯೆಯ ಸ್ವರೂಪವು ಸ್ವಾತಂತ್ರ್ಯದ ಹೆಸರಿನಲ್ಲಿ ಅಧಿಕಾರ ವಿಭಜನೆಯ ಒಂದು ಅಂಶವನ್ನು ಮತ್ತು ಆಳ್ವಿಕೆಯ ಹೆಸರಿನಲ್ಲಿ ಅಧಿಕಾರ ಹಂಚಿಕೊಳ್ಳುವಿಕೆಯ ಒಂದು ಅಂಶವನ್ನು ಒಳಗೊಂಡಿರುತ್ತದೆ. ವಾಸ್ತವವಾಗಿ, ರಾಷ್ಟ್ರ ರಕ್ಷಣೆಯಿಂದ ಹಿಡಿದು ಕಸ ವಿಲೇವಾರಿಯವರೆಗೆ - ಪ್ರತಿಯೊಂದು ಸಾರ್ವಜನಿಕ ನೀತಿಯ ಸಮಸ್ಯೆಯು ಏಕಕಾಲದಲ್ಲಿ ರಾಷ್ಟ್ರೀಯ, ರಾಜ್ಯ, ಮತ್ತು ಸ್ಥಳೀಯ ಸರಕಾರಗಳು ಮತ್ತು ಅವುಗಳೊಟ್ಟಿಗೆ ಸರಕಾರೇತರ ಸಂಘಟನೆಗಳು ಮತ್ತು ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದ ವ್ಯಕ್ತಿಗಳನ್ನು ಒಳಗೊಂಡಿರುತ್ತದೆ.

ಇದಕ್ಕೆ ಒಂದು ಒಳ್ಳೆಯ ಉದಾಹರಣೆಯೆಂದರೆ ಅಮೇರಿಕಾ ಸರ್ವೋಚ್ಚ ನ್ಯಾಯಲಯದ ವಿಶೇಷ ಅಧಿಕಾರವೆಂದು ಸಾಮಾನ್ಯವಾಗಿ ತಿಳಿದಿರುವ ಸಾರ್ವಜನಿಕ ನೀತಿಯೇ ಆಗಿದೆ. ವಾಸ್ತವದಲ್ಲಿ ಸತ್ಯಕ್ಕಿಂತಲೂ ಹೆಚ್ಚು ಸ್ಪಷ್ಟವಾದದ್ದು ಮತ್ತಾವುದೂ ಇಲ್ಲ. ನ್ಯೂಯಾರ್ಕ್ ರಾಜ್ಯ ಮೇಲ್ಮನವಿ ನ್ಯಾಯಾಲಯವನ್ನು ಅನುಸರಿಸಿದ ರಾಜ್ಯದ ನ್ಯಾಯಾಲಯಗಳು ಮತ್ತು ಇತರ ಆವಿಷ್ಕಾರ ಮನೋಭಾವದ ರಾಜ್ಯದ ಉಚ್ಚ ನ್ಯಾಯಾಲಗಳು ಸಂಯುಕ್ತ ವ್ಯವಸ್ಥೆಯ ಸಂವಿಧಾನವು ಖಾತ್ರಿಪಡಿಸಿದ ಹಕ್ಕುಗಳು ಮತ್ತು ಅವುಗಳ ಬರ್ಗರ್-ರೆಂಕ್ವಿಸ್ಟ್ ವ್ಯಾಖ್ಯಾನಗಳಾಚೆ ವ್ಯಕ್ತಿಗಳಿಗೆ ಹಕ್ಕುಗಳನ್ನು ನೀಡಲು ತಮ್ಮದೇ ರಾಜ್ಯದ ಸಂವಿಧಾನವನ್ನು ಅವಲಂಬಿಸಿವೆ. ಇದಲ್ಲದೆ ಅಮೇರಿಕಾ ಕಾಂಗ್ರೆಸ್ ಮತ್ತು ರಾಜ್ಯದ ಶಾಸಕಾಂಗಗಳೆರಡೂ ಸಂಯುಕ್ತ ವ್ಯವಸ್ಥೆ ಮತ್ತು ರಾಜ್ಯದ ಸಂವಿಧಾನಗಳಿಗೆ ತಿದ್ದುಪಡಿ ಮಾಡುವುದಕ್ಕೆ ಸಂಬಂಧಿಸಿದ ತಮ್ಮ ಅಧಿಕಾರದ ಮೂಲಕ ಸಾಂವಿಧಾನಿಕ ನೀತಿನಿರ್ಮಾತೃಗಳಾಗಿ ಅತ್ಯಂತ ಮುಖ್ಯ ಪಾತ್ರವನ್ನು ವಹಿಸುತ್ತವೆ. ಅಂತಿಮವಾಗಿ, ವ್ಯಕ್ತಿಗಳು, ಅವರು ಸಾರ್ವಜನಿಕ ಅಧಿಕಾರಿಗಳಿರಲಿ ಅಥವಾ ಖಾಸಗಿ ವ್ಯಕ್ತಿಗಳಾಗಿರಲಿ, ಸಂವಿಧಾನವೇ ನಿಗದಿಪಡಿಸಿದ ಮಿತಿಗಳೊಳಗೆ ಆಯ್ಕೆಗಳನ್ನು ಮಾಡಿಕೊಳ್ಳುವ ಪ್ರತಿ ಬಾರಿಯೂ ಪರೋಕ್ಷವಾಗಿಯಾದರೂ ಸಾಂವಿಧಾನಿಕ ನೀತಿಯು ರೂಪುಗೊಳ್ಳುತ್ತದೆ.

ಈ ಹಿಂದಿನ ಚರ್ಚೆಯು ಒಂದು ಅಂತಿಮ ಪಾಠವನ್ನು ಸೂಚಿಸುತ್ತದೆ: ಒಬ್ಬ ವಿದ್ವಾಂಸರ ಮಾತಿನಲ್ಲಿ ಹೇಳುವುದಾದರೆ, ಅಮೇರಿಕಾ ಸಂವಿಧಾನವು, ಒಂದು "ಅಪರಿಪೂರ್ಣ ದಸ್ತಾವೇಜು." ಅದು, ತನ್ನ ಕರ್ತೃಗಳ ಇಚ್ಛೆಯಂತೆ, ಅಸ್ತಿತ್ವದಲ್ಲಿರುವ ರಾಜ್ಯಗಳ ಸಂವಿಧಾನವನ್ನು ಸೇರಬೇಕೇ ಹೊರತು ಅವುಗಳ ಸ್ಥಾನಪಲ್ಲಟ ಮಾಡಬಾರದು. ಆದ್ದರಿಂದಲೇ ಅಮೇರಿಕಾ ಸಂವಿಧಾನವು ಹೆಚ್ಚು ಸಂಕ್ಷಿಪ್ತವಾದುದಾಗಿದೆ ಮತ್ತು ಸಂಪೂರ್ಣವಾಗಿ "ಮೂಲಭೂತ" ಅಂಶಗಳ ಬಗ್ಗೆ ತನ್ನ ಗಮನವನ್ನು ಕೇಂದ್ರೀಕರಿಸಿದೆ. ಆಗ ಮತ್ತು ಈಗಲೂ ರಾಜ್ಯ ಸಂವಿಧಾನಗಳು ಮತ್ತು ಅದರ ಸರಕಾರಗಳು ಅಮೇರಿಕಾ ಸಂಯುಕ್ತ ವ್ಯವಸ್ಥೆಯ ಪ್ರಮುಖ ಆಧಾರಗಳಾಗಿವೆ. ಒಟ್ಟಾರೆಯಾಗಿ,

ಐವತ್ತೊಂದು ಸಂಯುಕ್ತ ಮತ್ತು ರಾಜ್ಯ ಸಂವಿಧಾನಗಳು ಅಮೇರಿಕಾ ಸಾಂವಿಧಾನಿಕ ವ್ಯವಸ್ಥೆಯನ್ನು ಪೂರ್ಣಗೊಳಿಸುತ್ತವೆ.

ಚಟುವಟಿಕೆ

ಸೀಮಿತ ಸರಕಾರವನ್ನು ಕುರಿತು ದಿ ಫೆಡರಲಿಸ್ಟ್

ಈ ಕೆಳಗೆ ನೀಡಲಾಗಿರುವ ದಿ ಫೆಡರಲಿಸ್ಟ್‌ನ ಆಯ್ದ ಭಾಗಗಳನ್ನು ಓದಿ. ನೀವು ಓದುತ್ತಾ ಇರುವಂತೆ ಸೀಮಿತ ಸರಕಾರ ಮತ್ತು ಕಾನೂನಿನ ಆಳ್ವಿಕೆಯ ಬಗ್ಗೆ  ಹ್ಯಾಮಿಲ್ಟನ್ ಮತ್ತು ಮೆಡಿಸನ್ ಅವರ ಅಭಿಪ್ರಾಯ ಭೇದಗಳನ್ನು ಗುರುತಿಸಿ.

ಸಂಖ್ಯೆ 51: ಮ್ಯಾಡಿಸನ್

...ಅಧಿಕಾರಗಳು (ಸರಕಾರದ) ...ಕ್ರಮೇಣವಾಗಿ ಕೇಂದ್ರೀಕೃತವಾಗದಂತೆ ಇರುವ ದೊಡ್ಡ ಭದ್ರತೆ ಎಂದರೆ . . . ಅತಿಕ್ರಮವಾಗದಂತೆ ತಡೆಯಲು ಅಗತ್ಯವಾದ ಸಾಂವಿಧಾನಿಕ ಸಾಧನಗಳು ಮತ್ತು ವೈಯಕ್ತಿಕ ಪ್ರೇರಣೆಗಳನ್ನು ಕೊಡುವುದರಲ್ಲಿದೆ.... ಸರಕಾರದ ದುರುಪಯೋಗಗಳನ್ನು ನಿಯಂತ್ರಿಸುವ ಸಲುವಾಗಿ ಅಂತಹ ಸಾಧನಗಳು ಅಗತ್ಯವಾಗಿರುವುದು ಮಾನವ ಸ್ವಭಾವದ ಒಂದು ಚಿಂತನವಾಗಿರಬಹುದು. ಆದರೆ ಸರಕಾರವೆಂದರೇನು ಎನ್ನುವುದೇ ಮಾನವ ಸ್ವಭಾವವನ್ನು ಕುರಿತ ಎಲ್ಲಕ್ಕಿಂತ ದೊಡ್ಡ ಚಿಂತನವಲ್ಲದೆ ಮತ್ತೇನು? ಮಾನವರು ದೇವತೆಗಳಾಗಿದ್ದರೆ ಯಾವುದೇ ಸರಕಾರದ ಅಗತ್ಯವಿರುತ್ತಿರಲಿಲ್ಲ. ದೇವತೆಗಳೇ ಮನುಷ್ಯರನ್ನು ಆಳುತ್ತಿದ್ದರೆ ಸರಕಾರದ ಮೇಲೆ ಬಾಹ್ಯ ಅಥವಾ ಆಂತರಿಕ ನಿಯಂತ್ರಣದ ಅಗತ್ಯವೇ ಇರುತ್ತಿರಲಿಲ್ಲ. ಮನುಷ್ಯರೇ ಮನುಷ್ಯರ ಮೇಲೆ ಆಡಳಿತ ನಡೆಸುವ ಸರಕಾರಗಳನ್ನು ರೂಪಿಸುವಲ್ಲಿ ಇರುವ ದೊಡ್ಡ ಸಮಸ್ಯೆ ಎಂದರೆ: ಆಳಲ್ಪಡುವವರನ್ನು ನಿಯಂತ್ರಿಸಲು ಅನುವಾಗುವಂತೆ ಮೊದಲು ನೀವು ಸರಕಾರವನ್ನು ಸಬಲಗೊಳಿಸುವುದು; ಮತ್ತು ನಂತರದಲ್ಲಿ ಅದು ತನ್ನನ್ನು ತಾನೇ ನಿಯಂತ್ರಿಸಿಕೊಳ್ಳುವಂತೆ ಮಾಡುವುದು. ಜನರ ಮೇಲಿನ ಅವಲಂಬನೆ ಖಂಡಿತವಾಗಿಯೂ ಸರಕಾರದ ಮೇಲಿನ ಪ್ರಾಥಮಿಕ ನಿಯಂತ್ರಣವಾಗಿದೆ; ಆದರೆ ಅನುಭವವು ಮನುಷ್ಯನಿಗೆ ಕೆಲವು ಪೂರಕ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕಾದ ಅಗತ್ಯವನ್ನು ಕಲಿಸಿದೆ (ಲಿಖಿತ ಸಂವಿಧಾನದ ಸರ್ವೋಚ್ಚ ಕಾನೂನನ್ನು ಆಧರಿಸಿದ ಸೀಮಿತ ಸರಕಾರ). . . .ಪ್ಯುಬ್ಲಿಯಸ್

ಸಂಖ್ಯೆ 70: ಹ್ಯಾಮಿಲ್ಟನ್

ಆದ್ದರಿಂದ, ತಿಳಿವಳಿಕೆಯುಳ್ಳ ಮನುಷ್ಯರೆಲ್ಲರೂ ಒಂದು ಸತ್ವಯುತವಾದ ಕಾರ್ಯಾಂಗದ ಅಗತ್ಯವಿದೆಯೆಂದು ಒಪ್ಪುತ್ತಾರೆಂದು ಅಂದುಕೊಂಡರೂ, ಅಂತಹ ಸತ್ವದಲ್ಲಿ ಅಡಕವಾಗಿರುವ ಅಂಶಗಳಾವುವು ಎನ್ನುವ ಪ್ರಶ್ನೆ ಹಾಗೆಯೆ ಉಳಿಯುತ್ತದೆ. ಅವುಗಳನ್ನು ಗಣರಾಜ್ಯದ ಅರ್ಥದಲ್ಲಿ (ಜನರ ಹೆಸರಿನಲ್ಲಿ ಮತ್ತು ಅವರ ಚುನಾಯಿತ ಪ್ರತಿನಿಧಿಗಳಿಂದಾದ ಸರಕಾರ) ಸುರಕ್ಷತೆಯನ್ನು (ಸೀಮಿತ ಸರಕಾರದ ಅವಕಾಶಗಳು) ರೂಪಿಸುವ ಇತರ ಅಂಶಗಳೊಂದಿಗೆ ಎಷ್ಟರಮಟ್ಟಿಗೆ ಸೇರಿಸಬಹುದು? ಮತ್ತು ಎಷ್ಟರಮಟ್ಟಿಗೆ ಈ ಸಂಯೋಜನೆಯು (ಕಾನೂನಿನ

ಮಿತಿಗೊಳಪಟ್ಟ ಸತ್ವಯುತ ಸರಕಾರ) ಸಮ್ಮೇಳನದ ಮೂಲಕ ವರದಿಸಲ್ಪಟ್ಟ ಯೋಜನೆಯ ಲಕ್ಷಣಗಳನ್ನು ಹೊಂದಿರುತ್ತದೆ?

ಕಾರ್ಯಾಂಗವನ್ನು ಸತ್ವಯುತಗೊಳಿಸುವ ಅಂಶಗಳೆಂದರೆ ಒಗ್ಗಟ್ಟು (ಒಬ್ಬ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಅಥವಾ ಅಧ್ಯಕ್ಷ); ಅವಧಿ (ಸಾಕಷ್ಟು ಧೀರ್ಘಾವಧಿಯ ಅಧಿಕಾರ); ಅದರ ಬೆಂಬಲಕ್ಕೆ ಪರ್ಯಾಪ್ತ ಅವಕಾಶಗಳು; ಮತ್ತು ಸಮರ್ಥ ಅಧಿಕಾರಗಳು. (ಈ ಅಂಶಗಳನ್ನು 1787ರ ಸಂವಿಧಾನವು ಒಳಗೊಂಡಿದೆ ಎಂದು ಹ್ಯಾಮಿಲ್ಟನ್ ವಾದಿಸುತ್ತಾನೆ.)

ಜನರ ಮೇಲೆ ಸೂಕ್ತವಾಗಿ ಅವಲಂಬಿಸಿರುವುದು ಮತ್ತು ಸೂಕ್ತ ಜವಾಬ್ದಾರಿಯು ಗಣರಾಜ್ಯದ ಅರ್ಥದಲ್ಲಿ (ಸೀಮಿತ ಸರಕಾರ ಮತ್ತು ಕಾನೂನಿನ ಆಳ್ವಿಕೆಯ ಅವಕಾಶ) ಸುರಕ್ಷತೆಯನ್ನು ನೀಡುವ ಅಂಶಗಳಾಗಿವೆ... .ಪ್ಯುಬ್ಲಿಯಸ್

ಪ್ರಶ್ನೆಗಳು

ಈ ಕೆಳಗಿನ ಪ್ರಶ್ನೆಗಳನ್ನು ನಿಮ್ಮ ತರಗತಿಯಲ್ಲಿ ಅಥವಾ ಸಣ್ಣ ಗುಂಪಿನಲ್ಲಿ ಚರ್ಚಿಸಿ.

1. ಹ್ಯಾಮಿಲ್ಟನ್ ಮತ್ತು ಮ್ಯಾಡಿಸನ್ ಪ್ರಕಾರ ಸೀಮಿತ ಸರಕಾರ ಮತ್ತು ಕಾನೂನಿನ ಆಳ್ವಿಕೆ ಎಂದರೇನು? ಮಿತ ಸರಕಾರ ಮತ್ತು ಕಾನೂನಿನ ಆಳ್ವಿಕೆಯ ತಮ್ಮ ಚಿಂತನೆಯನ್ನು ಅವರು ಹೇಗೆ ಸಮರ್ಥಿಸಿಕೊಳ್ಳುತ್ತಾರೆ?

2. ಸೀಮಿತ ಸರಕಾರ ಮತ್ತು ಕಾನೂನಿನ ಆಳ್ವಿಕೆಯನ್ನು ಸಾಧಿಸಲು ಜನರ ಪಾತ್ರ ಮತ್ತು ಲಿಖಿತ ಸಂವಿಧಾನದ ಉಪಯೋಗವೇನು? 1787ರ ಸಂವಿಧಾನವು ಸಶಕ್ತ ಸರ್ಕಾರಕ್ಕೆ ಅವಶ್ಯವಿರುವ ಅಧಿಕಾರಗಳು ಮತ್ತು ವ್ಯಕ್ತಿಯ ಹಕ್ಕುಗಳು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಲು ಅಗತ್ಯವಾದ ಅಧಿಕಾರಗಳ ಮಿತಿಗಳ ನಡುವೆ ಸಮತೋಲನವನ್ನು ಉಂಟುಮಾಡುವ ಸಾಧನಗಳನ್ನು ಹೇಗೆ ಒದಗಿಸುತ್ತದೆ?

3. ಸತ್ವಯುತ ಹಾಗೂ ಸೀಮಿತ - ಈ ಎರಡೂ ಅಂಶಗಳನ್ನು ಒಳಗೊಂಡಿರುವ ಸರಕಾರದ ಲಕ್ಷಣಗಳನ್ನು ವಿವರಿಸಿ. ಅಮೇರಿಕಾದ ಈಗಿನ ಸರಕಾರವು ನಿಮ್ಮ ವಿವರಣೆಗೆ ಅನುರೂಪವಾಗಿದೆಯೆ?

ಸಮಕಾಲೀನ ರಾಜಕೀಯಕ್ಕೆ ಅಳವಡಿಸಿಕೊಳ್ಳುವುದು

ತೀವ್ರವಾಗಿ ಬದಲಾಗುತ್ತಿರುವ ಒಂದು ವಿಶ್ವದಲ್ಲಿ ನಿರ್ಧಾರ ಕೈಗೊಳ್ಳಲು ವರ್ತಮಾನವು ಜ್ಞಾನದ ತಳಹದಿಯ ಪ್ರಮುಖ ಭಾಗವಾಗಿದೆ. ಈ ಭಾಗದಲ್ಲಿ ನಾವು ರಾಜಕೀಯ ಮತ್ತು ಸಾರ್ವಜನಿಕ ನೀತಿಯ ಮೂರು ಸ್ಥಾಯೀ ವಿಷಯಗಳನ್ನು - ದುರ್ಲಭ ಸಂಪನ್ಮೂಲಗಳ ವಿತರಣೆ, ಮಾನವ ವರ್ತನೆಯ ನಿಯಂತ್ರಣ, ಮತ್ತು ರಾಷ್ಟ್ರೀಯ ಹಿತಾಸಕ್ತಿಯ ರಕ್ಷಣೆಯನ್ನು ವಿಶ್ಲೇಷಿಸಲು ಅಧಿಕಾರ ಮತ್ತು ನ್ಯಾಯದ ಪರಿಕಲ್ಪನೆಗಳನ್ನು ಉಪಯೋಗಿಸಿಕೊಳ್ಳುತ್ತೇವೆ. ಈ ಮೂರು ಸ್ಥಾಯಿ ಚರ್ಚಾಂಶಗಳ ಉದಾಹರಣೆಗಾಗಿ ಓದುಗರು ಈ ಅಧ್ಯಾಯವನ್ನು ಓದುತ್ತಿರುವಾಗ ನಡೆಯುತ್ತಿರುವ ಸುದ್ದಿಗಳತ್ತ ಗಮನಹರಿಸಬೇಕು.

ಸ್ಥಾಯೀ ವಿಷಯಗಳು: ದುರ್ಲಭ ಸಂಪನ್ಮೂಲಗಳ ಹಂಚಿಕೆ

ಸರಕಾರವು ಹೇಗೆ ಸಂಪನ್ಮೂಲಗಳನ್ನು ಹಂಚಿಕೆ ಮಾಡುತ್ತದೆ ಎನ್ನುವುದಕ್ಕೆ ಆಯವ್ಯಯಕ್ಕಿಂತ ಉತ್ತಮ ಉದಾಹರಣೆ ಮತ್ತೊಂದಿಲ್ಲ. ಅಕ್ಟೋಬರ್ 1, ಫೆಡರಲ್ ವ್ಯವಸ್ಥೆಯ ಹಣಕಾಸಿನ ವರ್ಷದ ಪ್ರಾರಂಭವಾಗಿರುತ್ತದೆ. ನಿಂತು ಹೋದ ಆಯವ್ಯಯದ ಮಾತುಕತೆಗಳಿಗೆ, ಶಾಸಕಾಂಗ-ಕಾರ್ಯಾಂಗಗಳ ಭಿನ್ನಾಭಿಪ್ರಾಯಗಳಿಗೆ, ಮತ್ತು ಪಕ್ಷಗಳ ನಡುವಿನ ಕಿತ್ತಾಟದ ಕತೆಗಳಿಗೆ ಸದಾ ಇದೊಂದು ಒಳ್ಳೆಯ ಕಾಲ. ಆಯವ್ಯಯವನ್ನು ತಯಾರಿಸುವ ಪ್ರಕ್ರಿಯೆಯು ಒಂದು ಸರಕಾರವು ಮಾಡಬಹುದಾದ ಪ್ರಮುಖ ನೀತಿಗತ ಆಯ್ಕೆಗಳನ್ನು ಒಳಗೊಳ್ಳುತ್ತದೆ. ಸಮಾಜ ವಿಜ್ಞಾನಿಗೆ, ಸಂಯುಕ್ತ ವ್ಯವಸ್ಥೆಯ ಅಥವಾ ರಾಜ್ಯದ ಆಯವ್ಯಯವು ಕೇವಲ ಸಾರ್ವಜನಿಕ ನೀತಿಯ ಒಂದು ಸಾಧನವಾಗಿಷ್ಟೇ ಅಲ್ಲದೆ, ಅದು ರಾಜಕೀಯ ಅಧಿಕಾರದ ಹಾಗೂ ಅದರ ಪರಿಣಾಮಸ್ವರೂಪದ ನ್ಯಾಯದ ಭಾವನೆಯ ಅಭಿವ್ಯಕ್ತಿಯೂ ಆಗಿರುತ್ತದೆ ಏಕೆಂದರೆ ಯಾರು ಏನನ್ನು ಪಡೆದುಕೊಳ್ಳುತ್ತಾರೆ, ಮತ್ತು ಅದಕ್ಕೆ ಯಾರು ಹಣ ತೆರುತ್ತಾರೆ ಎನ್ನುವಂತಹ ವಿತರಣಾ ಪ್ರಶ್ನೆಗಳಿಗೆ  ಸಮಾಜದ ಉತ್ತರವೆಂದರೆ ಸಾರ್ವಜನಿಕ ಆಯವ್ಯಯಗಳು.

ಶಿಕ್ಷಣದ ಇತರ ವರ್ಗೀಕರಣಗಳಿಗೆ ಮತ್ತು ಸಾರಿಗೆ, ಆರೋಗ್ಯ, ಮಾನವ ಸೇವೆಗಳು, ಮತ್ತು ಮಿಲಿಟರಿ ರಕ್ಷಣೆಯಂತಹ ಇತರ ವರ್ಗೀಕರಣಗಳಿಗೆ ಮಾಡುವ ವೆಚ್ಚಕ್ಕೆ ಹೋಲಿಸಿದರೆ ಕೆಲವು ನಿರ್ದಿಷ್ಟ ವರ್ಗೀಕರಣದ ಕಾರ್ಯಕ್ರಮಗಳಿಗೆ (ಉನ್ನತ ಶಿಕ್ಷಣದಂತಹ) ಕೊಡುವ ಧನಸಹಾಯವು ಹೇಗಿದೆ? ಉನ್ನತ ಶಿಕ್ಷಣಕ್ಕೆ ನೀಡಲಾಗುವ ಸಂಯುಕ್ತ ವ್ಯವಸ್ಥೆಯ ನಿಧಿಯನ್ನು ವಿದ್ಯಾರ್ಥಿಗಳಿಗೆ, ಕಾಲೇಜುಗಳಿಗೆ, ವಿಶ್ವವಿದ್ಯಾನಿಲಯಗಳಿಗೆ ಕೊಡಬೇಕೆ ಅಥವಾ ಇವುಗಳ ಯಾವುದಾದರೂ ಎರಡರ ಸಂಯೋಜನೆಗೊ? ಪ್ರಾದೇಶಿಕ ಸಮತೋಲನವು ಪ್ರಮುಖವಾದ ಅಂಶವಾಗಿರಬೇಕೆ? ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಿಗೆ ಧನಸಹಾಯ ಮಾಡುವಾಗ ಅವುಗಳ ನಡುವಿನ ಭಿನ್ನತೆಯನ್ನು, ಯಾವುದಾದರೂ ಇದ್ದಲ್ಲಿ, ಹೇಗೆ ಗುರುತಿಸಬೇಕು? ವಿದ್ಯಾರ್ಥಿಗಳಿಗೆ ಸಹಾಯ ಮಾಡುವಾಗ ಅವರ ಅಗತ್ಯ ಮತ್ತು ಅರ್ಹತೆ ಇವೆರಡರಲ್ಲಿ ಯಾವುದನ್ನು ಪರಿಗಣಿಸಬೇಕು? ಈ ನೀತಿಗತ ಪ್ರಶ್ನೆಗಳು ಸಮಾಜದ ಎಲ್ಲ ಭಾಗಗಳಿಂದ ವಶೀಲೀದಾರರು ಮತ್ತು ಆಸಕ್ತ-ಗುಂಪುಗಳ - ಅಂದರೆ ರಾಜ್ಯದ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು, ಖಾಸಗಿ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು, ಪೋಷಕರ ಸಂಘಗಳು, ಶಿಕ್ಷಕರ ಸಂಘಗಳು, ವಿದ್ಯಾರ್ಥಿ ಸಂಘಗಳು, ಖಾಸಗಿ ಸಂಘಟನೆಗಳು, ಅಲ್ಪಸಂಖ್ಯಾತ ಗುಂಪುಗಳು, ರೂಢಿವಾದಿ ಗುಂಪುಗಳು, ಉದಾರವಾದಿ ಗುಂಪುಗಳು, ಒಕ್ಕೂಟ ಸಂಘಟನೆಗಳು, ಪ್ರಾದೇಶಿಕ ಗುಂಪುಗಳು, ಮತ್ತು ಸ್ವಯಂ ಕಾಂಗ್ರೆಸ್ಸಿಗರ ಗುಂಪುಗಳ - ವಕ್ತಾರರನ್ನು ಹೊರತರುತ್ತವೆ.

ಯಾವುದೇ ಒಂದು ಆಯವ್ಯಯವು ಕೇವಲ ಒಟ್ಟಾರೆ ವಿತ್ತ ಪೋಷಣ ಚಿತ್ರಣದ ಒಂದು ಭಾಗವಾಗಿರುತ್ತದೆ. ಸಂಯುಕ್ತ ವ್ಯವಸ್ಥೆ, ರಾಜ್ಯ, ಮತ್ತು ಸ್ಥಳೀಯ ಸಾರ್ವಜನಿಕ ನಿಧಿಯ ಜೊತೆಗೆ ಕಾರ್ಪೋರೇಟ್, ಲಾಭರಹಿತ ಮತ್ತು ಸ್ವಯಂ-ಕೊಡುಗೆಯ ಹಣದ ಮಿಶ್ರಣವನ್ನು ಒಳಗೊಂಡಿರುತ್ತದೆ. ಆದ್ದರಿಂದ ಆದಾಯದ ನಿಟ್ಟಿನಲ್ಲಿ ನೋಡುವುದಾದರೆ “ಯಾರು ಹಣ ನೀಡುತ್ತಾರೆ?” ಎನ್ನುವ ಪ್ರಶ್ನೆಯು ಸಂಕೀರ್ಣವಾದುದಾಗಿದೆ. ತೆರಿಗೆ ಆದಾವನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವನೆಯು ಒಂದು ಗುಂಪಿನ ವ್ಯಕ್ತಿಗಳಿಗೆ ಒಂದು ನಿರ್ದಿಷ್ಟ ಹೊರೆಯಾಗಿರುತ್ತದೆ. ಹಾಗಾಗಿ, ತೆರಿಗೆ ಹೆಚ್ಚಳದ ಹೋರಾಟಗಳು ತೆರಿಗೆ ಹೆಚ್ಚಳದಿಂದ ಉಂಟಾಗುವ ಸಾಪೇಕ್ಷ ಪರಿಣಾಮದಂತಹ ಆರ್ಥಿಕ ನೆಲಗಟ್ಟಿನಲ್ಲಿ ಮಾತ್ರ ನಡೆಯದೆ ಅದರ ಪರಿಣಾಮಕ್ಕೊಳಗಾಗುವ ಗುಂಪುಗಳು ಮತ್ತು ಕಾಂಗ್ರೆಸ್ಸಿನಲ್ಲಿನ ಅವರ ವಕ್ತಾರರ ಸಾಪೇಕ್ಷ ಪ್ರಭಾವದ ನಿಟ್ಟಿನ ರಾಜಕೀಯ ನೆಲೆಯಲ್ಲೂ ನಡೆಯುತ್ತದೆ.

ಈ ಮುಂದಿನ ಉದಾಹರಣೆಗಳು ಹಂಚಿಕೆಯ ಪ್ರಶ್ನೆಯನ್ನು ಎದುರಿಸುವ ಎರಡು ಮಾರ್ಗಗಳನ್ನು ಸೂಚಿಸುತ್ತದೆ (ಈ ಚರ್ಚೆಯನ್ನು ರಿಪ್ಲಿ ಮತ್ತು ಫ್ರಾಂಕ್ಲಿನ್ (1987) ಅವರಿಂದ ಅಳವಡಿಸಿಕೊಳ್ಳಲಾಗಿದೆ). ಮೊದಲನೆಯದು, ವಿತರಣಾತ್ಮಕ, ಇದರ ಪ್ರಕಾರ ವೆಚ್ಚದ ಸಂಪನ್ಮೂಲಗಳನ್ನು (ಅಥವಾ ತೆರಿಗೆ ಹೊರೆಯನ್ನು) ಕೊಡುಗೆಯನ್ನು ನೀಡಿರುವ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತದೆ. ವಿತರಣಾ ತಾತ್ವಿಕತೆಯು ವಿಘಟಿತ ಮತ್ತು ಬಹುತ್ವವಾದಿಯಾಗಿರುತ್ತದೆ. ಪ್ರತಿಯೊಬ್ಬರಿಗೂ ಸ್ವಲ್ಪವಾದರೂ ಸಿಗುವಂತೆ, ಮಧ್ಯಮ (ಅತ್ಯಂತ ದೊಡ್ಡ) ವರ್ಗದವರಿಗೆ ಹೆಚ್ಚು ಪ್ರಮಾಣದಲ್ಲಿ ದೊರಕುವಂತೆ, ಸಣ್ಣ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ವ್ಯಾಪಕವಾಗಿ ಹಂಚಿಕೆ ಮಾಡಬೇಕು ಎನ್ನುವ ಅನಿಸಿಕೆಯನ್ನು ಇದು ಆಧರಿಸಿದೆ. ಸರಕಾರದ ಪಾತ್ರವು ವ್ಯಕ್ತಿಗತ ಕೊಡುಗೆಗಳನ್ನು ಸಾರ್ವಜನಿಕ ಸೇವೆಗೆ ಪರಿವರ್ತಿಸುವುದಕ್ಕೆ ಸೀಮಿತವಾಗಿರಬೇಕು ಎನ್ನುವ ನಂಬಿಕೆಯ ಆಧಾರದ ಮೆಲೆ ವಿತರಣಾ ತಾತ್ವಿಕತೆಯ ಸಂಘಟನಾ ತತ್ವವು ವಿಕೇಂದ್ರೀಕೃತವಾಗಿರುತ್ತದೆ ಇಲ್ಲವೆ ಕೇಂದ್ರೀಕರಣರಹಿತವಾಗಿರುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ ಪುನರ್ವಿತರಣಾತ್ಮಕ ಪ್ರತಿವಾದವು ವೆಚ್ಚದ ಸಂಪನ್ಮೂಲಗಳನ್ನು ಮತ್ತು ತೆರಿಗೆ ಹೊರೆಯನ್ನು ಅಗತ್ಯದ ಆಧಾರದ ಮೇಲೆ ಹಂಚಿಕೆ ಮಾಡಬಯಸುತ್ತದೆ. ಸಾರ್ವಜನಿಕ ಸಂಪನ್ಮೂಲಗಳನ್ನು ಒಟ್ಟುಗೂಡಿಸಿ ನಂತರ ಅದರ ಹೆಚ್ಚಿನ ಅಗತ್ಯವಿರುವವರಿಗೆ ಹಂಚಿಕೆ ಮಾಡಬೇಕು ಎನ್ನುವ ನಂಬಿಕೆಯನ್ನು ಆಧರಿಸಿರುವ ಪುನರ್ವಿತರಣಾ ದರ್ಶನದ ತತ್ವವು ಸಮೂಹೀಕರಣಾತ್ಮಕವಾಗಿದೆ,. ಯಾರ ಬಳಿ ಹೆಚ್ಚಾಗಿ ಇದೆಯೋ ಅವರಿಂದ ಪಡೆದು ಕಡಿಮೆ ಇದ್ದವರಿಗೆ ನೀಡುವುದು ಸರಕಾರವು ವಹಿಸಬೇಕಾದ ಸೂಕ್ತವಾದ ಪಾತ್ರವಾಗಿದೆ ಎನ್ನುವ ನಂಬಿಕೆಯನ್ನು ಆಧರಿಸಿರುವ ಪುನರ್ವಿತರಣಾ ತಾತ್ವಿಕತೆಯ ಸಂಘಟನಾ ತತ್ವವು ಅಧಿಕಾರ ಕೇಂದ್ರೀಕರಣವಾಗಿದೆ. ಈ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಸರಕಾರಿ ನಿಯೋಗಗಳನ್ನು ಸೃಷ್ಟಿಸಬೇಕಾಗುತ್ತದೆ ಎನ್ನುವುದೊಂದೆ ಅಲ್ಲದೆ "ಉಳ್ಳವರ"ನ್ನು ವಿರೋಧಿಸಲು ಅಥವಾ ಅವರ ಮನವೊಲಿಸಲು ರಾಜಕೀಯ ಅಧಿಕಾರವು ಅಗತ್ಯ ಎಂಬ ಕಾರಣದಿಂದಾಗಿ ಸಾಮಾನ್ಯವಾಗಿ ಈ ಸಂಕಲಿತ ಕಾರ್ಯಕ್ಕೆ ಅಧಿಕಾರದ ಕೇಂದ್ರೀಕರಣ ಬೇಕಾಗುತ್ತದೆ.

"ಉಳ್ಳವರು" ಮಧ್ಯಮ ವರ್ಗಕ್ಕೆ ಸೇರಿದವರು, "ಹೆಚ್ಚು-ಉಳ್ಳವರ" ವರ್ಗವು ಮದ್ಯಮವರ್ಗಕ್ಕೆ ಉದ್ಯೋಗವನ್ನು ಸೃಷ್ಟಿಸುವವರನ್ನು ಒಳಗೊಂಡಿದೆ, "ಇಲ್ಲದೆ ಇರುವವರ" ವರ್ಗವು ಉದ್ಯೋಗವನ್ನು ಪಡೆದುಕೊಂಡು ಮದ್ಯಮವರ್ಗಕ್ಕೆ ಸೇರುವ ಹಂಬಲ ಹೊಂದಿದವರನ್ನು ಒಳಗೊಂಡಿದೆ ಎನ್ನುವುದು ವಿದ್ಯಾರ್ಥಿಗಳಿಗೆ ಅರಿವಾದಾಗ ಈ ಆಯ್ಕೆಗಳ ನಿಷ್ಪಕ್ಷಪಾತತೆಯ ಬಗ್ಗೆ ದೊಡ್ಡ ಚರ್ಚೆಗಳನ್ನು ಹುಟ್ಟುಹಾಕುತ್ತದೆ. ಅಮೇರಿಕಾದ ನೀತಿಗಳು ವಿತರಣಾ ಮತ್ತು ಪುನರ್ವಿತರಣಾ ತಾತ್ವಿಕತೆಯ ಮಿಶ್ರಣವನ್ನು ಪ್ರತಿಬಿಂಬಿಸುತ್ತವೆ. ಆದರೂ, ಇತರ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ವೆಚ್ಚ ಮತ್ತು ತೆರಿಗೆಯ ನಮ್ಮ ನೀತಿಗಳು ಹೆಚ್ಚಾಗಿ ವಿತರಣಾ ಸ್ವರೂಪದ್ದಾಗಿವೆ.

ಸಮಾಜದಲ್ಲಿ ಎಷ್ಟರಮಟ್ಟಿಗೆ ದುರ್ಲಭ ಸಂಪನ್ಮೂಲಗಳ ಉತ್ತಮ ಹಂಚಿಕೆಯನ್ನು ಮಾಡಬಹುದು ಎನ್ನುವ ನಿರ್ಧಾರಕ್ಕೆ ಅಧಿಕಾರದ ಒಂದು ಆಯಾಮವೂ ಇದೆ. ರಿಪ್ಲಿ ಮತ್ತು ಫ್ರಾಂಕ್ಲಿನ್ (1987) ಪ್ರಕಾರ, ವಿತರಣಾತ್ಮಕ ನೀತಿಯನ್ನು ರೂಪಿಸುವಲ್ಲಿ ಪರಸ್ಪರ ಸಹಾಯಕ ಸಂಬಂಧ, ಸ್ಥಿರವಾದ ರಾಜಕೀಯ ಸಂಬಂಧ, ನಿರ್ಧಾರ-ಕೈಗೊಳ್ಳುವಿಕೆಯ ಅಲ್ಪ ಗೋಚರತೆ (low visibility), ಅಲ್ಪಪ್ರಮಾಣದಲ್ಲಿ ಅಧ್ಯಕ್ಷರ ಒಳಗೊಳ್ಳುವಿಕೆ, ಅಧಿಕಾರಶಾಹಿಯ ಗರಿಷ್ಠಮಟ್ಟದ ಒಳಗೊಳ್ಳುವಿಕೆ, ಸಮಗ್ರ ರೂಪದಲ್ಲಿ ಕಾಂಗ್ರೆಸ್‌ನ ಅಲ್ಪಪ್ರಮಾಣದ ಒಳಗೊಳ್ಳುವಿಕೆ, ಕಾಂಗ್ರೆಸ್ ಉಪಸಮಿತಿಗಳ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಹೆಚ್ಚಿನ ಒಳಗೊಳ್ಳುವಿಕೆಯ ಲಕ್ಷಣಗಳು ಕಂಡುಬರುತ್ತವೆ. ಇದರ ಪರಿಣಾಮವಾಗಿ ಕಾಂಗ್ರೆಸ್ ಉಪಸಮಿತಿಗಳು, ಕಾರ್ಯನಿರ್ವಾಹಕ ವಿಭಾಗಗಳು, ಮತ್ತು

ಸಣ್ಣ ಹಿತಾಸಕ್ತಿ ಗುಂಪುಗಳನ್ನು ಒಳಗೊಂಡ ವಿತರಣಾ ರಾಜಕೀಯದ ರಚನೆಯು "ಉಕ್ಕಿನ ತ್ರಿಕೋನ"ದ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಬಹಳಷ್ಟು ನಿರ್ಧಾರಗಳು ವಿವಾದಗ್ರಸ್ತವಾಗುವುದಿಲ್ಲ ಮತ್ತು ನಿಯತಕ್ರಮದಂತೆ (routine) ನಡೆಯುತ್ತವೆ.

ಇದಕ್ಕೆ ವ್ಯತಿರಿಕ್ತವಾಗಿ, ಪುನರ್ವಿತರಣಾ ನೀತಿಯು ರಾಜಕಾರಣವು ವೈಚಾರಿಕ ಮತ್ತು ವರ್ಗ ಸಂಘರ್ಷದ ರಾಜಕೀಯ ಸಂಬಂಧಗಳ, ಸ್ಥಿರ ರಾಜಕೀಯ ಸಂಬಂಧಗಳ, ನಿರ್ಧಾರ-ಕೈಗೊಳ್ಳುವಿಕೆಯ ಹೆಚ್ಚಿನ ಗೋಚರತೆ, ಅಧ್ಯಕ್ಷರ ಹೆಚ್ಚಿನ ಒಳಗೊಳ್ಳುವಿಕೆ, ಮಧ್ಯಸ್ಥ ರೂಪದಲ್ಲಿ ಅಧಿಕಾರಶಾಹಿಯ ಅಲ್ಪಪ್ರಮಾಣದ ಒಳಗೊಳ್ಳುವಿಕೆ, ಸಮಗ್ರ ರೂಪದಲ್ಲಿ ಕಾಂಗ್ರೆಸ್ಸಿನ ಗರಿಷ್ಠಮಟ್ಟದ ಒಳಗೊಳ್ಳುವಿಕೆ, ಕಾಂಗ್ರೆಸ್ಸಿನ ಉಪಸಮಿತಿಗಳ ವತಿಯಿಂದ ಮಧ್ಯಮ ರೂಪದಲ್ಲಿ ಅಲ್ಪಪ್ರಮಾಣದ ಒಳಗೊಳ್ಳುವಿಕೆ, ಹಿತಾಸಕ್ತಿ ಗುಂಪುಗಳ ಸಮೂಹವನ್ನು ಪ್ರತಿನಿಧಿಸುವ "ಉನ್ನತ ಸಂಘಟನೆಗಳ" ಹೆಚ್ಚಿನ ಒಳಗೊಳ್ಳುವಿಕೆಯ ಲಕ್ಷಣಗಳನ್ನು ಹೊಂದಿರುತ್ತದೆ. ಉನ್ನತ ಸಂಘಟನೆಗಳೊಂದಿಗೆ ಸಂವಹಿಸುವ ಕಾರ್ಯಾಂಗ ಶಾಖೆಯು ಪ್ರಮುಖ ನಿರ್ಧಾರವನ್ನು ಮಾಡುವುದರಿಂದ ಉಪಸರಕಾರಗಳ ಮಹತ್ವ ಅತ್ಯಂತ ಕಡಿಮೆ ಎನ್ನುವುದು ಇದರರ್ಥ. ಪಕ್ಷಪಾತಪೂರ್ಣ ಮತ್ತು ವೈಚಾರಿಕ ಭಿನ್ನತೆಯನ್ನು ಆಧರಿಸಿ, ಕಾಂಗ್ರೆಸ್ ಮತ್ತು ಅಧಿಕಾರಶಾಹಿಯ ನಡುವಿನ ಸಂಘರ್ಷದ ಪ್ರಮಾಣವು ಸಂಭವತಃ ಹೆಚ್ಚಿನ ಮಟ್ಟದಲ್ಲಿದೆ.

ಚಟುವಟಿಕೆ

ಸುದ್ದಿಪ್ರಕಟಣೆಯ ಹಲಗೆ(bulletin board)ಯನ್ನು ವಿನ್ಯಾಸಗೊಳಿಸುವುದು

ದುರ್ಲಭ ಸಂಪನ್ಮೂಲಗಳ ಹಂಚಿಕೆಯನ್ನು ಒಳಗೊಂಡಿರುವ ಪ್ರಸ್ತುತದ ಚರ್ಚಾಂಶವೊಂದನ್ನು ಆರಿಸಿ. ಈ ಚರ್ಚಾಂಶದಲ್ಲಿ ಅಧಿಕಾರ ಮತ್ತು ನ್ಯಾಯದ ಪರಿಕಲ್ಪನೆಗಳು ಹೇಗೆ ಪ್ರತಿಬಿಂಬಿತವಾಗಿವೆ ಎನ್ನುವುದನ್ನು ವಿದ್ಯಾರ್ಥಿಗಳಿಗೆ ತೋರಿಸುವ ತರಗತಿಯ ಸುದ್ದಿಪ್ರಕಟಣೆ ಹಲಗೆಯ ಪ್ರದರ್ಶನವೊಂದನ್ನು ವಿನ್ಯಾಸಗೊಳಿಸಿ. ಸುದ್ದಿಪ್ರಕಟನೆಯ ಹಲಗೆಯು ನೀತಿಯ ಆಯ್ಕೆಗಳನ್ನು (ಅವು ವಿತರಣಾತ್ಮಕವೆ ಅಥವಾ ಪುನರ್ವಿತರಣಾತ್ಮಕವೆ ಎನ್ನುವುದನ್ನು ಸೂಚಿಸುವ) ಮತ್ತು ನೀತಿಯನ್ನು ರೂಪಿಸುವಲ್ಲಿ ಯಾರು ತೊಡಗಿಸಿಕೊಂಡಿದ್ದಾರೆಂಬುದನ್ನು ತೋರಿಸಬೇಕು.

ಸ್ಥಾಯೀ ಚರ್ಚಾಂಶಗಳು: ವರ್ತನೆಯ ನಿಯಂತ್ರಣ

ಸರಕಾರಕ್ಕೆ ಮನುಷ್ಯರು ಒಂದು ನಿರ್ದಿಷ್ಟ ರೀತಿಯಲ್ಲಿ ವರ್ತಿಸುವಂತೆ ಅವರನ್ನು ಪ್ರಚೋದಿಸಲು ಅಥವಾ ಒತ್ತಾಯಿಸಲು ಸಾರ್ವಜನಿಕ ಸಂಪನ್ಮೂಲಗಳಿಗೆ ನಿರ್ದೇಶಿಸುವ ನ್ಯಾಯಸಮ್ಮತವಾದ ಅಧಿಕಾರವಿರುವುದರಿಂದ ಮನುಷ್ಯರ ವರ್ತನೆಯ ನಿಯಂತ್ರಣವು ಸರಕಾರದ ಪ್ರಮುಖ ಕಾರ್ಯಗಳಲ್ಲಿ ಒಂದೆನಿಸಿದೆ. ಕೆಲವು ವರ್ತನೆಗಳನ್ನು ಕೆಲವು ಅಮಿಷಗಳನ್ನೊಡ್ಡುವ ಮೂಲಕ ಪ್ರಚೋದಿಸುವ ಅಥವಾ ಕೆಲವು ವರ್ತನೆಗಳನ್ನು ಅಪರಾಧಿಕ ದಂಡನೆಗಳೆಂದು ಪರಿಗಣಿಸಿ ನಿಯಂತ್ರಿಸುವ ಮೂಲಕ ಸರಕಾರದ ಹಂಚುವಿಕೆಯ ಕಾರ್ಯವನ್ನು ವರ್ತನೆಯನ್ನು ನಿಯಂತ್ರಿಸುವ ಸಾಧನವಾಗಿ ಬಳಸಬಹುದು. ಉದಾಹರಣೆಗೆ, ಆಸ್ತಿ ತೆರಿಗೆಗಳಿಗೆ ಮತ್ತು ಅಡಮಾನ ಪಾವತಿಗಳ ಬಡ್ಡಿಗೆ ತೆರಿಗೆಯನ್ನು ಕಡಿತ ಮಾಡುವುದು ಮನೆಯ ಒಡೆತನಕ್ಕೆ ಪ್ರೋತ್ಸಾಹ ನೀಡುತ್ತದೆ. ಅನೇಕ ರಾಜಕೀಯ ಸಿದ್ಧಾಂತಿಗಳು ಇದನ್ನು ಪ್ರಜಾಪ್ರಭುತ್ವವನ್ನು ಸ್ಥಿರೀಕರಿಸುವ ದೊಡ್ಡ ಶಕ್ತಿ ಎಂದು ಪರಿಗಣಿಸುತ್ತಾರೆ. ಅದೇ

ಸಮಯದಲ್ಲಿ, ಅಧಿಕಾರದ ಪರಿಭಾಷೆಯನ್ನು ಬಳಸಿ ಹೇಳುವುದಾದರೆ, ಈ ನಿರ್ಧಾರವು ಮನೆಯ ಒಡೆತನವನ್ನು ಹೊಂದಿರುವ ಮಧ್ಯಮ ವರ್ಗದ ರಾಜಕೀಯ ಆಗ್ರಹಗಳನ್ನು ತೃಪ್ತಿಪಡಿಸುವ ಪ್ರಯತ್ನ ಎಂದು ಹೇಳಬಹುದು.

ನಿಯಂತ್ರಣವು ವ್ಯಕ್ತಿ ಮತ್ತು ನಾಗರಿಕ ಸಮಾಜದ ನಡುವಿನ ಸಂಬಂಧದ ಕೇಂದ್ರ ಬಿಂದುವಾಗಿದೆ. ಕೆಲವು ರಾಜಕೀಯ ಸಂಸ್ಕೃತಿಗಳು ಮೂಲಭೂತವಾಗಿ ಮಾನವನ ಸ್ವಭಾವದ ಮೂಲಭೂತ ಅಪನಂಬಿಕೆಯನ್ನು ಆಧರಿಸಿವೆ. ಆ ಕಾರಣದಿಂದಾಗಿ ಅವು ಮಾನವನ ನಿರ್ಧಾರಸ್ವಾತಂತ್ರ್ಯದ ಪರಿಮಿತಿಗಳನ್ನು ಕಿರಿದುಗೊಳಿಸಲು ಸರಕಾರಿ ನಿಯಮಗಳನ್ನು ಸಾಧನವಾಗಿ ಬಳಸುತ್ತವೆ. ಇತರರು ಸರಕಾರ ಮತ್ತು ವರ್ತನೆಯ ನಿಯಂತ್ರಣದ ನಿಟ್ಟಿನಲ್ಲಿ ನಿಯಮಗಳ ಬಳಕೆಯ ಬಗ್ಗೆಯೇ ತಮ್ಮ ಅಪನಂಬಿಕೆಯನ್ನು ಪ್ರಕಟಪಡಿಸುತ್ತಾರೆ. ಪಾರಂಪರಿಕವಾಗಿ ಅಮೇರಿಕಾ ರಾಜಕೀಯ ಸಂಸ್ಕೃತಿಯು ಎರಡನೆ ಗುಂಪಿಗೆ ಸೇರಿದೆ.

ಅಮೇರಿಕಾದ ವ್ಯವಸ್ಥೆಯಲ್ಲಿ ಸರಕಾರೀ ನಿಯಾಮಕ ಅಧಿಕಾರದ ಕಾನೂನೀ ಮೂಲವು ಪೊಲೀಸ್ ಅಧಿಕಾರವಾಗಿರುತ್ತದೆ. ಸಾರ್ವಜನಿಕ ಆರೋಗ್ಯ, ಭದ್ರತೆ, ಮತ್ತು ಜನರ ನೈತಿಕತೆಯ ರಕ್ಷಣೆ ಮತ್ತು ಉನ್ನತಿಯು ಈ ಅಧಿಕಾರದ ಉದ್ದೇಶವಾಗಿರುತ್ತದೆ. ಸಂವಿಧಾನಾತ್ಮಕವಾಗಿ ಮತ್ತು ಐತಿಹಾಸಿಕವಾಗಿ, ಪೊಲೀಸ್ ಅಧಿಕಾರವು ಪ್ರಾಥಮಿಕವಾಗಿ ರಾಜ್ಯದ ಅಧಿಕಾರವಾಗಿತ್ತು. ಕಾಲಕ್ರಮೇಣ, ಸಂಯುಕ್ತ ಸರಕಾರವು ಪೊಲೀಸ್ ಅಧಿಕಾರವನ್ನು ಗಳಿಸಿತು, ಆದರೂ, ವರ್ತನೆಯ ನಿಯಂತ್ರಣ, ಕಾನೂನುಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊತ್ತಿರುವ ಆಡಳಿತಾತ್ಮಕ ನಿಯೋಗಗಳನ್ನು ಕುರಿತಂತೆ ಶಂಕಿತ ಕಾನೂನುವಿರೋಧಿಗಳನ್ನು ವಿಚಾರಿಸುವ ಮತ್ತು ಶಿಕ್ಷಿಸುವ ನ್ಯಾಯಲಯಗಳಿಗೆ ಸಂಬಂಧಪಟ್ಟ ಕಾನೂನಿನ ಸಿಂಹಪಾಲು ರಾಜ್ಯಗಳಿಗೆ ಸೇರಿದೆ (ಅಪರಾಧ ಕಾನೂನಿನಿಂದ ಹಿಡಿದು ಕೌಟುಂಬಿಕ ಕಾನೂನಿನವರೆಗೆ).

ಪ್ರತಿ ವರ್ಷವೂ, ಸಾವಿರಾರು ವಶೀಲಿದಾರರು ಮತ್ತು ಇತರ ನೀತಿ ವಕ್ತಾರರು ಕಾನೂನನ್ನು ಅನುಮೋದಿಸುವಂತೆ ಇಲ್ಲವೆ ಅದನ್ನು ತಡೆಹಿಡಿಯುವಂತೆ ರಾಜ್ಯದ ಶಾಸಕಾಂಗಗಳನ್ನು ಮತ್ತು ಕಾಂಗ್ರೆಸ್ಸನ್ನು ಮನವೊಲಿಸುವ ಪ್ರಯತ್ನವನ್ನು ಮಾಡುತ್ತಿರುತ್ತಾರೆ. ಪರಸ್ಪರ ಸ್ಪರ್ಧಿಸುವ ಬಹಳಷ್ಟು ಹಿತಾಸಕ್ತಿಗಳು, ವಿಶೇಷವಾಗಿ ಇತ್ಯರ್ಥವಾಗಿಲ್ಲದ ಶಾಸನವು ವಿವಾದಗ್ರಸ್ತವಾಗಿರದ ಮತ್ತು ವಿತರಣಾತ್ಮಕ ಸ್ವರೂಪದ್ದಾಗಿರುವ ಸಂದರ್ಭದಲ್ಲಿ "ಉಕ್ಕಿನ ತ್ರಿಕೋನ"ಗಳಾಗಿ ರಚಿತವಾಗಿರುವುದನ್ನು, ಈ ಹಿಂದಿನ ವಿಭಾಗದಲ್ಲಿ ನಾವು ನೋಡಿರುವೆವು. ನಿಯಂತ್ರಣಾ ನೀತಿಯ ರಾಜಕೀಯವನ್ನು ಮತ್ತು ವಿತರಣಾತ್ಮಕ ನೀತಿಗೆ ಹೀಗೆ ಹೋಲಿಕೆ ಮಾಡಬಹುದು: ಧನಾತ್ಮಕ ಅಥವಾ ರಕ್ಷಣಾತ್ಮಕ ನಿಯಂತ್ರಣಗಳು (ವೃತ್ತಿಗಳನ್ನು ನಿಯಂತ್ರಿಸುವಂತಹ) ಉಪಸರಕಾರ-ಪ್ರಾಧಾನ್ಯ ರಾಜಕೀಯದ ವಿತರಣಾತ್ಮಕ ಮಾದರಿಯನ್ನು ಅನುಸರಿಸುವಂತೆ ಕಾಣುತ್ತವೆ, ಆದರೆ ಋಣಾತ್ಮಕ ಅಥವಾ ಸಾಮಾಜಿಕ ನಿಯಂತ್ರಣಗಳು (ಮಹಿಳೆಯ ಗರ್ಭಪಾತದ ಹಕ್ಕನ್ನು ಮಿತಿಗೊಳಿಸುವಂತಹ) ಹೆಚ್ಚು ಪರಿಣಾಮಗಳುಳ್ಳ, ನೀತಿಯ ಭಿನ್ನಾಭಿಪ್ರಾಯಗಳು ತೀವ್ರಸ್ವರೂಪದ್ದಾಗಿರುವ, ಪಾತ್ರದಾರಿಗಳು ಹೆಚ್ಚು ಪ್ರಭಾವಶಾಲಿಗಳಾಗಿರುವ ಪುನರ್ವಿತರಣಾ ಮಾದರಿಯ ಅನುಸರಣೆಯಂತೆ ಕಾಣುತ್ತವೆ.

ನಿಯಂತ್ರಣವು ಧನಾತ್ಮಕವಿರಲಿ ಇಲ್ಲವೆ ಋಣಾತ್ಮಕವಿರಲಿ, ರಾಜಕೀಯ ಸಂಸ್ಕೃತಿ ಮತ್ತು ಶಾಸನೀಯ ರಾಜಕೀಯ ಮತ್ತು ಹೊಂದಾಣಿಕೆಯು ಹೆಚ್ಚು ಫಲಿತಗಳನ್ನು ಉಂಟುಮಾಡುತ್ತವೆ. ತಮ್ಮ ಕ್ಷೇತ್ರಕ್ಕೆ ವಾಪಸ್ಸಾದ ವಾದಿ-ಪ್ರತಿವಾದಿಗಳು ತಾವು ಗೆದ್ದ ಅರ್ಧದಷ್ಟಕ್ಕೆ ಸಂಭ್ರಮಿಸಬಹುದು ಇಲ್ಲವೆ ಅರ್ಧ ಸೋತದ್ದಕ್ಕೆ ದುಃಖಿಸಬಹುದು, ಆದರೆ ಮತ್ತಷ್ಟು ಹೆಚ್ಚಿನದಕ್ಕಾಗಿ ಶಾಸನ ಸಭೆಯ ಮುಂದಿನ ಅಧಿವೇಶನಕ್ಕೆ ಅವರು ಖಂಡಿತಾ ಬರುತ್ತಾರೆ.

ಹಾಗಾಗಿಯೆ, ಕಾಲ ಕಳೆದಂತೆ, ಬಹಳಷ್ಟು ಮಸೂದೆಗಳು ಹೊಸದಾಗಿರದೆ ಈಗಿರುವ ಶಾಸನಗಳ ತಿದ್ದುಪಡಿಗಳಾಗಿರುತ್ತವೆ.

ಸರಕಾರದ ನಿಯಂತ್ರಣಗಳ ಮೇಲೆ ಪರಿಣಾಮ ಬೀರುವ ನಿರ್ಧಾರಗಳನ್ನು ಹೆಚ್ಚು ಹೆಚ್ಚಾಗಿ ನ್ಯಾಯಾಲಯದಲ್ಲಿ ಮತ್ತು ಶಾಸಕಾಂಗದ ಕೋಣೆಗಳಲ್ಲಿ ತೆಗೆದುಕೊಳ್ಳಲಾಗುತ್ತದೆ. "ಸಾರ್ವಜನಿಕ ಕಾನೂನಿನ ದಾವೆ"ಯ ಕ್ಷೇತ್ರವು ಹೆಚ್ಚಾಗಿ ಖಾಸಗಿ ಪಕ್ಷಗಳು ಸರಕಾರಿ ನಿಯಂತ್ರಣದ ಕಾನೂನಾರ್ಹತೆಯನ್ನು ಪ್ರಶ್ನಿಸಿರುವ ಮೊಕದ್ದಮೆಗಳಿಂದ ಕೂಡಿರುತ್ತದೆ. ಇಂತಹ ಕ್ರಿಯೆಗಳು, ಹೆತ್ತವರು ಮಾನಸಿಕವಾಗಿ ಅನಾರೋಗ್ಯವಾಗಿರುವ ತಮ್ಮ ಮಗುವಿಗೆ ಶಾಲೆಯಲ್ಲಿ ಪ್ರವೇಶವನ್ನು ಕೋರುವುದರಿಂದ ಹಿಡಿದು ತಮ್ಮ ಕಲಾಕೃತಿಯ ಮೇಚರ್ಚಾಲೆ ಹೇರಿರುವ ನಿಷೇಧವನ್ನು ಹಿಂತೆಗೆಯಬೇಕೆಂಬ ಕಲಾಕಾರನ ಕೋರಿಕೆಯವರೆಗೆ, ಸರಕಾರದ ನಿಯಂತ್ರಣದ ಎಲ್ಲ ವಲಯಗಳನ್ನು ಒಳಗೊಂಡಿರುತ್ತದೆ.

ಚಟುವಟಿಕೆ

ವರ್ತನೆಯ ನಿಯಂತ್ರಣವನ್ನು ಕುರಿತು ಚರ್ಚಿಸುವುದು

ಈ ಕೆಳಗೆ ಕೊಟ್ಟಿರುವ ಚರ್ಚಾಂಶಗಳಲ್ಲಿ ಒಂದನ್ನು ಅಥವಾ ಪ್ರಸ್ತುತದಲ್ಲಿ ಸುದ್ದಿಯಲ್ಲಿರುವ ಚರ್ಚಾಂಶವನ್ನು ಆರಿಸಿಕೊಂಡು ತರಗತಿಯಲ್ಲಿ ಚರ್ಚೆಯನ್ನು ನಡೆಸಿ.

- ಶಾಲಾ ಜಿಲ್ಲಾ ಸೌಲಭ್ಯಗಳನ್ನು ಇತರ ಸಮುದಾಯದವರು ಉಪಯೋಗಿಸಿಕೊಳ್ಳುತ್ತಿರುವಾಗ ಕ್ರಿಸ್ತನ ಕ್ಯಾಂಪಸ್ ಕ್ರುಸೇಡ್ ಮತ್ತು ಅದರ ಉಪಾಂಗವಾದ ಸ್ಟ್ಯೂಡಂಟ್ ವೆಂಚರ್‌ಗೆ (ಒಂದು ಬಾಹ್ಯ ಸಂಸ್ಥೆ) ಪೆನ್ಸಿಲ್ವೇನಿಯಾದ ಸೆಂಟಿನಿಅಲ್ ಶಾಲಾ ಜಿಲ್ಲೆಯಲ್ಲಿರುವ ವಿಲಿಯಂ ಟೆನೆಂಟ್ ಪ್ರೌಢಶಾಲೆಯು ತನ್ನ ಸಭಾಂಗಣವನ್ನು ಕ್ಯಾಂಪಸ್ ಕ್ರುಸೇಡ್ ಫಾರ್ ಕ್ರಿಸ್ಟ್ ಮತ್ತು ಅದರ ಸಹಾಯಕ ಸಂಸ್ಥೆಗಳಿಗೆ ಗುತ್ತಿಗೆ ನೀಡುವುದನ್ನು ನಿರಾಕರಿಸುವ ಹಕ್ಕನ್ನು ಹೊಂದಿದೆಯೆ?

- ಅಶ್ಲೀಲವೆಂಬ ಕಾರಣಕ್ಕೆ ಸಾರ್ವಜನಿಕ ಹಣದ ಮಂಜೂರಾತಿಯನ್ನು ತಡೆಹಿಡಿಯುವ ಅಥವಾ ಧನಸಹಾಯವನ್ನು ಪಡೆಯುವವರು ತಾವು "ಅಶ್ಲೀಲ"ವಾಗಿರುವ ಕೆಲಸವನ್ನು ಮಾಡುವುದಿಲ್ಲ ಎಂದು ಬರವಣಿಗೆಯಲ್ಲಿ ಬರೆದುಕೊಡಬೇಕು ಎಂಬ ಅವಶ್ಯಕತೆಯನ್ನು ಮುಂದೊಡ್ಡುವ ಅಧಿಕಾರ ಫೆಡರಲ್ ನಿಯೋಗಕ್ಕಿದೆಯೆ?

- ಆನುವಂಶಿಕ(genetic) ತಂದೆ ಅಥವಾ ತಾಯಿ ಮತ್ತು ಅವರ ಅಂಡಾಶಯವನ್ನು ಧಾರಣಮಾಡಿದ ಜೈವಿಕ (biological) ತಂದೆ ಅಥವಾ ತಾಯಿಯು ಪಾಲನೆಗಾಗಿ ಹೂಡಿದ ದಾವೆಗಳನ್ನು(custody claims) ನ್ಯಾಯಾಲಯಗಳು ಹೇಗೆ ಬಗೆಹರಿಸಬೇಕು?

- ಪ್ರಾಣಿಗಳ ಹಕ್ಕುಗಳ ಹೆಸರಿನಲ್ಲಿ ವೈದ್ಯಕೀಯ ಕಾಲೇಜುಗಳಲ್ಲಿ ಜೀವಂತ ಪ್ರಾಣಿಗಳ ಸಂಶೋಧನೆಯನ್ನು ನಿಷೇಧಿಸುವ ಅಧಿಕಾರವನ್ನು ರಾಜ್ಯ ಸರಕಾರವು ಹೊಂದಿದೆಯೆ?

•	ಶಾಲಾ ವಲಯದ ಒಳಗೆ ಅಂದರೆ ಉದಾಹರಣೆಗೆ ಶಾಲೆಯಿರುವ ಜಾಗದಿಂದ 1,000 ಅಡಿಗಳ ವಲಯದೊಳಗೆ ಮಾದಕವಸ್ತುಗಳನ್ನು ಮಾರುವವರಿಗೆ ಹೆಚ್ಚಿನ ಶಿಕ್ಷೆಯನ್ನು ಕೊಡುವ ಹಾಗೆ "ಮಾದಕ ದ್ರವ್ಯ ಮುಕ್ತ" ವಲಯವನ್ನು ಸೃಷ್ಟಿಸುವ ಸುಗ್ರೀವಾಜ್ಞೆಯನ್ನು ಹೊರಡಿಸುವ ಅಧಿಕಾರವನ್ನು ನಗರ ಸಮಿತಿಯು ಹೊಂದಿದೆಯೆ?

•	ತಮ್ಮ ನೆರೆಯಲ್ಲಿ ಮಾನಸಿಕ ಊನತೆಯ ವ್ಯಕ್ತಿಗಳ ಗೃಹ ಸಮುಚ್ಚಯವು ಇರಬೇಕೆ ಬೇಡವೆ ಎನ್ನುವುದನ್ನು ನಿರ್ಧರಿಸುವಲ್ಲಿ ಅಲ್ಲಿಯ ನಿವಾಸಿಗಳ ಸಮುದಾಯದ ಪಾತ್ರವೇನಾಗಿರಬೇಕು?

ಅಸ್ತಿತ್ವದಲ್ಲಿರುವ ಚರ್ಚಾಂಶಗಳು: ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡುವುದು

ಅಮೇರಿಕಾದ ರಾಜಕೀಯ ನಡೆಯುವುದು ಜಾಗತಿಕ ಪರಿಸ್ಥಿತಿಯಲ್ಲಿ. ಹಲವು ನೀತಿ ಕ್ಷೇತ್ರಗಳಲ್ಲಿ, ಆ ಪರಿಸ್ಥಿತಿಯು ಪ್ರಮುಖವಾದ ಅಂಶವಾಗಿರುವುದಿಲ್ಲ. ಇನ್ನು ಕೆಲವು ಕಡೆಗಳಲ್ಲಿ, (1) ಆಂತರಿಕ ರಾಜಕೀಯದ ಜಾಗತೀಕರಣದ ಅಥವಾ (2) ಅಂತಾರಾಷ್ಟ್ರೀಯ ರಾಜಕೀಯವನ್ನು ಸ್ಥಳೀಕರಿಸುವುದರ ಪರಿಣಾಮವಾಗಿ ಅಂತಾರಾಷ್ಟ್ರೀಯ ಪರಿಸರವು ಮಹತ್ವವಾದ ರಾಜಕೀಯ ಅಂಶಗಳನ್ನು ಹುಟ್ಟುಹಾಕುತ್ತದೆ. ಮತ್ತೆ ಉಳಿದ ಕಡೆಗಳಲ್ಲಿ ಚಾಲ್ತಿಯಲ್ಲಿರುವ ವಿದೇಶಾಂಗ ನೀತಿಯ ಮತ್ತು ರಾಷ್ಟ್ರ ರಕ್ಷಣೆಯ ಚರ್ಚಾಂಶಗಳ ನಿರ್ವಹಣೆಯನ್ನು ಅಂತಾರಾಷ್ಟ್ರೀಯ ವಲಯದಲ್ಲಿ ನಡೆಸಲಾಗುತ್ತದೆ. ಅಂತಹ ಸಂದರ್ಭದಲ್ಲಿ, ಅಮೇರಿಕಾದ ಸಾರ್ವಜನಿಕ ಅಭಿಪ್ರಾಯಗಳಿಗೆ ಮತ್ತು ಇತರ ಆಂತರಿಕ ರಾಜಕೀಯ ಶಕ್ತಿಗಳಿಗೆ ಅಮೇರಿಕಾದ ರಾಜಕೀಯ ಪಾತ್ರದಾರಿಗಳು ಸಂವೇದನಾಶೀಲರಾಗಿರಬೇಕಾಗುತ್ತದೆ. ವಿಭಿನ್ನ ಸ್ಥಳೀಯ ಅಂಶಗಳು ವಿದೇಶಾಂಗ ನೀತಿಯನ್ನು ಪ್ರಭಾವಿಸುತ್ತವೆ ಹಾಗೂ ಪ್ರಭಾವಿಸಲ್ಪಡುತ್ತವೆ. ಈ ಕೆಳಗಿನ ಉದಾಹರಣೆಗಳನ್ನು ಪರಿಗಣಿಸಿ.

ಒಂದು ಪ್ರಮುಖ ಅಂಶವಾದ ಸಾರ್ವಜನಿಕ ಅಭಿಪ್ರಾಯವು ಆವರ್ತಿತವಾಗುತ್ತಿರುತ್ತದೆ. ಉದಾಹರಣೆಗೆ, ಒಂದನೆ ಮಹಾಯುದ್ಧದ ನಂತರ ರಾಜತಾಂತ್ರಿಕ ಕ್ಷೇತ್ರದಲ್ಲಾದ ಅಪಜಯದ ಪರಿಣಾಮವಾಗಿ 1920ರಲ್ಲಿ ಸಾರ್ವಜನಿಕ ಅಭಿಪ್ರಾಯವು ಹಸ್ತಕ್ಷೇಪದ ವಿರುದ್ದವಾಗಿತ್ತು, ಮನವೊಲಿಕೆ ಮತ್ತು ಪರ್ಲ್ ಹಾರ್ಬರ್‌ನ ರಾಜತಾಂತ್ರಿಕತೆಯ ಪರಾಜಯದ ನಂತರ ಈ ಅಭಿಪ್ರಾಯವು ಹಸ್ತಕ್ಷೇಪದ ಪರವಾಗಿದ್ದು, ವಿಯಟ್ನಾಮ್‌ನ ಯಾರೂ ಗೆಲ್ಲಲಾಗದ ಪರಿಸ್ಥಿತಿಯನ್ನು ಎದುರಿಸುವಾಗ ಹಸ್ತಕ್ಷೇಪದ ವಿರುದ್ಧವಾಗಿತ್ತು. ತೈಲ ಮತ್ತು ಘನತೆಗೆ ಆಪತ್ತು ಬಂದಾಗ ಇದು, ಮಧ್ಯಪ್ರಾಚ್ಯದಲ್ಲಿ ಹಸ್ತಕ್ಷೇಪದ ಪರವಾಗಿತ್ತು. ಈ ಆವರ್ತನೆಯ ವ್ಯಾಪ್ತಿಯಲ್ಲಿ ಜನಸಾಮಾನ್ಯರ ಮತ್ತು ಅಭಿಪ್ರಾಯವನ್ನು ರೂಪಿಸುವವರ ನಡುವೆ ವ್ಯಾಪಕವಾದ ಭಿನ್ನತೆಗಳಿರುವ ಸಾಧ್ಯತೆ ಇದೆ.

ವಿದೇಶಾಂಗ ನೀತಿಯು ಬಹಳ ದೊಡ್ಡದಾದ, ಅಭಿವ್ಯಕ್ತಿ ಸಾಮರ್ಥ್ಯವುಳ್ಳ, ಅಥವಾ ಅತ್ಯಂತ ಪ್ರಭಾವಿಯಾಗುವ ಸಂಭಾವ್ಯತೆಯುಳ್ಳ ಜನಾಂಗೀಯ ಗುಂಪಿನ ಮೂಲ ದೇಶದತ್ತ ನಿರ್ದೇಶಿತವಾಗಿದ್ದಾಗ ಜನಾಂಗೀಯ ವಶೀಲಿಗಳು ಪ್ರಮುಖ ರಾಜಕೀಯ ಅಂಶವಾಗಬಹುದು.

ಹಲವು ವರ್ಷಗಳ ಕಾಲ ಕಮ್ಯೂನಿಸ್ಟ್ ಚೀನಾಕ್ಕೆ ಮಾನ್ಯತೆ ನೀಡದಂತೆ ತೈವಾನ್ ವಶೀಲಿಗಾರರ ಗುಂಪು ಪ್ರಭಾವ ಬೀರಿತ್ತು. ಚೀನಾದ ಮುಖ್ಯ ಪ್ರದೇಶಗಳಿಂದ ಹೊಸ ವಲಸೆಗಾರರು ಬರಲು ಪ್ರಾರಂಭಿಸಿದಂತೆ ಚೀನಾ-ಅಮೇರಿಕಾ ಸಮುದಾಯವು ಹೆಚ್ಚು ವೈವಿಧ್ಯಮಯವಾಯಿತು ಮತ್ತು ತೈವಾನ್ ವಶೀಲಿಗಾರರ ಗುಂಪು ತನ್ನ ಶಕ್ತಿಯನ್ನು ಕಳೆದುಕೊಂಡಿತು. ಮತ್ತೊಂದು ಉದಾಹರಣೆಯನ್ನು ಕೊಡುವುದಾದರೆ, ಇಸ್ರೇಲಿ ವಶೀಲಿ ಗುಂಪು ಅಮೇರಿಕಾದ

ಯಹೂದಿಗಳ ಸಮುದಾಯದ ಸಂಪನ್ಮೂಲಗಳನ್ನು ಬಳಸಿಕೊಳ್ಳುತ್ತದೆ, ಮತ್ತು ಇತ್ತೀಚೆಗೆ ಅರಬ್‌ನ ವಶೀಲಿ ಗುಂಪು ಅರಬ್-ಅಮೇರಿಕಾ ಸಮುದಾಯದ ವ್ಯಾಪ್ತಿಯಲ್ಲಿನ ಸಂಪನ್ಮೂಲಗಳನ್ನು ಒಳಗೊಳ್ಳುತ್ತಿದೆ.

ಬಹಳಷ್ಟು ವಿದೇಶಾಂಗ ನೀತಿಯ ಸಂದರ್ಭಗಳಲ್ಲಿ ಕಾಂಗ್ರೆಸ್ ಹಾಗೂ ಅಧ್ಯಕ್ಷರ ನಡುವಿನ ಸಂಬಂಧವು ಅತ್ಯಂತ ಪ್ರಮುಖವಾದುದು. ಏಕೆಂದರೆ, ಅಧ್ಯಕ್ಷನ ನಾಯಕತ್ವದ ಬಗ್ಗೆ ಕಾಂಗ್ರೆಸ್‌ಗೆ ನಿರೀಕ್ಷೆಯಿರುತ್ತದೆ ಮತ್ತು ಅಧ್ಯಕ್ಷನು ಕಾಂಗ್ರೆಸ್‌ನ ಸ್ವೀಕೃತಿಯನ್ನು ಅವಲಂಬಿಸಿರುತ್ತಾನೆ. ಅದು, ಒಪ್ಪಂದಗಳಿಗೆ, ಧನ ವಿನಿಯೋಜನೆ, ಅಥವಾ ಕಾರ್ಯನಿರ್ವಹಣೆಯ ಅಧಿಕೃತಗೊಳಿಸುವಿಕೆಗೆ ಸೆನೆಟ್ಟಿನ ಅನುಮೋದನೆಯ ರೂಪದಲ್ಲಿರಬಹುದು. ಅಧ್ಯಕ್ಷ ವುಡ್ರೊ ವಿಲ್ಸನ್‌ರವರ ರಾಷ್ಟ್ರಗಳ ಒಕ್ಕೂಟಕ್ಕೆ ಸೆನೆಟ್, ವಿರೋಧವನ್ನು ವ್ಯಕ್ತಪಡಿಸಿದ ಉದಾಹರಣೆಯಂತಹ ಕಾಂಗ್ರೆಸ್ ಮತ್ತು ಅಧ್ಯಕ್ಷರ ನಡುವಿನ ಬಹಿರಂಗ ಶತೃತ್ವವು ಅತ್ಯಂತ ವಿಭಜನಕಾರಿ ಮತ್ತು ದುರ್ಬಲಗೊಳಿಸುವಂತಹದಾಗಿರುತ್ತದೆ. ಎಡ್ವರ್ಡ್ ಎಸ್. ಕಾರ್ವಿನ್ (1940) ಹೇಳುವಂತೆ ವಿದೇಶಾಂಗ ನೀತಿಯಲ್ಲಿ ಕಾಂಗ್ರೆಸ್ ಮತ್ತು ಅಧ್ಯಕ್ಷರ ಸಹಭಾಜಿತ(shared) ಜವಾಬ್ದಾರಿಯು "ಸಂಘರ್ಷಕ್ಕೆ ಆಹ್ವಾನ"ವಾಗಿರುತ್ತದೆ.

ರಾಜ್ಯ ಹಾಗೂ ಪ್ರಾದೇಶಿಕ ರಾಜಕೀಯವು ಹಲವು ವಿಧಗಳಲ್ಲಿ ಅಂತಾರಾಷ್ಟ್ರೀಯ ರಾಜಕೀಯದ ಭಾಗವಾಗಿರುತ್ತದೆ: ಪ್ರಾದೇಶಿಕ ಸಮುದಾಯಗಳು ಅಂತಾರಾಷ್ಟ್ರೀಯ ಘಟನೆಗಳನ್ನು ಸೃಷ್ಟಿಸುವ ಸಾಧ್ಯತೆ ಇದೆ, ಗಡಿಗಳನ್ನುಳ್ಳ ರಾಜ್ಯಗಳು ಸಹಭಾಜಿತ ಸಮಸ್ಯೆಗಳೊಂದಿಗೆ ಪರಸ್ಪರ ವ್ಯವಹರಿಸಬೇಕಾಗುತ್ತದೆ. ರಾಜ್ಯ ಹಾಗೂ ಸ್ಥಳೀಯ ಅಧಿಕಾರಿಗಳು ವಿದೇಶದಲ್ಲಿ ತಮ್ಮ ಮಾರುಕಟ್ಟೆಗಳನ್ನು ಬೆಳೆಸುತ್ತಾರೆ, ಮತ್ತು ರಾಜ್ಯಗಳು ಮತ್ತು ಸ್ಥಳೀಯ ಕ್ಷೇತ್ರಗಳು ತಮ್ಮ ಪ್ರಬಲ ರಕ್ಷಣೆಗೆ ರಕ್ಷಣಾ ಡಾಲರ್‌ಗಳ ವಶೀಲಿಯನ್ನು ಅವಲಂಬಿಸಿರುತ್ತವೆ. ಉದಾಹರಣೆಗೆ, ನ್ಯೂಯಾರ್ಕ್ ರಾಜ್ಯ, ಕ್ಯುಬೆಕ್, ಮತ್ತು ಒಂಟಾರಿಯೊ ಜಲವಿದ್ಯುತ್ ಶಕ್ತಿಯನ್ನು ನಿರ್ವಹಿಸುವ ಒಪ್ಪಂದಗಳನ್ನು ಮಾಡಿಕೊಂಡಿವೆ. ನ್ಯೂಯಾರ್ಕ್ ರಾಜ್ಯ ಮತ್ತು ಪೋಲೆಂಡ್ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ವಿನಿಮಯ ಕಾರ್ಯಕ್ರಮಗಳ ಒಪ್ಪಂದ ಮಾಡಿಕೊಂಡಿವೆ. ನ್ಯೂಯಾರ್ಕ್ ರಾಜ್ಯದ ನ್ಯಾಯಾಲಯಗಳು ಅಮೇರಿಕಾ ಕಪ್‌ನ ಓಟದ ಫಲಿತಾಂಶದಿಂದ ಹಿಡಿದು ಇರಾನಿನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವವರೆಗಿನ ಅಂತಾರಾಷ್ಟ್ರೀಯ ಆಯಾಮಗಳ ಚರ್ಚಾಂಶಗಳನ್ನು ನಿರ್ಧರಿಸಿವೆ. ವ್ಯಾಪಾರ ಮತ್ತು ಪ್ರವಾಸೋದ್ಯಮಗಳನ್ನು ಉತ್ತೇಜಿಸುವ ಉದ್ದೇಶದಿಂದ ಗವರ್ನರ್‌ಗಳು ವಿದೇಶಗಳಿಗೆ ಪ್ರಯಾಣ ಬೆಳೆಸುತ್ತಾರೆ.

ಅಂತಾರಾಷ್ಟ್ರೀಯ ವಿಷಯಗಳು ಮತ್ತು ಜಾಗತಿಕ ಪ್ರಾಬಲ್ಯಗಳು ಒಂದು ನಿರ್ದಿಷ್ಟವಾದ ವಿದೇಶ ಅಥವಾ ಆಂತರಿಕ ನೀತಿಗಳನ್ನು ಪ್ರಭಾವಿಸಬಲ್ಲವು. ಕೆಳಗಿನ ಉದಾಹರಣೆಗಳನ್ನು ಗಮನಿಸಿ:

ಅಂತಾರಾಷ್ಟ್ರೀಯ ಘಟನೆಗಳು ಇಡೀ ಸಮುದಾಯಗಳನ್ನೆ ಚಲನಶೀಲಗೊಳಿಸಬಹುದು ಮತ್ತು ಒಂದು ನೆರೆಹೊರೆಯ ವಿರುದ್ಧ ಮತ್ತೊಂದನ್ನು ಎತ್ತಿಕಟ್ಟಬಹುದು. "ರೆಡ್ ಸ್ಕೇರ್" ಎನ್ನುವ ಜಪಾನಿನ ಪ್ರದೇಶ ನಿರ್ಬಂಧ ಮತ್ತು ಇತ್ತೀಚಿನ ಅರಬ್-ವಿರೋಧಿ ಭಾವನೆಗಳು ಇದಕ್ಕೆ ಉದಾಹರಣೆಗಳಾಗಿವೆ.

ವಿದೇಶ ವ್ಯಾಪಾರ ಮತ್ತು ಬಂಡವಾಳ ತೊಡಗಿಸುವಿಕೆಯು ತಮ್ಮ ಉತ್ಪಾದನೆಗಳನ್ನು ವಿದೇಶದಲ್ಲಿ ಮಾರಾಟ ಮಾಡುವ, ವಿದೇಶಿ ಬಂಡವಾಳವನ್ನು ಆಕರ್ಷಿಸುವ, ಅಥವಾ ಅಗ್ಗದ ವಿದೇಶಿ ಉತ್ಪಾದನೆಗಳಿಂದ ಸ್ಥಳೀಯ ಉತ್ಪಾದನೆಗಳ ರಕ್ಷಣೆಯನ್ನು ಅವಲಂಬಿಸಿರುವ ಸಮುದಾಯಗಳ ಸ್ಥಳೀಯ ಆರ್ಥಿಕತೆ ಮತ್ತು ರಾಜಕೀಯವನ್ನು ಗಣನೀಯವಾಗಿ ಪ್ರಭಾವಿಸುತ್ತವೆ.

ರಾಷ್ಟ್ರದ ಗಡಿಗಳನ್ನು ಮೀರಿದ ಪಾತ್ರದಾರಿಗಳು ಮತ್ತು ಬಹುರಾಷ್ಟ್ರೀಯ ನಿಗಮಗಳು ಅಂತಾರಾಷ್ಟ್ರೀಯ ವ್ಯವಸ್ಥೆಯ ಮಹತ್ವದ ಅಂಶಗಳಾಗಿವೆ ಮತ್ತು ವಿವಿಧ ಬಗೆಯಲ್ಲಿ ಆಂತರಿಕ ರಾಜಕೀಯವನ್ನು ಮತ್ತು ಆರ್ಥಿಕತೆಯನ್ನು ವ್ಯಾಪಿಸುವ ಸಾಧ್ಯತೆಯನ್ನು ಹೊಂದಿವೆ. ಉದಾಹರಣೆಗೆ 'ಗ್ರೀನ್ ಪೀಸ್'ನಂತಹ ಅಂತಾರಾಷ್ಟ್ರೀಯ ಚಳುವಳಿಯು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಯೋಜನಗೆಳ ವಿರುದ್ಧವಾಗಿ ರಾಷ್ಟ್ರೀಯ ಗುಂಪುಗಳಿಗೆ ಮತ್ತು ಅಂತಾರಾಷ್ಟ್ರೀಯ ಸಂಘಟನೆಗಳಿಗೆ ಅಸಾಧ್ಯವಾದ ರೀತಿಯಲ್ಲಿ ಜನರಿಗೆ ಚಾಲನೆ ನೀಡಬಹುದು. ಬಹುರಾಷ್ಟ್ರೀಯ ನಿಗಮಗಳು ಅಂತಾರಾಷ್ಟ್ರೀಯ ರಾಜಕೀಯಕ್ಕೆ ಮತ್ತೊಂದು ಬಗೆಯ ಆಯಾಮವನ್ನು ಪರಿಚಯಿಸುತ್ತವೆ. ಉದಾಹರಣೆಗೆ, ಪಶ್ಚಿಮ ಯುರೋಪಿನಲ್ಲಿ ತನ್ನ ಕಚೇರಿಯನ್ನು ಹೊಂದಿರುವ ಬಹುರಾಷ್ಟ್ರೀಯ ನಿಗಮದ ಅಮೇರಿಕಾದ ಸಹಾಯಕ ಸದಸ್ಯ, ಹೊಸ ಯೂರೋಪಿಯನ್ ಮಾರುಕಟ್ಟೆಯ ವ್ಯಾಪ್ತಿಯಲ್ಲಿ ಹೊಂದಿರುವ ಆಸಕ್ತಿಯು, ಅದೇ ಮಾರುಕಟ್ಟೆಗೆ ಸರಕುಗಳನ್ನು ರಫ್ತುಮಾಡುವ ಇಚ್ಛೆಯನ್ನುಳ್ಳ ಅಮೆರಿಕನ್ ಕಂಪನಿಯ ಆಸಕ್ತಿಗೆ ಭಿನ್ನವಾಗಿರಬಹುದು.

ಈ ಎಲ್ಲ ಅಂತರಿಕ ಮತ್ತು ವಿದೇಶಿ ಪ್ರಭಾವಗಳು ಒಳಪ್ರವೇಶಿಸುವಿಕೆ ಮತ್ತು ನಮ್ಯತೆ – ಈ ಎರಡೂ ಲಕ್ಷಣಗಳನ್ನು ಹೊಂದಿರುವ ಅಂತಾರಾಷ್ಟ್ರೀಯ ವ್ಯವಸ್ಥೆಯೊಳಗೆ ಚಾಲ್ತಿಯಲ್ಲಿರುತ್ತವೆ. ಮಹತ್ವದ ಬದಲವಣೆಗಳಾಗುತ್ತಿರುವ ವಿಶ್ವದಲ್ಲಿ ಇಂದು, ಅಮೇರಿಕಾವು ಒಂದು ಕಾರ್ಯಸಾಧ್ಯವಾದ ಸ್ಥಾನಕ್ಕಾಗಿ ಹುಡುಕಾಡುತ್ತಿದೆ. ಇಂತಹ ಒಂದು ಜಗತ್ತಿನಲ್ಲಿ ಅಮೇರಿಕಾಗೆ ಇರುವ ಆಸಕ್ತಿಗಳಾದರೂ ಏನು? ನಾವು ಏನನ್ನು ಸಾಧಿಸಬೇಕು, ಯಾರೊಡನೆ ಸೇರಬೇಕು, ಮತ್ತು ಯಾವ ತಳಹದಿಯ ಮೇಲೆ?

ಜಾರ್ಜ್ ವಾಷಿಂಗ್ಟನ್ ತನ್ನ ವಿದಾಯದ ಭಾಷಣದಲ್ಲಿ "ಶಾಶ್ವತ ಮೈತ್ರಿಗಳಿಂದ ದೂರ ಉಳಿಯುವ ನಮ್ಮ ನೈಜ ನೀತಿ" ಯ ಬಗ್ಗೆ ಹೇಳುತ್ತಾ,"ನ್ಯಾಯದ ಮಾರ್ಗದರ್ಶನ ಪಡೆದ ಹಿತಾಸಕ್ತಿಯು ನೀಡುವ ಸಲಹೆಯ ನಿಟ್ಟಿನಲ್ಲಿ, ನಾವು ಶಾಂತಿ ಅಥವಾ ಯುದ್ಧವನ್ನು ಆಯ್ಕೆ ಮಾಡಿಕೊಳ್ಳಬಹುದಾದ " (ಒತ್ತನ್ನು ಸೇರಿಸಲಾಗಿದೆ) ದಿನವೊಂದನ್ನು ಆಶಿಸುತ್ತಾನೆ. "ನ್ಯಾಯದ ಮಾರ್ಗದರ್ಶನ ಪಡೆದ ಹಿತಾಸಕ್ತಿ" ನಮ್ಮ ವಿದೇಶಾಂಗ ನೀತಿಗೆ ಎಂತಹ ಅದ್ಭುತ ಸಲಹೆ. ಅದು ಸಾಧ್ಯವೆ? ರಾಜತಾಂತ್ರಿಕ ಇತಿಹಾಸಕಾರ ಮತ್ತು ವ್ಯಾವಹಾರಿಕ ರಾಜತಾಂತ್ರಿಕ ಜಾರ್ಜ್ ಎಫ್. ಕೆನನ್ ಪ್ರಕಾರ ಇದು ಅಪೇಕ್ಷಣಿಯವಲ್ಲದಿರಬಹುದು. 1951ರಲ್ಲಿ ಇದರ ಬಗ್ಗೆ ಬರೆಯುತ್ತಾ ಅವರು ಹೇಳುತ್ತಾರೆ:

ಕಾನೂನು ಇದೆ ಎಂದು ಯಾರು ಹೇಳುತ್ತಾರೊ ಅವರು ಕಾನೂನನ್ನು ಮುರಿಯುವವರ ಬಗ್ಗೆ ಕುಪಿತಗೊಳ್ಳಲೇಬೇಕು ಮತ್ತು ಅವರಿಗಿಂತ ತಾನು ನೈತಿಕವಾಗಿ ಉತ್ತಮ ಎನ್ನುವ ಭಾವನೆಯನ್ನು ಹೊಂದಿರಬೇಕು. ಮತ್ತು ಅಂತಹ ಕೋಪ ಮಿಲಿಟರಿ ಸಂಘರ್ಷದಲ್ಲಿ ಕಂಡುಬಂದರೆ ಅದು ಕಾನೂನು ಉಲ್ಲಂಘಿಸುವವರನ್ನು ಸಂಪೂರ್ಣವಾಗಿ ಅಧೀನಕ್ಕೊಳಪಡಿಸುವವರೆಗೆ - ಅಂದರೆ ಬೇಷರತ್ ಶರಣಾಗತಿಯಾಗುವವರೆಗೆ ಮುಂದುವರೆಯುತ್ತದೆ. ಇದು ಕುತೂಹಲಕರವಾಗಿದ್ದಾಗ್ಯೂ, ಸತ್ಯವಾದ ಸಂಗತಿ ಎಂದರೆ ಜಾಗತಿಕ ವ್ಯವಹಾರಗಳಲ್ಲಿ ಕಾನೂನಾತ್ಮಕ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವುದು, ಹಿಂಸೆ ಮತ್ತು ಯುದ್ಧವನ್ನು ತಪ್ಪಿಸುವ ಪ್ರಶ್ನಾತೀತ ಮೂಲ ಉದ್ದೇಶವನ್ನು ಹೊಂದಿದ್ದರೂ ಕೂಡ, ಹಿಂಸೆಯನ್ನು ಮತ್ತಷ್ಟು ದೀರ್ಘಗೊಳಿಸುತ್ತದೆ, ಮತ್ತಷ್ಟು ಭಯಾನಕವಾಗಿಸುತ್ತದೆ, ಅಲ್ಲದೆ ರಾಷ್ಟ್ರೀಯ ಹಿತಾಸಕ್ತಿಯ ನಿಟ್ಟಿನ ಹಳೆಯ ಉದ್ದೇಶಗಳು ರಾಜಕೀಯ ಭದ್ರತೆಗೆ ಉಂಟುಮಾಡಿದ ಹಾನಿಗಿಂತಲೂ ಹೆಚ್ಚು ಹಾನಿಕರವಾಗಿರುತ್ತದೆ. ಅತ್ಯಂತ ಉನ್ನತವಾದ ನೈತಿಕ ತತ್ವದ ಹೆಸರಿನಲ್ಲಿ ನಡೆಯುವ ಯುದ್ಧವು ವೈರಿಯ ಸಂಪೂರ್ಣ ದಮನವಾಗುವವರೆಗೂ ನಿಲ್ಲುವುದಿಲ್ಲ. (ಕೆನನ್ 1951, 101)

ಕೆನನ್ ಅವರ ಈ ಅಭಿಪ್ರಾಯವು ಸಿನಿಕತನದಿಂದ ಕೂಡಿದೆ ಎನಿಸಿದರೂ, ಅಧಿಕಾರ ರಾಜಕೀಯವು ಅತ್ಯಂತ ವಾಸ್ತವಿಕ ನೀತಿಯಾಗಬಹುದು:

ವಿಶ್ವವನ್ನು ಆಳುವ ಮತ್ತು ರಕ್ಷಿಸುವ ವಿಶ್ವ ಸರಕಾರದ ಗೈರುಹಾಜರಿಯಲ್ಲಿ, ತನ್ನ ಉಳಿವು ಮತ್ತು ಸುರಕ್ಷತೆಗೆ, ತನ್ನನ್ನಲ್ಲದೆ ಮತ್ತಾರನ್ನೂ ಅವಲಂಬಿಸುವಂತಿಲ್ಲ ಎನ್ನುವುದು ಪ್ರತಿಯೊಂದು ಪ್ರಭುತ್ವಕ್ಕೂ ತಿಳಿದಿದೆ. ಮೂಲತಃ ಅರಾಜಕವೆನಿಸಿರುವ ವ್ಯವಸ್ಥೆಯೊಂದರಲ್ಲಿ ಸ್ವರಕ್ಷಣೆಯೆ ಏಕಮಾತ್ರ ರಕ್ಷಣೆಯಾಗಿರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಪ್ರಭುತ್ವ ವ್ಯವಸ್ಥೆಯ ಸಹಜ ಸ್ವರೂಪವೇ ಅಭದ್ರತೆ, ಅಪನಂಬಿಕೆ, ಸಂದೇಹ, ಮತ್ತು ಭಯವನ್ನು ಹುಟ್ಟಿಸುವುದಾಗಿದೆ.... (ಸ್ಪೇನಿಯರ್ 1985, 1-2)

ವಾಸ್ತವವಾದಿಗಳು ತಮ್ಮ ವಾದವನ್ನು ಬಹಳ ಮುಂದಕ್ಕೆ ಕೊಂಡೊಯ್ಯಬಹುದು. ಮೊದಲನೆಯದಾಗಿ, ನ್ಯಾಯಸಂಗತ ಕ್ರಿಯೆಯಲ್ಲಿ ತೊಡಗುವುದಕ್ಕೆ ಮತ್ತು ಅಧಿಕಾರದ ರಾಜಕಾರಣಕ್ಕೆ ಅಧಿಕಾರ-ಸಮತೋಲನ ವ್ಯವಸ್ಥೆಯು ಒಂದು ಪರಿಪೂರ್ಣ ಒಪ್ಪಿತ ನೆಲೆಯಾಗಿರಬಹುದು. ಎರಡನೆಯದಾಗಿ, ಅಧಿಕಾರ ಅಸಮತೋಲನದಲ್ಲಿನ ಹಸ್ತಕ್ಷೇಪದ ವಿಭಿನ್ನ ಕ್ರಿಯೆಗಳು ಒಪ್ಪಿಗೆಯಾಗುವ ಅಂತಾರಾಷ್ಟ್ರೀಯ ವರ್ತನೆಯ ನೆಲೆಯನ್ನು ಕಾಪಾಡಿಕೊಂಡು (ಬಹುಶಃ ಮತ್ತಷ್ಟು ಹೆಚ್ಚಿಸಲು) ಬರಲು ಅಧಿಕಾರ ಮತ್ತು ಬಲವನ್ನು ಆಧರಿಸಿರುವ ಅಂತಾರಾಷ್ಟ್ರೀಯ ವರ್ತನೆಯ ಅಗತ್ಯವಿದೆ ಎನ್ನುವುದನ್ನು ತೋರಿಸಿಕೊಟ್ಟಿವೆ. ಮೂರನೆಯದಾಗಿ, “ಅಧಿಕಾರ ರಾಜಕಾರಣ”ದ ಕಾರ್ಯನೀತಿಯು ರಾಜಕೀಯವಾಗಿ ಅಸ್ವೀಕಾರ್ಯ ಮತ್ತು ಅವ್ಯಾವಹಾರಿಕವಾಗಿರುವ ಪ್ರಜಾಪ್ರಭುತ್ವ ಯುಗದಲ್ಲಿ ನಾವು ಬದುಕುತ್ತಿದ್ದೇವೆ. ತಮ್ಮ ನಾಯಕರು ನ್ಯಾಯಯುತ ಕ್ರಿಯೆಗಳಲ್ಲಿ ತೊಡಗಿದ್ದಾರೆಂಬ ನಂಬಿಕೆಗಾಗಿ ಸಾರ್ವಜನಿಕರು ಹಂಬಲಿಸುತ್ತಾರೆ. ವಾಸ್ತವಿಕವಾಗಿ, ಅತ್ಯಂತ ಹೆಚ್ಚೆಂದರೆ ನ್ಯಾಯದ ಪರಿಬಾಷೆಯು ವಿಪರೀತಕ್ಕೆ ಹೋಗಬಾರದು – ಅಂದರೆ ಹದವರಿತ ರೀತಿಯಲ್ಲಿರಬೇಕು ಎನ್ನುವ ನಿರೀಕ್ಷೆ ಇರುತ್ತದೆ. ಅಂತಿಮವಾಗಿ, ವಿವಿಧ ಶಾಂತಿಯುತ ವಲಯಗಳಲ್ಲಿ ಅಂತಾರಾಷ್ಟ್ರೀಯ ಕಾನೂನು ಮತ್ತು ಅಂತಾರಾಷ್ಟ್ರೀಯ ಸಂಘಟನೆಗಳು ಸಂಚಯಗೊಳ್ಳುತ್ತಿರುವುದನ್ನು ಕಂಡಿರುವ ಅಂತಾರಾಷ್ಟ್ರೀಯ ವ್ಯವಸ್ಥೆಯಲ್ಲಿ ನಾವು ಬದುಕುತ್ತಿದ್ದೇವೆ (ನ್ಯಾಯಾಲಯಗಳಿಂದ ಹಿಡಿದು ಪರಸ್ಪರ ಪ್ರತಿಸ್ಪರ್ಧಿಸುವ ಆರ್ಥಿಕ ದಾವೆಗಳ ನಿರ್ವಹಣೆಯವರೆಗೆ); ಇದೂ ಕೂಡ ಅಂತಾರಾಷ್ಟ್ರೀಯ ರಾಜಕೀಯದ ವಾಸ್ತವಿಕತೆಯ ಒಂದು ಭಾಗವಾಗಿದೆ.

ಅಂತಾರಾಷ್ಟ್ರೀಯ ರಾಜಕೀಯ ಎನ್ನುವುದು ಈಗ ಕೇವಲ ರಾಜತಾಂತ್ರಿಕರು ಮತ್ತು ಯೋಧರಿಗೆ ಮಾತ್ರ ಮೀಸಲಾಗಿಲ್ಲ. ವಿದೇಶಾಂಗ ನೀತಿಯ ರಾಜಕೀಯ ಅಥವಾ ಅಂತಾರಾಷ್ಟ್ರೀಕೃತ ಆಂತರಿಕ ನೀತಿಯ ರಾಜಕಾರಣವನ್ನು ವಿವಿಧ ಹಂತಗಳಲ್ಲಿ ನಡೆಸಬಹುದು ಮತ್ತು ಅದು ವೈವಿಧ್ಯಮಯ ಪಾತ್ರಧಾರಿಗಳನ್ನು ಒಳಗೊಂಡಿರುತ್ತದೆ. ಅದರ ರಾಜಕೀಯವು ಮೂಲಭೂತವಾಗಿ ಬಹುಪಕ್ಷೀಯ, ದ್ವಿಪಕ್ಷೀಯ, ಅಥವಾ ಆಂತರಿಕವಾದುದಾಗಿರುತ್ತದೆ. ಅದು ವಿದೇಶಿ ಮಿತ್ರರು, ಪ್ರತಿಸ್ಪರ್ಧಿಗಳು, ವಿರೋಧಿಗಳು, ಅಥವಾ ತಟಸ್ಥ ಪಕ್ಷಗಳನ್ನು ಒಳಗೊಂಡಿರಬಹುದು. ವಿದೇಶಾಂಗ ನೀತಿಯ ರಾಜಕೀಯವನ್ನು ದೇಶದೊಳಗೂ ನಡೆಸಬಹುದಾಗಿದ್ದು, ಈ ಮುಂದಿನವುಗಳನ್ನು ಅದು ಒಳಗೊಂಡಿರಬಹುದು: ಅಧ್ಯಕ್ಷ-ಕಾಂಗ್ರೆಸ್ಸಿಗರ ಸಂಬಂಧಗಳು, ಅಂತರ್-ನಿಯೋಗಿ ಸಂಬಂಧಗಳು, ರಾಷ್ಟ್ರ-ರಾಜ್ಯ-ಸ್ಥಳೀಯ ಸಂಬಂಧಗಳು, ಮತ್ತು ಜವಳಿ ತೆರಿಗೆ ಕಾಯಿದೆಗಾಗಿ ವಶೀಲಿ ನಡೆಸುವ ಕಾರ್ಮಿಕ ಒಕ್ಕೂಟಗಳಿಂದ ಹಿಡಿದು ಭಿನ್ನಮತೀಯ ಚೀನಾ ವಿದ್ಯಾರ್ಥಿಗಳಿಗೆ ನಿರಾಶ್ರಿತರ ಸ್ಥಾನ ಕಲ್ಪಿಸಲು ವಶೀಲಿ ನಡೆಸುವ ಚೀನೀ ಅಮೆರಿಕನ್ನರವರೆಗಿನ ವಿವಿಧ ಹಿತಾಸಕ್ತ ಸಮೂಹಗಳು.

ಅಮೇರಿಕಾದ ವಿದೇಶಾಂಗ ನೀತಿಯು ವಿಸ್ತೃತ ವ್ಯಾಪ್ತಿಯ ದಸ್ತಾವೇಜುಗಳನ್ನು ಸಹ ಒಳಗೊಂಡಿರುತ್ತದೆ. ಮೂಲ ಪಟ್ಟಿಯು ಕೂಡ, ಅಂತಾರಾಷ್ಟ್ರೀಯ, ಸಂಯುಕ್ತ, ಮತ್ತು ರಾಜ್ಯದ ವ್ಯಾಪ್ತಿಯಲ್ಲಿನ ಕಾನೂನಿನ ನ್ಯಾಯಿಕ ಕ್ರಮಗಳನ್ನು ಒಳಗೊಂಡಿರುತ್ತದೆ; ಸಂಕಷ್ಟ ನಿರ್ವಹಣೆಯಿಂದ ಹಿಡಿದು ಸಾಮಾನ್ಯ ರಾಜತಾಂತ್ರಿಕ ಸಂಬಂಧಗಳ ನಿರ್ವಹಣೆಯವರೆಗೆ ವ್ಯಾಪಿಸಿರುವ ಬಹುಪಕ್ಷೀಯ ಮತ್ತು ದ್ವಿಪಕ್ಷೀಯ ಸಂದರ್ಭಗಳಲ್ಲಿರುವ ರಾಜತಾಂತ್ರಿಕ ಕ್ರಮಗಳು; ತಾಂತ್ರಿಕ ಯೋಜನೆಗಳು, ಸಂಗ್ರಹಣೆ, ನಿಯೋಜನೆ, ತರಬೇತಿ, ಸಂಘಟನೆ, ಮತ್ತು ಶಸ್ತ್ರಾಸ್ತ್ರ ಅಭಿವೃದ್ಧಿಗಳನ್ನು ಒಳಗೊಂಡ ರಕ್ಷಣಾ ನೀತಿ; ವ್ಯಾಪಾರ, ಸಹಾಯ, ಬಂಡವಾಳ ಹೂಡುವಿಕೆ, ಮತ್ತು ಬಹಿಷ್ಕಾರಗಳಂತಹ ಆರ್ಥಿಕ ನೀತಿಗಳು; ಶಾಂತಿ ಮತ್ತು ಮಿಲಿಟರಿ ಉದ್ದೇಶಗಳಿಗಾಗಿ ತಂತ್ರಜ್ಞಾನ ನೀತಿ; ವಲಸೆ ಹಾಗೂ ನಿರಾಶ್ರಿತರ ನೀತಿ; ಮತ್ತು ಸಾಂಸ್ಕೃತಿಕ ವಿನಿಮಯ, ಶೈಕ್ಷಣಿಕ ವಿನಿಮಯ, ಪ್ರವಾಸೋದ್ಯಮ, ಮತ್ತು ಪ್ರಯಾಣಗಳನ್ನೊಳಗೊಂಡ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ನೀತಿಗಳು.

ಇವುಗಳಲ್ಲಿನ ಈ ಕೆಲವು ನೀತಿಗಳು ದೇಶದೊಳಗೆ ಅಥವ ವಿದೇಶದಲ್ಲಿ ದುರ್ಲಭ ಸಂಪನ್ಮೂಲಗಳ ಹಂಚಿಕೆಯನ್ನು ಒಳಗೊಂಡಿರುತ್ತವೆ. ಮಿಲಿಟರಿ ಸ್ಥಾಪನೆಗೆ ಅಗತ್ಯವಾದ ಧನಸಹಾಯ, ರಕ್ಷಣಾ ಒಪ್ಪಂದಗಳು, ವಿದೇಶಿ ಸಹಾಯ, ರಾಯಭಾರಗಳು, ಮತ್ತು ದೂತಾವಾಸಗಳು, ಸಂಶೋಧನಾ ಅನುದಾನಗಳು, ಮತ್ತು ಅಧ್ಯಯನ ಫೆಲೋಷಿಪ್‌ಗಳನ್ನು ಇದು ಒಳಗೊಂಡಿರುತ್ತದೆ. ಅವು ನಿತ್ಯಕ್ರಮದ ವಿವಾದಗ್ರಸ್ತವಲ್ಲದ ರೀತಿಯಲ್ಲಿ "ಉಕ್ಕಿನ ತ್ರಿಕೋನಗಳ" ಮೂಲಕ ಬಂದ ವಿತರಣಾತ್ಮಕ ಫಲಿತಾಂಶಗಳಾಗಿರಬಹುದು; ಅಥವಾ ಈ ಸಂಪನ್ಮೂಲಗಳಿಗೆ ಪುನರ್ವಿತರಣಾ ನೀತಿಗಳ, ತೀವ್ರ ಕಡಿತದ, ಅಥವಾ ತೀವ್ರವಾದ ವೈಚಾರಿಕ ಭಿನ್ನಾಭಿಪ್ರಾಯವನ್ನು ಹುಟ್ಟುಹಾಕುವ ಮತ್ತು ಅತ್ಯಂತ ಉನ್ನತ ಹಂತದವರೆಗೆ ರಾಜಕೀಯವನ್ನು ಸೀಮಿತಗೊಳಿಸುವ ಹೊಸ ಉಪಕ್ರಮಗಳ ಅಗತ್ಯವಿರಬಹುದು.

ವಿದೇಶಾಂಗ ನೀತಿಯು ದೇಶದೊಳಗೆ ಮತ್ತು ವಿದೇಶದಲ್ಲಿ ಮಾನವ ವರ್ತನೆಯ ನಿಯಂತ್ರಣವನ್ನೂ ಒಳಗೊಂಡಿರಬಹುದು. ಸುಂಕಗಳು, ನಿರ್ದಿಷ್ಟ ವಸ್ತು ಮತ್ತು ರಾಷ್ಟ್ರಗಳಿಗೆ ವಿಧಿಸಲಾದ ತೆರಿಗೆಗಳು ಮತ್ತು ಕೋಟಾಗಳು; ದೋಷಪೂರಿತ ಅಥವಾ ಅನಪೇಕ್ಷಿತ ವಸ್ತುಗಳ ಆಮದಿನ ನಿಷೇಧ; ವಿದೇಶಿ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರ ಮಾರಾಟದ ನಿರ್ಬಂಧಗಳು, ಮತ್ತು ವಿದೇಶಿ ರಾಷ್ಟ್ರದಲ್ಲಿನ ಒಂದು ನಿರ್ದಿಷ್ಟ ವಿರೋಧಿ ಗುಂಪಿಗೆ ನಿರಾಶ್ರಿತರ ಸ್ಥಾನಮಾನವನ್ನು ನೀಡುವುದು; ಇವು ವಿದೇಶಾಂಗ ನೀತಿಯ ನಿಯಂತ್ರಣಗಳ ಕೆಲವು ಉದಾಹರಣೆಗಳಾಗಿವೆ.

ಅಂತಿಮವಾಗಿ, ವಿದೇಶಾಂಗ ನೀತಿಯು ಅನಿರೀಕ್ಷಿತವಾಗಿ ಎದುರಾಗುವ ಮತ್ತು ತತ್‌ಕ್ಷಣದ ಪ್ರತಿಕ್ರಿಯೆಯನ್ನು ಆಗ್ರಹಿಸುವ ಗಂಭೀರ ಸ್ವರೂಪದ ಸಮಸ್ಯೆಗಳಿಗೆ ಅಗತ್ಯವಾದ ಸಂಕಷ್ಟ ಕಾಲದ ಪ್ರತಿಸ್ಪಂದನೆಗಳನ್ನು ಒಳಗೊಂಡಿರುತ್ತದೆ (ರಿಪ್ಲೆ ಮತ್ತು ಫ್ರಾಂಕ್ಲಿನ್ 1987, 28). 1941ರಲ್ಲಿ ಪರ್ಲ್ ಹಾರ್ಬರ್ ಮೇಲಿನ ಜಪಾನಿಯವರ ದಾಳಿ; 1962ರಲ್ಲಿ ಕ್ಯೂಬಾದಲ್ಲಿ ಸೋವಿಯಟ್ ಕ್ಷಿಪಣಿಗಳ ಪತ್ತೆ; 1979ರ ಅಂತ್ಯದಲ್ಲಿ ಅಮೇರಿಕಾದ ಒತ್ತೆಯಾಳುಗಳನ್ನು ಇರಾನಿಯನ್ನರು ಅಪಹರಿಸಿದ್ದು; 1990ರಲ್ಲಿ ಕುವೈತ್‌ನ ಮೇಲೆ ಇರಾಕಿನ ದಾಳಿ ಇವು ಅಂತಹ ಸಂಕಷ್ಟಗಳಿಗೆ ಕೆಲವು ಉದಾಹರಣೆಗಳಾಗಿವೆ.

ಅಮೇರಿಕಾ ವ್ಯವಸ್ಥೆಯಲ್ಲಿ ವಿದೇಶಾಂಗ ನೀತಿಯನ್ನು ರೂಪಿಸುವ ರಾಜಕೀಯದ ಬಗ್ಗೆ ಹಲವು ಮೂಲಭೂತ ತೀರ್ಮಾನಗಳನ್ನು ಮಾಡಬಹುದು. ಮೊದಲನೆಯದಾಗಿ, ಅಮೇರಿಕಾ ವ್ಯವಸ್ಥೆಯ ಪ್ರವೇಶಸಾಧ್ಯತೆ. ವಿದೇಶಾಂಗ ನೀತಿಯನ್ನು ರೂಪಿಸುವಲ್ಲಿ ಆಂತರಿಕ ಚರ್ಚಾಂಶಗಳು ಒಳಪ್ರವೇಶ ಮಾಡುತ್ತವೆ, ನಂತರದಲ್ಲಿ, ಆಂತರಿಕ

ಚರ್ಚಾಂಶಗಳು ಅಂತಾರಾಷ್ಟ್ರೀಕರಣಗೊಳ್ಳಬಹುದು.. ಎರಡನೆಯದಾಗಿ, ಅಂತಾರಾಷ್ಟ್ರೀಯ ವ್ಯವಸ್ಥೆಯ ನಮ್ಯತೆ ಮತ್ತು ಅಮೇರಿಕಾಗೆ ವಿಶ್ವ ನಾಯಕತ್ವದ ಒಂದು ಕಾರ್ಯಸಾಧ್ಯ ನೆಲೆಯನ್ನು ಕಂಡುಕೊಳ್ಳಲು ಹುಡುಕಬೇಕಾದಂತಹ ಶಕ್ತಿ-ಸಮತೋಲನ ವ್ಯವಸ್ಥೆಯ ಪುನರುತ್ಥಾನ. ಇದರಲ್ಲಿ ಸಂಯುಕ್ತ ರಾಜ್ಯವು ವಿಶ್ವ ನೇತೃತ್ವದ ಕಾರ್ಯಸಾಧ್ಯವೆನಿಸಿದ ಸ್ಥಾನವೊಂದನ್ನು ಹುಡುಕಬೇಕು. ಮೂರನೆಯ ತೀರ್ಮಾನವು ವಿದೇಶಾಂಗ ನೀತಿಗಳು ಮತ್ತು ನೀತಿ ಸಂಬಂಧಿತ ದಸ್ತಾವೇಜುಗಳ ವಿವಿಧತೆಗೆ ಸಂಬಂಧಿಸಿದೆ. ಅಂತಿಮವಾಗಿ, ವಿದೇಶಾಂಗ ಮತ್ತು ಆಂತರಿಕ ರಾಜಕೀಯಗಳೆರಡರಲ್ಲೂ ಸಂಪನ್ಮೂಲ ಹಂಚಿಕೆ ಮತ್ತು ಸರಕಾರಿ ನಿಯಂತ್ರಣಗಳಂತಹ ಚಿರಸ್ಥಾಯಿ ವಿಷಯಗಳನ್ನು ಗಮನಿಸುವುದು ಮುಖ್ಯವಾಗುತ್ತದೆ.

ಚಟುವಟಿಕೆ

ವಿದೇಶಿ ನೆರವಿನ ಮರುಚಿಂತನೆ

ಅಮೇರಿಕಾ ಮತ್ತು ವಿಶ್ವವನ್ನು ಇಪ್ಪತ್ತನೆ ಶತಮಾನದ ಕೊನೆಯ ದಶಕವು ಒಂದು ಹೊಸ ಜಾಗತಿಕ ಪರಿಸ್ಥಿತಿಗೆ ತಂದಿಟ್ಟಿದ್ದು, ಇದನ್ನು ಕೆಲವೇ ಜನರು ಇದನ್ನು ಊಹಿದ್ದರು. ಯಾವ ದೇಶವೂ ಈ ಪರಿಸ್ಥಿತಿಗೆ ತಯಾರಾಗಿರಲಿಲ್ಲ. ಎರಡನೆ ಮಹಾಯುದ್ಧದ ನಂತರ ಅಮೇರಿಕಾ ಮತ್ತು ಜಗತ್ತಿನ ಬಹುತೇಕ ಇತರ ದೇಶಗಳು ಎರಡನೇ ಮಹಾಯುದ್ಧದ ಮುಕ್ತಾಯದ ನಂತರ ಶೀತಲ ಯುದ್ಧದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವು. ಇದು ಒಂದೆಡೆಯಿಂದ ಸೋವಿಯತ್ ಒಕ್ಕೂಟ ಮತ್ತು ಅದರ ಇತರ ಕಮ್ಯೂನಿಸ್ಟ್ ಮೈತ್ರಿಗಳು ಹಾಗೂ ಮತ್ತೊಂದೆಡೆಯಿಂದ ಅಮೇರಿಕಾ ಮತ್ತು ಅದರ ಮೈತ್ರಿಗಳ ನಡುವಿನ ಮೂಲ ಸಂಘರ್ಷದ ಫಲಿತವಾಗಿತ್ತು. ಈ ಹೋರಾಟದ ಅಮೇರಿಕಾದ ವಿಶ್ಲೇಷಣೆಯು ಹಲವು ಉಪಸಿದ್ಧಾಂತಗಳನ್ನು ಸೃಷ್ಟಿಸಿತು: ಬಡತನವು ಜನರನ್ನು ರೊಟ್ಟಿಯ ಭರವಸೆಗಾಗಿ ಸ್ವಾತಂತ್ರ್ಯದ ವ್ಯಾಪಾರಮಾಡಲು ಪ್ರೇರಿಸಬಹುದಾದ ಕಾರಣ, ಕಮ್ಯೂನಿಸ್ಟ್‌ವಾದದ ಆಮಿಷವನ್ನು ಎದುರಿಸಲು ದೇಶಗಳು ಸಂಪದ್ಭರಿತವಾಗುವುದು ಅಗತ್ಯ. ಇತರ ದೇಶಗಳಲ್ಲಾಗುವ ಕೈಗಾರೀಕರಣ ಮತ್ತು ಆರ್ಥಿಕ ಅಭಿವೃದ್ಧಿಯು ಅಮೇರಿಕಾ ಮತ್ತು ಪಶ್ಚಿಮಕ್ಕೆ ಅನುಕೂಲಕರವಾಗಿರುತ್ತದೆ. ಏಕೆಂದರೆ ಅವುಗಳ ವ್ಯಾಪಾರವು ವೃದ್ಧಿಸಿ, ಎಲ್ಲ ಪಕ್ಷದವರಿಗೂ ಅದರ ಲಾಭ ದೊರೆಯುತ್ತದೆ. ಆರ್ಥಿಕ ಅಭಿವೃದ್ಧಿಗೆ ರಾಜಕೀಯ ಸ್ವಾತಂತ್ರ್ಯ ಅಗತ್ಯವಿಲ್ಲದಿದ್ದರೂ ಕೂಡ ಸಂಪತ್ತಿನ ಹೆಚ್ಚಳವು ಇತರ ದೇಶಗಳ ಪ್ರಜಾಪ್ರಭುತ್ವದ ಸಂಭಾವ್ಯತೆಯನ್ನು ಹೆಚ್ಚಿಸುತ್ತದೆ, ಮತ್ತು ಅದು ಅಮೇರಿಕಾಗೆ ಅನುಕೂಲವಾಗುವ ವಿಶ್ವವನ್ನು ಉತ್ತೇಜಿಸುತ್ತದೆ. ತಮ್ಮ ಪ್ರದೇಶದಲ್ಲಿ ಕಮ್ಯೂನಿಸ್ಟರು ಅತಿಕ್ರಮಪ್ರವೇಶ ಮಾಡದಂತೆ ರಕ್ಷಿಸಿಕೊಳ್ಳಲು ಮತ್ತು ಅಮೇರಿಕಾ ನೇತ್ರುತ್ವದಲ್ಲಿ ಕಮ್ಯೂನಿಸಮ್‌ನ್ನು ಹಾಗೂ ಸೋವಿಯತ್ ಒಕ್ಕೂಟವನ್ನು ನಿರ್ಬಂಧಿಸುವ ಕಾರ್ಯದಲ್ಲಿ ಪಾಲ್ಗೊಳ್ಳಲು ಸ್ವತಂತ್ರ ರಾಷ್ಟ್ರಗಳು ಸೈನ್ಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಶಕ್ತವಾಗಬೇಕು.

ಈ ವಿಶ್ಲೇಷಣೆಯ ಪರಿಣಾಮವಾಗಿಯೆ ಅಮೆರಿಕಕ್ಕೆ, ವಿದೇಶೀ ನೆರವಿನ ಕಾರ್ಯಕ್ರಮವನ್ನು ಸ್ಥಾಪಿಸುವ ಇಚ್ಛೆಯುಂಟಾಯಿತು. ಅಂದರೆ ಅಮೇರಿಕಾದ ಧಾರಳಿತನದ ಪರಂಪರೆಯೊಂದಿಗೆ ಅಮೇರಿಕಾದ ರಾಷ್ಟ್ರೀಯ ಹಿತಾಸಕ್ತಿಗಳು ಎಂದು ಗ್ರಹಿಸಲಾದುದರ ಸಕ್ರಿಯ ಉತ್ತೇಜನವನ್ನು ಸಂಯೋಜಿಸಿದ ಆರ್ಥಿಕ ಸಹಾಯದ ಒದಗಣೆ. ನೋಡಲು ಸರಳವಾಗಿ ಕಾಣುವ 'ವಿದೇಶಿ ನೆರವು' ಎನ್ನುವ ಪರಿಭಾಷೆಯು ಅತ್ಯಂತ ಸಂಕೀರ್ಣವಾದ

ಅಂಶಗಳನ್ನೊಳಗೊಂಡ ನೀತಿಗಳ ಒಂದು ಸಮುಚ್ಚಯವಾಗಿತ್ತು. ಬರ ಮತ್ತು ದುರಂತಗಳ ಪರಿಣಾಮವನ್ನು ನೀಗಿಸುವುದು, ಕೃಷಿ ಉತ್ಪಾದನೆ ಮತ್ತು ಕೈಗಾರಿಕೀಕರಣ ಇವೆರಡರಲ್ಲಿ ಯಾವುದಾದರೂ ಒಂದರಲ್ಲಿ ಅಥವಾ ಎರಡರಲ್ಲೂ ಹಿಂದುಳಿದ ರಾಷ್ಟಗಳಲ್ಲಿ ಅವುಗಳನ್ನು ಉತ್ತೇಜಿಸುವುದು; ಮೂಲಭೂತ ಅಗತ್ಯಗಳಾದ ಆರೋಗ್ಯ, ಶಿಕ್ಷಣ, ಮತ್ತು ವಸತಿಯ ಅವಶ್ಯಕತೆಗಳನ್ನು ಪೂರೈಸಲು ಅಮೇರಿಕಾದ ಜ್ಞಾನ ಮತ್ತು ತಂತ್ರಜ್ಞಾನವನ್ನು ಒದಗಿಸುವುದು; ಮಿತ್ರ ದೇಶಗಳ ಶಸ್ತ್ರಾಸ್ತ್ರ ಬಲವನ್ನು ಬೆಂಬಲಿಸಲು ಶಸ್ತ್ರಾಸ್ತ್ರ, ತರಬೇತಿ, ಮತ್ತು ಧನಸಹಾಯವನ್ನು ನೀಡುವುದು; ಅಮೇರಿಕಾದ ಮಿಟರಿ ಶಕ್ತಿಗಳನ್ನು ಬೆಂಬಲಿಸುವ ರಾಷ್ಟ್ರಗಳಿಗೆ ಪರಿಹಾರ ನೀಡುವುದು; ಅಮೇರಿಕಾದ ಚಿಂತನೆಗಳನ್ನು ಮತ್ತು ಹಿತಾಸಕ್ತಿಗಳನ್ನು ತಮ್ಮದಾಗಿಸಿಕೊಂಡ ದೇಶಗಳಿಗೆ ಭೌತಿಕ ಪ್ರತಿಫಲ ನೀಡುವುದು; ಮತ್ತು ಪಟ್ಟಿ ಮಾಡಲಾಗದಷ್ಟು ಇತರ ಅಸಂಖ್ಯ ಉದ್ದೇಶಗಳು,

ಶೀತಲ ಯುದ್ಧ ಮುಗಿದರೂ ಕೂಡ, ಅಮೇರಿಕಾವು ಈಗಲೂ ಅನುಸರಿಸಬೇಕಾದ ಇತರೆ ಅನೇಕ ರಾಷ್ಟ್ರೀಯ ಹಿತಾಸಕ್ತಿಗಳು ಮತ್ತು ಪೂರೈಸಬೇಕಾದ ನಾಯಕತ್ವದ ಪಾತ್ರಗಳು ಬಹಳಷ್ಟಿವೆ. ತನ್ನ ಗುರಿಗಳನ್ನು ಮುಂದುವರೆಸಲು ಅದಕ್ಕೆ ವಿದೇಶಿ ನೆರವು ಹೇಗೆ ನೆರವಾಗುತ್ತದೆ?

ಈ ಕೆಳಗಿನ ನೀತಿಗಳ ಪ್ರತಿಯೊಂದರ ಆಯ್ಕೆಯಲ್ಲಿಯೂ ಇರುವ ಅನುಕೂಲ ಮತ್ತು ಅನನುಕೂಲಗಳ ಪಟ್ಟಿ ಮಾಡಿ. ಇವುಗಳಲ್ಲಿ ಯಾವ ನೀತಿಗಳನ್ನು "ವಾಸ್ತವವಾದಿ" ಚಿಂತನಾಕ್ರಮವು ಬೆಂಬಲಿಸುತ್ತದೆ, ಅಂತಾರಾಷ್ಟ್ರೀಯ ರಾಜಕೀಯವನ್ನು ಯಾವುದು ರಾಷ್ಟ್ರೀಯ ಹಿತಾಸಕ್ತಿಯ ಹೆಸರಿನಲ್ಲಿ ಮಾಡುವ ಅಧಿಕಾರದ ಅನುಸರಣೆ ಎಂದು ಭಾವಿಸುತ್ತದೆ? ಯಾವುದು ನ್ಯಾಯದ ಸಿದ್ಧಾಂತಗಳ ತಳಹದಿಯ ಮೇಲಿನ ವಿದೇಶಾಂಗ ನೀತಿಯ ಪರವಾಗಿ ವಾದಿಸುವವರಿಂದ ಬೆಂಬಲ ಪಡೆಯುವ ಸಾಧ್ಯತೆ ಇದೆ? ನಿಮ್ಮ ಅನಿಸಿಕೆಯಂತೆ ಅಮೇರಿಕಾವು ಅನುಸರಿಸಬೇಕಾದ ನೀತಿ ಯಾವುದು?

- ಕೇವಲ ಅಭಿವೃದ್ಧಿಗೆ ಮಾತ್ರ ಆರ್ಥಿಕ ನೆರವನ್ನು ನೀಡಿ, ಮತ್ತು ಆರ್ಥಿಕ ಮತ್ತು ರಕ್ಷಣೆಯನ್ನು ಬೆಂಬಲಿಸುವ ಕಾರ್ಯಕ್ರಮಗಳನ್ನು ಪ್ರತ್ಯೇಕಿಸಿ. ನಿರ್ದಿಷ್ಟವಾಗಿ, ಇಸ್ರೇಲ್, ಈಜಿಪ್ಟ್, ಗ್ರೀಸ್, ಟರ್ಕಿ, ಮತ್ತು ಪೋರ್ಚುಗಲ್ ದೇಶಗಳಿಗೆ ಆರ್ಥಿಕ ಬೆಂಬಲವನ್ನು ಕಡಿತಗೊಳಿಸಿ, ಮತ್ತು ಸಬ್ ಸಹಾರನ್ ಆಫ್ರಿಬಕಾ ಮತ್ತು ಕೆರಿಬಿಯನ್ ದೇಶಗಳಿಗೆ ಅಭಿವೃದ್ಧಿ ನೆರವನ್ನು ಹೆಚ್ಚಿಸಿ.
- ರಾಜಕೀಯ ಬಹುತ್ವವಾದ, ಮುಕ್ತ ಉದ್ಯಮ, ಮಾನವ ಹಕ್ಕುಗಳ ಪಾಲನೆ, ಮತ್ತು ಪರಿಸರ ಪೂರಕವಾದ ಅಭಿವೃದ್ಧಿಯಂತಹ ಮಾನದಂಡಗಳ ನಿಟ್ಟಿನಲ್ಲಿ ಆರ್ಥಿಕ ನೆರವು ನೀಡುವುದು.
- ನೆರವನ್ನು ಉಪಯೋಗಿಸುವ ಸರಕಾರದ ಸಾಮರ್ಥ್ಯದ ಬದಲಾಗಿ ಅಗತ್ಯಕ್ಕನುಗುಣವಾಗಿ ನೆರವನ್ನು ನಿರ್ಧರಿಸುವುದು.
- ಅಮೇರಿಕಾದ ಅಭಿವೃದ್ಧಿ ನೆರವನ್ನು ಅಂತಾರಾಷ್ಟ್ರೀಕರಣಗೊಳಿಸುವುದು.

ಚಟುವಟಿಕೆ

ರಾಜಕೀಯ ವಿಜ್ಞಾನದ ಪಾಠವನ್ನು ವಿನ್ಯಾಸಗೊಳಿಸುವುದು

ಈ ಹಿಂದಿನ ಭಾಗದಲ್ಲಿ ಚರ್ಚಿಸಲಾದ ಅನುಪ್ರಯೋಗ ಕ್ಷೇತ್ರಗಳಲ್ಲಿ ಒಂದನ್ನು ಆಯ್ಕೆ ಮಾಡಿ: ದುರ್ಲಭ ಸಂಪನ್ಮೂಲಗಳ ಹಂಚಿಕೆ, ವರ್ತನೆಗಳ ನಿಯಂತ್ರಣ, ಅಥವಾ ರಾಷ್ಟ್ರೀಯ ಹಿತಾಸಕ್ತಿಯ ರಕ್ಷಣೆ. ಈ ಕ್ಷೇತ್ರಗಳಲ್ಲಿ ಯಾವುದಾದರೂ ಒಂದಕ್ಕೆ ಸಂಬಂಧಿಸಿರುವ ಚರ್ಚಾಂಶಗಳಿಗಾಗಿ ದಿನಪತ್ರಿಕೆ ಸುದ್ದಿನಿಯತಕಾಲಿಕೆಗಳನ್ನು ನೋಡಿ. ಅಂತಹ ಚರ್ಚಾಂಶವು ಆಯ್ಕೆ, ನ್ಯಾಯ, ಮತ್ತು ಅಧಿಕಾರದಂತಹ ಪರಿಕಲ್ಪನೆಗಳನ್ನು ಹೇಗೆ ಒಳಗೊಂಡಿದೆ ಎನ್ನುವುದು ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಒಂದು ಪಠ್ಯ ಯೋಜನೆಯನ್ನು ರೂಪಿಸಿ.

ಅಧ್ಯಾಯವನ್ನು ಕುರಿತ ಪರ್ಯಾಲೋಚನೆ

ರಾಜಕೀಯವನ್ನು ವಿವರಿಸುವಾಗ ಸಾಮಾನ್ಯವಾಗಿ ಕ್ರೀಡೆಯ ರೂಪಕವನ್ನು ಬಳಸಲಾಗುತ್ತದೆ. ರಾಜಕಾರಣಿಗಳೇ ಸ್ವತಃ ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ಕ್ರೀಡೆಯ ರೂಪಕವನ್ನು ಬಳಸುತ್ತಾರೆ. ನಿಮ್ಮ ಅನಿಸಿಕೆಯಂತೆ ಅಂತಹ ರೂಪಕಗಳು ರಾಜಕೀಯವನ್ನು ಕುರಿತು ಯೋಚಿಸುವ ಸೂಕ್ತ ರೀತಿಯೇ? ಏಕೆ ಅಥವಾ ಏಕಲ್ಲ? ರಾಜಕೀಯದ ಬಗ್ಗೆ ನಿಮಗಿರುವ ಅಭಿಪ್ರಾಯವನ್ನು ಬಿಂಬಿಸುವ ಉಪಮೆಯನ್ನು ಯೋಚಿಸಿ.

## ಪರಾಮರ್ಶನಗಳು:


Aristotle. *Politics*. Trans. E. Barker. New York: Oxford University Press, 1962.

Association for Supervision and Curriculum Development. *Public Schools of Choice*. ASCD Issues Analysis. Alexandria, Va.: ASCD, 1990.

Augustine, Saint. *City of God against the Pagans*. Trans. W. M. Green. Cambridge, Mass.: Harvard University Press, 1964.

Buehrig, E. H., ed. *Essays in Political Science*. Bloomington, Ind.: Indiana University Press, 1966.

Corwin, E. S. *The President: Office and Powers*. New York: New York University Press, 1940.

Crick, B. *The American Science of Politics: Its Origins and Conditions*. Berkeley and Los Angeles: University of California Press, 1959.

Deutsch, K. W. *Politics and Government: How People Decide Their Fate*. 3rd ed. Boston: Houghton Mifflin, 1980.

Easton, D. *The Political System: An Inquiry into the State of Political Science*. New York: Knopf, 1953.

———. "The New Revolution in Political Science." *American Political Science Review* 63, no. 4 (December 1969): 1051–61.

Elazar, D. J. *American Federalism: A View from the States*. 3rd ed. New York: Harper & Row, 1984a.

———. "The American System as a Federal Democracy." In *Teaching about American Federal Democracy*, ed. S.L. Schechter. Philadelphia: Center for the Study of Federalism, 1984b.

Finifter, A. W., ed. *Political Science: The State of the Discipline*. Washington, D.C.: American Political Science Association, 1983.

Graham, G. J., and G. W. Carey. *The Post-Behavioral Era: Perspectives on Political Science*. New York: David McKay, 1972.

*Great Decisions 1991*. New York: Foreign Policy Association, 1991.

Gunnell, J. G. "Political Science: Promise and Practice." In *Social Studies and Social Sciences: A Fifty-Year Perspective*, ed. S. P. Wronski and D. H. Bragaw, 59-70. Washington, D.C.: National Council for the Social Studies, 1986.

Kennan, G. F. *American Diplomacy 1900–1950*. Chicago: University of Chicago Press, 1951.

Kissinger, H. A. *American Foreign Policy*, 3rd ed. New York: W. W. Norton, & Co., Inc., 1977.

Levy, L. W. *Original Intent and the Framers' Constitution*. New York: Macmillan, 1988.

Lipson, L. *The Great Issues of Politics: An Introduction to Political Science*, 6th ed. Englewood Cliffs, N.J.: Prentice Hall, 1981.

Louri, T. *The End of Liberalism: The Second Republic of the United States*, 2nd ed. New York: W. W. Norton, & Co., Inc., 1979.

Neustadt, R. *Presidential Power*. New York: John Wiley, 1976.

Patrick, J. J., and C. W. Keller. *Lessons on the Federalist Papers*. Bloomington, Ind.: Social Studies Development Center and Organization of American Historians, 1987.

Rawls, J. *A Theory of Justice*. Cambridge, Mass.: Harvard University Press, 1971.

Ricci, D. *The Tragedy of Political Science: Politics, Scholarship, and Democracy*. New Haven, Conn.: Yale University Press, 1984.

Ripley, R. B., and G. A. Franklin. *Congress, the Bureaucracy, and Public Policy*, 4th ed. Chicago: The Dorsey Press, 1987.

Schechter, S. L. *Foundations of Freedom: Citizenship Education*. Albany: New York State Bar Association, 1989.

Siedelman, R., and E. J. Harpman. *Disenchanted Realists: Political Science and the American Crisis, 1884–1984*. Albany: State University of New York Press, 1985.

Smith, H. *The Capital Power Game: How Washington Works*. New York: Ballantine Books, 1988.

Sorensen, T. C. *Decision-Making in the White House: The Olive Branch or the Arrows*. New York: Columbia University Press, 1963.

Spanier, J. *American Foreign Policy Since World War II*, 10th ed. New York: Holt, Rinehart, and Winston, 1985.

Storing, H. J., ed. *Essays on the Scientific Study of Politics*. New York: Holt, Rinehart, and Winston, 1962.

Tocqueville, A., de. *Democracy in America*. Trans. Henry Reeve. New York: Schocken Books, 1962.

Voeglin, E. *The New Science of Politics*. Chicago: University of Chicago Press, 1952.

## Teaching Resources

*American Government Simulations*. Garden City, N.Y.: Focus Media, 1992. Computer simulations.

American Political Science Association, 1527 New Hampshire Avenue, NW, Washington, DC 20036.

*Authority* and *Justice*. Calabasas, Calif.: Center for Civic Education, 1990. CCE (5146 Douglas Fir Road, Calabasas, CA 91302) also sponsors a Constitution competition.

Council for the Advancement of Citizenship, One Dupont Circle, Suite 520, Washington, DC 20036.

*Decisions, Decisions*. Watertown, Mass.: Tom Snyder Productions. Computer simulations.

*Education for Freedom*. Denver: First Amendment Congress, 1991. The First Amendment Congress (1445 Market Street, Suite 320, Denver, CO 80202) also publishes a free newsletter.

Engle, S., and A. Ochoa. *Education for Democratic Citizenship*. New York: Teachers College Press, 1988.

*Great Decisions*. New York: Foreign Policy Association. Published annually. The Foreign Policy Association (729 Seventh Avenue, New York, NY 10019) also publishes other resources.

Ketcham, R., et al. *Participation in Government: Making a Difference*. Littleton, Mass.: Copley Publishing Group, 1988.

McKenna, G., and S. Feingold. *Taking Sides: Clashing Views on Controversial Political Issues*. Guilford, Conn.: Dushkin, 1992.

*National Issues Forum*. Dubuque, Iowa: Kendall-Hunt. Published annually.

Patrick, J. J., and C. W. Keller. *Lessons on the Federalist Papers*. Bloomington, Ind.: Social Studies Development Center and Organization of American Historians, 1987.

Patrick, J. J., and R. C. Remy. *Lessons on the Constitution*. Boulder, Colo.: Social Science Education Consortium; Washington, D.C.: Project '87, 1985.

*Perspectives*. Arlington, Va.: Close Up Foundation, 1990.

*Powers of the Government*. Warren, N.J.: Optical Data, 1992. Videodiscs.

*Public Issues Series*. Boulder, Colo.: Social Science Education Consortium, 1988–1993.

Starr, I. *Justice: Due Process of Law*. Minneapolis: West Publishing, 1981.

Turner, M. J., and S. Lake. *U.S. Government: Resource Book for Secondary Schools*. Santa Barbara, Calif.: ABC-Clio, 1989.

*Update on Law-Related Education*. Chicago: American Bar Association. Published 3 times yearly.

Zola, J. R., and J. P. Zola. *Teaching about Democracy*. Boulder, Colo.: Hal Clarke Press, 1989.